ಫೆಬ್ರವರಿ 2017 ಸಂಚಿಕೆ – 7 ಸಂಪುಟ – 32

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .......... 2

ನೋಟುಗಳ ಅಮಾನ್ಯತೆ; ನಂತರದ ವಿದ್ಯಮಾನ .......... 3
* **ಅರುಣ್ ಜೇಟ್ಲಿ**

ನಗದಿನಿಂದ ಹಿತ ಮಿತ ನಗದಿಗೆ .......... 6
* **ಪ್ರವಾಕರ್ ಸಾಹೂ ಮತ್ತು ಅಮೋಘ್ ಅರೋರ**

ಸೈಬರ್ ಭದ್ರತೆ; ಸವಾಲು, ಪರಿಹಾರ .......... 11
* **ಡಾ. ಬಿ. ಎಂ. ಮೆಹೆಟ್ರೊ**

ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ 'ನಗದುರಹಿತ' ಪರ್ವ .......... 15
* **ಸಮೀರ್ ಸೌರಭ್**

ಚುನಾವಣೆ; ಕಾಳಧನಕ್ಕೆ ನೋಟು ಅಮಾನ್ಯದ ಅಂಕುಶ .......... 20
* **ಎಸ್. ವೈ. ಖುರೇಶಿ**

ಕಡಿಮೆ ನಗದು; ಅಂತಾರಾಷ್ಟ್ರೀಯ – ಭಾರತ ಚಿತ್ರಣ .......... 24
* **ಅರ್ಪಿತಾ ಮುಖರ್ಜಿ ಮತ್ತು ತನು ಎಂ. ಗೋಯಲ್**

ಪಾವತಿಯ ವ್ಯವಸ್ಥೆ – ಕನಿಷ್ಠ ನಗದಿನ ಆರ್ಥಿಕತೆ .......... 28
* **ಜಿ. ರಘುರಾಜ್**

ಪುನರ್‌ಮಾನ್ಯೀಕರಣ: ನಗದುರಹಿತ ಆರ್ಥಿಕತೆಯತ್ತ ಹೆಜ್ಜೆ .......... 33
* **ಡಿ.ಎಸ್. ಮಲ್ಲಿಕ್**

ಅಂಕೀಕರಣದ ಮೂಲಕ ಗ್ರಾಮೀಣ ಆರ್ಥಿಕತೆ ಬಲವರ್ಧನೆ .. 37
* **ಸಂದೀಪ್ ದಾಸ್**

ನಗದುರಹಿತ ವ್ಯವಹಾರಗಳ ಅನುಕೂಲಗಳು .......... 40
* **ಬಿ.ಆರ್. ರವೀಂದ್ರನಾಥ್**

ಗಮನ ಸೆಳೆದಿರುವ ಬೆಂಗಳೂರು ಒನ್ .......... 45
* **ಹರತೀಸುತ**

ಮನ್ ಕೀ ಬಾತ್ .......... 48
* **ಕೃಪೆ : ಆಕಾಶವಾಣಿ ಬೆಂಗಳೂರು.**

ನಿಮಗಿದು ತಿಳಿದಿದೆಯೇ? .......... 51

ವಾರ್ತಾ ವಿಶೇಷ .......... 52

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**
Log on to
http://publicationsdivision.nic.in/,
in collaboration with bharatkosh.gov.in

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.

# ಯೋಜನಾ

ಮುಖ್ಯ ಸಂಪಾದಕರ ಲೇಖನಿಯಿಂದ

## ಸಂಪಾದಕೀಯ




ಪ್ರಧಾನಮಂತ್ರಿಯವರು ನವೆಂಬರ್, 8 2016 ರ ರಾತ್ರಿ, 500 ಮತ್ತು 1000 ರೂಪಾಯಿ ಮುಖಬೆಲೆಯ ನೋಟುಗಳನ್ನು ಅಮಾನ್ಯಗೊಳಿಸುತ್ತಿರುವ ವಿಷಯ ಪ್ರಕಟಿಸಿದಾಗ ದೇಶದ ಜನತೆ ಒಮ್ಮೆ ದಿಗ್ಭ್ರಮೆಯಿಂದ ಸ್ತಂಭೀಭೂತವಾಯಿತು. ಈ ಕ್ರಮದ ಮುಖ್ಯ ಉದ್ದೇಶ, ಕಪ್ಪು ಹಣ, ಭ್ರಷ್ಟಾಚಾರ ಮತ್ತು ನಕಲಿ ಹಣದ ಪಿಡುಗನ್ನು ತೊಡೆದುಹಾಕುವುದಾಗಿತ್ತು.

ಭಾರತದಲ್ಲಿ ಈ ಹಿಂದೆ ಎರಡು ಬಾರಿ ಅಂದರೆ 1946 ಹಾಗೂ 1978ರಲ್ಲಿ ಕೆಲ ಮುಖಬೆಲೆಯ ನೋಟುಗಳನ್ನು ಅಮಾನ್ಯಗೊಳಿಸಲಾಗಿದೆ. ಆದರೆ, ಈ ಎರಡೂ ಸಂದರ್ಭಗಳಲ್ಲಿ ಭಾರತದ ಆರ್ಥಿಕತೆ ಈಗಿರುವಷ್ಟು ಪ್ರಚ್ಛನ್ನ ಸ್ಥಿತಿಯಲ್ಲಿರಲಿಲ್ಲ. ಆಗಿನ ಸಂದರ್ಭಕ್ಕೆ ಹೋಲಿಸಿದರೆ ಅತಿ ಹೆಚ್ಚಿನ ಮುಖಬೆಲೆಯ ನೋಟುಗಳ ಚಲಾವಣೆ ಅಮಾನ್ಯಗೊಳಿಸಲಾಗಿತ್ತು; ಇಂತಹ ನೋಟುಗಳು ಧನಿಕರ ಬಳಿ ಮಾತ್ರ ಇದ್ದವು. ಹೀಗಾಗಿ ಇವುಗಳ ಅಮಾನ್ಯತೆಯ ಬಿಸಿ ಜನಸಾಮಾನ್ಯರಿಗೆ ತಟ್ಟಲಿಲ್ಲ. ಆದರೆ, ಇತ್ತೀಚಿಗಿನ ಅಮಾನ್ಯತೆ ಪ್ರಕಟಣೆ ವ್ಯಾಪಕ ಪರಿಣಾಮ ಉಂಟುಮಾಡಿತು. 500 ಮತ್ತು 1000 ಮುಖಬೆಲೆಯ ನೋಟುಗಳು ಅತ್ಯಧಿಕ ಪ್ರಮಾಣದಲ್ಲಿ ಜನಸಾಮಾನ್ಯರಲ್ಲೂ ಚಲಾವಣೆಯಲ್ಲಿದ್ದು, ಅಮಾನ್ಯತೆಯ ಪ್ರಕಟಣೆ ಪರಿಣಾಮವಾಗಿ ಒಮ್ಮಿಂದೊಮ್ಮೆಲೆ, ದಿನನಿತ್ಯದ ಹಾಲು, ತರಕಾರಿ, ಹಣ್ಣು-ಹಂಪಲುಗಳನ್ನು ಕೊಳ್ಳಲೂ ಪರದಾಡುವಂತಾಯಿತು. ಶುಲ್ಕಗಳನ್ನು ಹೇಗೆ ಸಂದಾಯ ಮಾಡಬೇಕು; ಸಂಬಳವನ್ನು ಹೇಗೆ ವಿತರಿಸಬೇಕು/ಪಡೆಯಬೇಕು ಮುಂತಾದವು ಜನಸಾಮಾನ್ಯರ ಕಾಳಜಿಯ ವಿಷಯವಾಯಿತು. ಬ್ಯಾಂಕು ಮತ್ತು ಎಟಿಎಂಗಳಲ್ಲಿ ನಗದಿನ ಲಭ್ಯತೆ ಕೊರತೆಯುಂಟಾಗಿ ಜನರ ಪರದಾಟ ತೀವ್ರವಾಯಿತು. ಹಳೆಯ ನೋಟುಗಳನ್ನು ಬ್ಯಾಂಕಿಗೆ ಹಾಕಲು, ಹಳೆಯ ನೋಟುಗಳನ್ನು ಕೊಟ್ಟು ಹೊಸ ನೋಟುಗಳನ್ನು ಪಡೆಯಲು, ಒಂದು ರೀತಿಯ ಆತಂಕ ಸ್ಥಿತಿಯೂ ಕಂಡುಬಂದಿತು.

ಇವೆಲ್ಲ ಪರದಾಟಗಳ ನಡುವೆ, ಜನಸಾಮಾನ್ಯರಿಗೆ ತಂದ ಸಮಾಧಾನದ ವಿಷಯ ಎಂದರೆ, ಈ ಕ್ರಮದ ಹಿಂದಿರುವ ಉದ್ದೇಶ, ಅದು ಕಪ್ಪುಹಣವನ್ನು ಬಯಲಿಗೆಳೆಯುವುದು ಮತ್ತು ಭಯೋತ್ಪಾದನೆಗೆ ಒದಗುತ್ತಿದ್ದ ಹಣಕಾಸು ತಡೆಗಟ್ಟುವುದು. ಈ ಕ್ರಮ ಭ್ರಷ್ಟಾಚಾರ, ಕಾಳಧನ ಮತ್ತು ಖೋಟಾ ನೋಟುಗಳ ಚಲಾವಣೆ ವಿರುದ್ಧ ಹೋರಾಡುವಲ್ಲಿ ಜನತೆಯ ಕೈಗಳನ್ನು ಬಲಪಡಿಸುತ್ತದೆಯೆಂದು ಪ್ರಧಾನಮಂತ್ರಿಯವರು ಭಾಷಣದಲ್ಲಿ ಹೇಳಿದರು. ಕಪ್ಪುಹಣದ ಆರ್ಥಿಕತೆಯಿಂದ ಉಂಟಾಗುವ ತೊಂದರೆಯಿಂದ ಬಳಲುತ್ತಿದ್ದ ಮತ್ತು ಭಯೋತ್ಪಾದಕ ಸಂಘಟನೆಗಳು ಬಳಸಿಕೊಳ್ಳುತ್ತಿದ್ದ ಕಪ್ಪು ಹಣದ ಪಿಡುಗಿನಿಂದ ಆತಂಕಕ್ಕೊಳಗಾಗಿದ್ದ ಜನಸಾಮಾನ್ಯರಿಗೆ, ಇಂತಹ ಚಟುವಟಿಕೆಗಳಿಗೆ ಇತಿಶ್ರೀ ಹಾಡಲು ಸರ್ಕಾರ ಕೈಗೊಂಡ ಕ್ರಮ ಸಂತಸ ತಂದಿತು.

ಹೆಚ್ಚಿನ ಮುಖಬೆಲೆಯ ನೋಟುಗಳ ಅಮಾನ್ಯತೆಯ ಹಿಂದಿನ ಮತ್ತೊಂದು ಉದ್ದೇಶ ನಗದುರಹಿತ ಆರ್ಥಿಕತೆಗೆ ಬುನಾದಿ ಹಾಕುವುದು. ಇದರಲ್ಲಿ ಹಣಕಾಸು ವಹಿವಾಟು ಪಾರದರ್ಶಕವಾಗಿರುತ್ತದೆ; ಎಲ್ಲ ವಹಿವಾಟುಗಳನ್ನು ಸುಲಭವಾಗಿ ಕಂಡುಹಿಡಿಯಬಹುದು. ಇದರಿಂದ ದೇಶದ್ರೋಹಿ ಚಟುವಟಿಕೆಯಲ್ಲಿರುವ ಭಯೋತ್ಪಾದಕ ಸಂಘಟನೆಗಳಿಗೆ ದೊರಕುವ ನೆರವಿನ ಬಗ್ಗೆಯೂ ಮಾಹಿತಿ ದೊರಕುತ್ತದೆ; ಅದೇ ವೇಳೆ ಜನರ ಹಣ ಬ್ಯಾಂಕಿನಲ್ಲಿ ಸುರಕ್ಷಿತವಾಗಿರುತ್ತದೆ, ಸರ್ಕಾರಕ್ಕೆ ಹಣದ ಪುನರಾವರ್ತನೆ ಚಲಾವಣೆ ಬಗ್ಗೆ ಮಾಹಿತಿ ದೊರಕುತ್ತಿರುತ್ತದೆ. ಅಗತ್ಯವಿರುವವರಿಗೆ ಸಾಲ ಸೌಲಭ್ಯ ನೀಡಲು ಮತ್ತು ಅಭಿವೃದ್ಧಿ ಕೆಲಸಗಳನ್ನು ಯೋಜಿಸಲು ಸಹಾಯವಾಗುತ್ತದೆ.

ಆದರೆ, ದೇಶದ ಅಪಾರ ಪ್ರಮಾಣದ ಜನಸಂಖ್ಯೆ ಅಶಿಕ್ಷಿತರಾಗಿರುವಾಗ ಮತ್ತು ಡಿಜಿಟಲ್ ವಹಿವಾಟು ನಡೆಸಲು ವಿಶೇಷವಾಗಿ ಗ್ರಾಮೀಣ ಭಾಗದಲ್ಲಿ ಸೂಕ್ತ ಸೌಲಭ್ಯಗಳು ಇಲ್ಲದಿರುವ ಸಂದರ್ಭದಲ್ಲಿ ಸಂಪೂರ್ಣ ನಗದುರಹಿತ ಆರ್ಥಿಕತೆ ಸೃಜಿಸುವುದು ಅಸಾಧ್ಯ. ಆದ್ದರಿಂದ ಈಗ ಮಿತ ನಗದಿನ ಆರ್ಥಿಕತೆ ಅಂದರೆ, ಕೆಲ ವಹಿವಾಟುಗಳನ್ನು ನಗದಿನಲ್ಲಿ, ಉಳಿದ ಹಲವನ್ನು ಡಿಜಿಟಲ್ ಪಾವತಿ ಮೂಲಕ ಸಾಧಿಸಲು ಪ್ರಯತ್ನಿಸಲಾಗುತ್ತಿದೆ. ಡಿಜಿಟಲ್ ಪಾವತಿ ಮಾಡುವಂತಹ ಗ್ರಾಹಕರಿಗೆ ಹಾಗೂ ಅವುಗಳನ್ನು ತೆಗೆದುಕೊಳ್ಳುವ ವ್ಯಾಪಾರಸ್ಥರಿಗೆ ಪ್ರೋತ್ಸಾಹಕಗಳನ್ನೂ ಪ್ರಕಟಿಸಲಾಗುತ್ತಿದೆ.

ಮಿತ ನಗದಿನ ಆರ್ಥಿಕತೆ ಎದುರಿಸುತ್ತಿರುವ ಕಳವಳದ ಸಂಗತಿ ಎಂದರೆ, ಸೈಬರ್ ಅಪರಾಧಗಳು. ಡಿಜಿಟಲ್ ವ್ಯವಸ್ಥೆ, ನಗದನ್ನು ಹೊತ್ತು ತಿರುಗುವ ಜವಾಬ್ದಾರಿ ಇಲ್ಲವಾಗಿಸಿದರೂ, ಸೈಬರ್ ರಕ್ಷಣೆಯ ಅಪಾಯವನ್ನು ಎದುರಿಸುತ್ತಿದೆ; ಸೈಬರ್ ಅಪರಾಧಗಳನ್ನು ನಿವಾರಿಸಲು ಖಚಿತ ಪರಿಹಾರಗಳು ಇವೆ. ಬಹುತೇಕ ಸಂದರ್ಭಗಳಲ್ಲಿ ತಂತ್ರಜ್ಞಾನದಲ್ಲಿ ತೊಂದರೆ ಇರುವುದಿಲ್ಲ; ಆದರೆ, ಅದನ್ನು ಬಳಸುವಾಗ ತೋರುವ ಅಲಕ್ಷ್ಯ, ಅಪರಾಧಗಳಿಗೆ ಅವಕಾಶವೀಯುತ್ತದೆ. ಆದ್ದರಿಂದ ಸೈಬರ್ ರಕ್ಷಣಾ ಗುಣಮಟ್ಟವನ್ನು ಖಾತರಿಪಡಿಸುವ, ಕಠಿಣ ನೀತಿಯನ್ನು ತರುವ ಮತ್ತು ಅವುಗಳ ಬಳಕೆ ಬಗ್ಗೆ ಜನರಿಗೆ ತಿಳಿವಳಿಕೆ/ಶಿಕ್ಷಣ ನೀಡುವ ಅಗತ್ಯವಿದೆ.

ವಿವಿಧ ರಾಷ್ಟ್ರಗಳು ಆರ್ಥಿಕತೆಯ ಅಂಕೀಕರಣ/ಡಿಜಿಟಲೀಕರಣಕ್ಕೆ ಮುಂದಾಗಿದ್ದು ಕೆಲವು ಸಂಪೂರ್ಣ ಯಶಸ್ಸು ಸಾಧಿಸಿವೆ, ಹಲವು ಯಶಸ್ಸಿನ ಹಾದಿಯಲ್ಲಿವೆ. ಸ್ವೀಡನ್ ಸಂಪೂರ್ಣ ಯಶಸ್ಸು ಸಾಧಿಸಿದ ದೇಶವಾಗಿದೆ. ಅಂತರ್ಜಾಲದ ಲಭ್ಯತೆ ಇರದ, ಇದ್ದರೂ ಸೂಕ್ತವಾಗಿರದ, ಅಶಿಕ್ಷಿತರು, ನಿರಕ್ಷರಿಗಳು ಬಹು ಪ್ರಮಾಣದಲ್ಲಿ ಇರುವ ಭಾರತದಂತಹ ದೇಶದಲ್ಲಿ ಜನರಲ್ಲಿ ತಿಳಿವಳಿಕೆಯನ್ನು ಎಷ್ಟರ ಪ್ರಮಾಣದಲ್ಲಿ ಮೂಡಿಸಲಾಗುತ್ತದೆ ಎಂಬುದರ ಮೇಲೆ ಯಶಸ್ಸು ಅವಲಂಬಿಸಿದೆ. ಸೈಬರ್ ಭದ್ರತೆ ವಿಚಾರದಲ್ಲಿ ಪರಿಣಾಮಕಾರಿ ನೀತಿ, ವ್ಯಾಪಕವಾಗಿ ಜನರಲ್ಲಿ ಅರಿವು, ಶಿಕ್ಷಣದ ಮೂಲಕ, ಭಾರತ ಅಂಕೀಕರಣ ಆರ್ಥಿಕತೆಯಲ್ಲಿ ಜಾಗತಿಕ ಪಾತ್ರ ವಹಿಸಬಲ್ಲದು. ❑

# ನೋಟುಗಳ ಅಮಾನ್ಯತೆ; ನಂತರದ ವಿದ್ಯಮಾನ

* ಅರುಣ್ ಜೇಟ್ಲಿ




ಬ್ಯಾಂಕಿಂಗ್ ವ್ಯವಸ್ಥೆಯನ್ನು ಪ್ರವೇಶಿಸುತ್ತಿರುವ ಹಣವು ಅಧಿಕೃತ ವಹಿವಾಟಿಗೆ ಸಾಕ್ಷಿಯಾಗುತ್ತಿರುವುದರಿಂದ ಇದು ಅತ್ಯಧಿಕ ತೆರಿಗೆ ಸಂಗ್ರಹಕ್ಕೆ ದಾರಿ ಮಾಡಿಕೊಡಲಿದೆ. ಇದರ ಫಲವೆಂಬಂತೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರ್ಥಿಕ ಲಾಭವನ್ನು ಗಳಿಸಲು ಸಾಧ್ಯವಾಗುತ್ತದೆ. ದೇಶದ ಅರ್ಥ ವ್ಯವಸ್ಥೆಯನ್ನು ಡಿಜಿಟಲ್ ವಹಿವಾಟಿಗೆ ಕೊಂಡೊಯ್ಯುವ ಕೆಲಸ ನಿರಂತರ ಮುಂದುವರಿಯಬೇಕಿದೆ.

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು 500 ರೂ ಮತ್ತು 1,000 ರೂ. ಮುಖಬೆಲೆಯ ನೋಟುಗಳ ಕಾನೂನು ಬದ್ಧತೆ ಸಮಾಪ್ತಿ ನಿರ್ಧಾರ ಪ್ರಕಟಿಸಿ 2 ತಿಂಗಳಿಗಿಂತ ಹೆಚ್ಚಿನ ಕಾಲ ಸಂದಿದೆ. ಅದಾದ ತರುವಾಯ, ಅಧಿಕ ಮುಖಬೆಲೆಯ ಈ ಎರಡು ನಿರ್ದಿಷ್ಟ ನೋಟುಗಳು ಅಮಾನ್ಯಗೊಂಡಿವೆ. ದೇಶದ ಒಟ್ಟು ದೇಶೀಯ ಉತ್ಪನ್ನ 'ಜಿಡಿಪಿ'ಯಲ್ಲಿ 12.2% ಪ್ರಮಾಣದಲ್ಲಿದ್ದ ದೇಶದ 86% ಕರೆನ್ಸಿ (ನೋಟುಗಳು) ಹಣಕಾಸು ಮಾರುಕಟ್ಟೆಯಿಂದ ಹೊರಹೋದಂತಾಗಿದೆ. ಇವುಗಳನ್ನು ಹೊಸ ನೋಟುಗಳು ಬದಲಿಸಬೇಕಿವೆ. ಕೇಂದ್ರ ಸರ್ಕಾರದ ಈ ನಿರ್ಧಾರದ ಫಲವಾಗಿ, ನಿಸ್ಸಂಶಯವಾಗಿ ಗಮನಾರ್ಹವಾದ ತಾತ್ಕಾಲಿಕ ಪರಿಣಾಮಗಳು ಉಂಟಾಗಲಿವೆ. ನೋಟುಗಳ ಅಮಾನ್ಯ ಕ್ರಮದ ನಂತರ ಹಣಕಾಸು ಮಾರುಕಟ್ಟೆಯಲ್ಲಿ ಹೊಸ ನೋಟುಗಳ ಚಲಾವಣೆ ಶುರುವಾಗಿದೆ. ಕೇಂದ್ರ ಸರ್ಕಾರದ ನೋಟುಗಳ ಅಮಾನ್ಯ ನಿರ್ಧಾರ ಮತ್ತು ಅದರ ಪರಿಣಾಮಗಳ ತಾರ್ಕಿಕತೆಯನ್ನು ವಿಶ್ಲೇಷಿಸುವುದು ಉಪಯುಕ್ತವೆನಿಸುತ್ತದೆ.

### 1. ಕಾಳಧನದ ವಿರುದ್ಧ ಕ್ರಮಗಳು

ಪ್ರಸ್ತುತ ಸರ್ಕಾರ ಮೊದಲ ದಿನದಿಂದಲೂ ಕಾಳಧನ ಮತ್ತು ಛಾಯಾ ಆರ್ಥಿಕತೆ ವಿರುದ್ಧ ಸಮರ ಸಾರುತ್ತಾ ಬಂದಿದ್ದು, ಈ ನಿಟ್ಟಿನಲ್ಲಿ ಸರ್ಕಾರದ ನಿಲುವು ಮತ್ತು ನಡೆ ಸ್ಪಷ್ಟವಾಗಿದೆ. ಈ ದಿಸೆಯಲ್ಲಿ ಅದು ತೆಗೆದುಕೊಂಡ ಚೊಚ್ಚಲ ಕ್ರಮವಾಗಿ, ಸುಪ್ರೀಂ ಕೋರ್ಟ್ ನಿರ್ದೇಶನದಲ್ಲಿ ವಿಶೇಷ ತನಿಖಾ ತಂಡ 'ಎಸ್‌ಐಟಿ' ರಚಿಸಿತು. ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಬ್ರಿಸ್ಬೇನ್‌ನಲ್ಲಿ ನಡೆದ ಜಿ–20 ಶೃಂಗದಲ್ಲಿ ತೆರಿಗೆ ವಂಚನೆ ಮತ್ತು ಕಾಳಧನ ವಿಷಯವನ್ನು ಪ್ರಸ್ತಾಪಿಸಿದರು. ಕಾಳಧನದ ಬಗ್ಗೆ ಸಮಗ್ರ ಮಾಹಿತಿ ವಿನಿಮಯ ಮಾಡಿಕೊಳ್ಳಲು ಅಂತಾರಾಷ್ಟ್ರೀಯ ಸಮುದಾಯ ಸಹಕಾರ ನೀಡಬೇಕು ಎಂದು ಜಿ–20 ಶೃಂಗದ ಗಮನ ಸೆಳೆದಿದ್ದರು. ಮುಂದುವರಿದ ಭಾಗವಾಗಿ, ಭಾರತ ಅಮೆರಿಕದ ಜತೆಗೂ ಈ ವಿಷಯ ಕುರಿತು ಗಂಭೀರ ಚರ್ಚೆ ನಡೆಸಿತು. 2019ರಿಂದ ಅನ್ವಯವಾಗುವಂತೆ, ಕೇಂದ್ರ ಸರ್ಕಾರ ಸ್ವಿಜರ್‌ಲೆಂಡ್ ಜತೆ ತೆರಿಗೆ ಮಾಹಿತಿ ವಿನಿಮಯ ಒಪ್ಪಂದವನ್ನು ಮಾಡಿಕೊಂಡಿದೆ. ಭಾರತೀಯ ನಾಗರಿಕರು ಸ್ವಿಜರ್‌ಲೆಂಡ್‌ನಲ್ಲಿ ಹೊಂದಿರುವ ಬ್ಯಾಂಕ್ ಖಾತೆಗಳು, ಖಾತೆಗಳಲ್ಲಿರುವ ಠೇವಣಿ, ಆಸ್ತಿ ಮತ್ತು ತೆರಿಗೆ ಪಾವತಿಗೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದು ಈ ಒಪ್ಪಂದದಲ್ಲಿ ಸೇರಿದೆ. ಇದಲ್ಲದೆ, 1996 ರಿಂದಲೂ, ಮಾರಿಷಸ್ ಜತೆ ದ್ವಿತೆರಿಗೆ ವಂಚನೆ ಕುರಿತಂತೆ ಮರು ಸಂಧಾನ ನಡೆದಿತ್ತು. ಅದನ್ನು ಯಶಸ್ವಿಯಾಗಿ ಪರಿಷ್ಕರಿಸಲಾಯಿತು. ಇದೇ ರೀತಿಯ ಒಪ್ಪಂದಗಳನ್ನು ಸೈಪ್ರಸ್ ಮತ್ತು ಸಿಂಗಾಪುರ ರಾಷ್ಟ್ರಗಳ ಜತೆಗೂ ಪರಿಷ್ಕರಿಸಲಾಯಿತು. ದೇಶದ ಹೊರಗೆ ಹೊಂದಿರುವ ಅಕ್ರಮ ಸ್ವತ್ತಿನ ಪತ್ತೆಗಾಗಿ ರೂಪಿಸಿರುವ ಕಪ್ಪುಹಣ ನಿಯಂತ್ರಣ ಕಾಯಿದೆಯು ಕಾಳಧನಿಕರಿಗೆ 10 ವರ್ಷಗಳ ಕಠಿಣ ಜೈಲುಶಿಕ್ಷೆ ವಿಧಿಸುವ ಬಿಗಿ ನಿಯಮಗಳನ್ನು ರೂಪಿಸಿತು. ಕಾಳಧನಿಕರು ಹೊಂದಿರುವ ಅಕ್ರಮ ಸಂಪತ್ತಿನ ಘೋಷಣೆಗೆ ಕೇಂದ್ರ ಸರ್ಕಾರ ಗವಾಕ್ಷಿಯೊಂದನ್ನು ತೆರೆದು, ಅಕ್ರಮ ಸ್ವತ್ತಿನ

* ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರ ಖಾತೆ ಸಚಿವರು.

ವಿವರ ಘೋಷಿಸಿ, 60% ತೆರಿಗೆ ಪಾವತಿಸಲು ಅವಕಾಶ ಕಲ್ಪಿಸಿತು.

ಕೇಂದ್ರ ಸರ್ಕಾರ ರೂಪಿಸಿರುವ ಆದಾಯ ಘೋಷಣೆ ಯೋಜನೆ (ಐಡಿಎಸ್) 2016 ಅತ್ಯಂತ ಯಶಸ್ವಿಯಾಗಿದ್ದು, ಈ ಯೋಜನೆಯಲ್ಲಿ ಘೋಷಿಸುವ ಆದಾಯಕ್ಕೆ 45% ತೆರಿಗೆ ವಿಧಿಸಲಾಗುತ್ತಿದೆ. ಎರಡು ಲಕ್ಷ ರೂಪಾಯಿಗಿಂತ ಹೆಚ್ಚಿನ ನಗದು ವಹಿವಾಟಿಗೆ ಪ್ಯಾನ್ ಕಾರ್ಡ್ ಒದಗಿಸುವುದನ್ನು ಕಡ್ಡಾಯ ಮಾಡಿರುವ ಕೇಂದ್ರ ಸರ್ಕಾರದ ಕ್ರಮವು ಕಪ್ಪು ಹಣದ ಬಳಕೆಗೆ ಸಂಪೂರ್ಣ ಕಡಿವಾಣ ಹಾಕಿದೆ. 1988ರಲ್ಲಿ ರೂಪಿಸಿರುವ ಬೇನಾಮಿ ಆಸ್ತಿ ಕಾಯಿದೆಯು ಜಾರಿಯಾಗಿರಲಿಲ್ಲ. ಇದೀಗ ಸರ್ಕಾರ ಈ ಕಾಯಿದೆಗೆ ತಿದ್ದುಪಡಿ ತಂದು, ಜಾರಿಗೊಳಿಸಿದೆ. ಸರಕು ಮತ್ತು ಸೇವಾ ತೆರಿಗೆ 'ಜಿಎಸ್‌ಟಿ' ಸದ್ಯದಲ್ಲೆ ಜಾರಿಯಾಗಲು ನಿಗದಿಯಾಗಿದ್ದು, ಇದು ಪರೋಕ್ಷ ತೆರಿಗೆ ಆಡಳಿತವನ್ನು ಉತ್ತಮಗೊಳಿಸುವ ಜತೆಗೆ, ತೆರಿಗೆ ವಂಚನೆಯನ್ನು ಪರಿಣಾಮಕಾರಿಯಾಗಿ ತಡೆಯುವ ದಕ್ಷಕ್ರಮವಾಗಲಿದೆ. ತೆರಿಗೆ ವಂಚನೆ ಮತ್ತು ಕಾಳಧನ ನಿಯಂತ್ರಣದಲ್ಲಿ ಅಧಿಕ ಮುಖಬೆಲೆಯ ನೋಟುಗಳ ಅಮಾನ್ಯ ಕ್ರಮವು ಸಹ ಬಹುದೊಡ್ಡ ಸುಧಾರಣಾ ಕ್ರಮವಾಗಿದೆ.

### 2. ಹಣಕಾಸು ವಹಿವಾಟಿನ ಹೊಸ ಪರಿಸ್ಥಿತಿ

ದೇಶದಲ್ಲಿರುವ 125 ಕೋಟಿಗಿಂತ ಅಧಿಕ ಜನಸಂಖ್ಯೆಯ ಪೈಕಿ ಒಟ್ಟು 3.7 ಕೋಟಿ ಜನರು 2015-16ರಲ್ಲಿ ಆದಾಯ ತೆರಿಗೆ ವಿವರ ಸಲ್ಲಿಸಿದ್ದಾರೆ. ಈ ಪೈಕಿ 99 ಲಕ್ಷ ಮಂದಿ ವಾರ್ಷಿಕ 2.5 ಲಕ್ಷ ರೂ.ಗಿಂತ ಒಳಗಿನ ಆದಾಯ ವಿವರ ಘೋಷಿಸಿದ್ದಾರೆ. ಈ ವರ್ಗದವರು ಸರ್ಕಾರದ ತೆರಿಗೆ ವಿನಾಯಿತಿಗೆ ಒಳಪಡುತ್ತಾರೆ. 1.95 ಕೋಟಿ ಜನರು ವಾರ್ಷಿಕ 5 ಲಕ್ಷ ರೂ. ಒಳಗಿನ ಆದಾಯ ವಿವರ ಘೋಷಿಸಿದ್ದಾರೆ. 52 ಲಕ್ಷ ಮಂದಿ 5ರಿಂದ 10 ಲಕ್ಷ ರೂ. ವರೆಗೆ ಆದಾಯ ವಿವರ ಸಲ್ಲಿಸಿದ್ದಾರೆ. 24 ಲಕ್ಷ ಜನರು ಮಾತ್ರ 10 ಲಕ್ಷ ರೂ. ಗಿಂತ ಹೆಚ್ಚಿನ ವಾರ್ಷಿಕ ಆದಾಯ ವಿವರ ಪ್ರಕಟಿಸಿದ್ದಾರೆ. ಈ ಅಂಕಿಅಂಶಗಳನ್ನು ಗಮನಿಸಿದರೆ, ಭಾರತ ಇನ್ನೂ ತೆರಿಗೆ ಆದಾಯ ಸಂಗ್ರಹದಲ್ಲಿ ಹಿಂದೆಬಿದ್ದಿದೆ ಎಂಬುದು ಗೋಚರವಾಗುತ್ತದೆ. ಭಾರತದಲ್ಲಿ ಇನ್ನೂ ತೆರಿಗೆ ಅನುಸರಣಾ ಸಮಾಜ



ನಿರ್ಮಾಣವಾಗಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತಿದೆ.

ಬಡತನ ನಿರ್ಮೂಲನೆ, ರಾಷ್ಟ್ರೀಯ ಭದ್ರತೆ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕಾದರೆ ಕೇಂದ್ರ ಸರ್ಕಾರಕ್ಕೆ ಆರ್ಥಿಕ ಸಂಪನ್ಮೂಲ ಅತ್ಯಗತ್ಯ. ಆದರೆ, ದೇಶದಲ್ಲಿ ತೆರಿಗೆ ಅನುಸರಣೆಯ ಪ್ರಮಾಣ ತೀರಾ ಕಡಿಮೆ ಇರುವುದರಿಂದ ಇದು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅಡ್ಡಿ ಉಂಟು ಮಾಡುತ್ತಿದೆ. ಏಳು ದಶಕಗಳ ಕಾಲ ಭಾರತದ ಹಣಕಾಸಿನ ವಹಿವಾಟು ಪರಿಸ್ಥಿತಿಯು ಬಹುತೇಕ ನಗದು ಮತ್ತು ಚೆಕ್ ರೂಪದಲ್ಲೇ ನಡೆಯುತ್ತಾ ಬಂದಿತ್ತು. "ಪಕ್ಕಾ" ಮತ್ತು "ಕಚ್ಚಾ" ಖಾತೆಗಳೇ ದೈನಂದಿನ ವ್ಯವಹಾರದ ಭಾಗವಾಗಿತ್ತು. ತೆರಿಗೆ ವಂಚನೆ ಅನೈತಿಕತೆಯ ನಡೆ ಎಂದು ಪರಿಗಣಿಸಿರಲೇ ಇಲ್ಲ. ಅದು ಸಹ ಜೀವನದ ಒಂದು ಮಾರ್ಗದಂತಾಗಿತ್ತು. ಆದರೆ, ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ದೇಶದ ಹಣಕಾಸು ವಹಿವಾಟಿನ ಪರಿಸ್ಥಿತಿಯನ್ನು ಬದಲಿಸಲು ತೆಗೆದುಕೊಂಡ ಮಹತ್ವದ ನಿರ್ಧಾರವು ಪರಿವರ್ತನೆಯ ಪರ್ವಕ್ಕೆ ಕಾರಣವಾಗುತ್ತಿದೆ. ಭಾರತೀಯರ ದೈನಂದಿನ ವೆಚ್ಚ ಮಾಡುವ ಶೈಲಿಯನ್ನೇ ಅದು ಬದಲಿಸತೊಡಗಿದೆ. ಆದರೆ, ಈ ರೀತಿಯ ಹಠಾತ್ ನಿರ್ಧಾರಗಳು ಸಹಜವಾಗಿ ಸಾಮಾಜಿಕ ವ್ಯವಸ್ಥೆಯ ಮೇಲೆ ಅಡ್ಡಿ ಉಂಟುಮಾಡುತ್ತದೆ. ವಾಸ್ತವವಾಗಿ ಎಲ್ಲಾ ಸುಧಾರಣೆಗಳು ತಕ್ಷಣದ ಮಟ್ಟಿಗೆ ಅಡಚಣೆ ಉಂಟು ಮಾಡುವುದು ಸಹಜ. ಆದರೆ, ದೀರ್ಘಕಾಲದಲ್ಲಿ ಸಮಾಜದಲ್ಲಿ ಬೇರುಬಿಟ್ಟಿರುವ ಜಡತ್ವದ ಅನುಸರಣೆಗಳನ್ನು ಖಂಡಿತಾ ಬದಲಾಯಿಸುತ್ತವೆ. ನೋಟುಗಳ ಅಮಾನ್ಯ ಕ್ರಮವು ಸಹ ಇದೇ ರೀತಿಯ ಸುಧಾರಣಾ ಕ್ರಮ. ಅದು ಪ್ರಾಮಾಣಿಕರನ್ನು ಸಂರಕ್ಷಿಸಿ, ಅಪ್ರಾಮಾಣಿಕರನ್ನು ಶಿಕ್ಷೆಗೆ ಗುರಿ ಮಾಡಲಿದೆ.

### 3. ನಗದು ಅರ್ಥವ್ಯವಸ್ಥೆಯ ವ್ಯತಿರಿಕ್ತ ಪರಿಣಾಮಗಳು

ಕಾಗದ ನೋಟುಗಳು ಶೂನ್ಯ ಬಡ್ಡಿಯ ಅನಾಮಿಕ ಬೇರರ್ ಬಾಂಡ್ ಆಗಿದೆ. ಹೆಸರು, ಇತಿಹಾಸವಿರದ ನಗದು ಇದ್ದೂ, ಇಲ್ಲದೆಯೂ ಅಪರಾಧಗಳು ಸಂಭವಿಸಬಹುದು. ಅದರೆ, ಹಣಕಾಸು ಮಾರುಕಟ್ಟೆಯಲ್ಲಿ ಸಿಕ್ಕಾಪಟ್ಟೆ ನಗದು ಹರಿದಾಡುವುದರಿಂದ ಭೂಗತ ಆರ್ಥಿಕ ಚಟುವಟಿಕೆಗಳ ನಾನಾ ಕೃತ್ಯಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಇದರ ಪ್ರತಿಕೂಲ ಪರಿಣಾಮಗಳೆಂಬಂತೆ, ತೆರಿಗೆ ವಂಚನೆ ಪ್ರಕರಣಗಳು ಹೆಚ್ಚಿ ಸರ್ಕಾರದ ಆದಾಯ ಕೈತಪ್ಪುತ್ತದೆ. ಕೊನೆಗೆ, ದೇಶದ ಬಡವರು ಮತ್ತು ನೊಂದವರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ತೆರಿಗೆ ಹಣ ದೊರಕದೆ ತೆರಿಗೆ ವಂಚನೆದಾರರು ಇನ್ನೂ ಶ್ರೀಮಂತರಾಗುತ್ತಾರೆ. ನಗದು ಹರಿವು ಹೆಚ್ಚಳವು ಹವಾಲಾ ಮಾರ್ಗದ ಮೂಲಕ ತೆರಿಗೆ ಉಳಿಸುವ ಸ್ವರ್ಗತಾಣಗಳಿಗೆ ಹೋಗಲು ದಾರಿ ಮಾಡಿಕೊಡುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ, ರಹಸ್ಯ ವ್ಯವಹಾರಗಳು ಸುಗಮವಾಗಿ ನಡೆಯಲು ಕಾಗದ ಕರೆನ್ಸಿ ನೆರವಾಗುತ್ತಿದೆ. ಭ್ರಷ್ಟಾಚಾರ, ಲಂಚ, ಖೋಟಾ ನೋಟುಗಳ ಚಲಾವಣೆ, ಭಯೋತ್ಪಾದನೆ ಮುಂತಾದ ಅನೇಕ ಕುಕೃತ್ಯಗಳಿಗೆ ನಗದು ಅತ್ಯಂತ ಸುಲಭ ಮಾಧ್ಯಮವಾಗಿದೆ. ನೈತಿಕತೆಯ ಮತ್ತು ಅಭಿವೃದ್ಧಿ ಹೊಂದಿದ ಸಮಾಜಗಳು ತಂತ್ರಜ್ಞಾನದ ನೆರವಿನೊಂದಿಗೆ ಬ್ಯಾಂಕಿಂಗ್ ಮತ್ತು ಡಿಜಿಟಲ್ ಅರ್ಥವ್ಯವಸ್ಥೆಯತ್ತ ಸ್ಥಿರವಾಗಿ ಹೊರಳುತ್ತಿವೆ. ನಗದು ಬಳಕೆಯನ್ನು ಹಂತ ಹಂತವಾಗಿ ಕಡಿಮೆ ಮಾಡುತ್ತಿವೆ. ಕಾಗದ ಕರೆನ್ಸಿಯು ನಾನಾ ರೀತಿಯ ದುರುಪಯೋಗ, ದುರ್ಲಾಭಗಳಿಗೆ ದಾರಿ ಮಾಡಿಕೊಡುತ್ತದೆ. ಸರ್ಕಾರ ತೆರಿಗೆ ವಂಚಕರಿಂದ ಹೆಚ್ಚಿನ ತೆರಿಗೆ ಸಂಗ್ರಹಿಸಲು ಶಕ್ತವಾದರೆ, ಎಲ್ಲಾ ವರ್ಗದ ಜನರಿಗೂ ಕಡಿಮೆ ಪ್ರಮಾಣದಲ್ಲಿ ತೆರಿಗೆ ವಿಧಿಸಲು ಸಾಧ್ಯವಾಗುತ್ತದೆ. ನಗದು ಬಳಕೆ ಕಡಿಮೆ ಮಾಡುವುದರಿಂದ ಅಪರಾಧಗಳನ್ನು ಸಂಪೂರ್ಣ ತಡೆಯಲು ಸಾಧ್ಯವಾಗದು. ಆದರೆ, ಅಂತಹ ಕೃತ್ಯಗಳಿಗೆ ಗಂಭೀರ ಹಿನ್ನೆಡೆ ಉಂಟಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಕಾಗದ ಕರೆನ್ಸಿ ನಿಯಂತ್ರಿಸಲು

ಸರ್ಕಾರಗಳು ಸಕ್ರಿಯ ಕ್ರಮಗಳನ್ನು ಕೈಗೊಳ್ಳುವ ತನಕ ನಗದು ಸಂಗ್ರಹ ಕಣ್ಮರೆಯಾಗುವುದಿಲ್ಲ ಎಂಬುದನ್ನು ಎಲ್ಲಾ ರಾಜ್ಯಗಳು ತೋರಿಸುತ್ತಿವೆ.

**4. ನೋಟುಗಳ ಅಮಾನ್ಯ ನಿರ್ಧಾರದ ಪರಿಮಾಣಗಳು**

ಅಧಿಕ ಮುಖಬೆಲೆಯ ಹಳೆಯ ನೋಟುಗಳ ಚಲಾವಣೆ ನಿಲ್ಲಿಸಿದ ಪ್ರಧಾನಿ ಅವರ ದಿಟ್ಟ ನಿರ್ಧಾರದ ಹಿಂದೆ ಧೈರ್ಯ ಮತ್ತು ಶಕ್ತಿ ಎರಡೂ ಅಡಗಿದೆ. ನಿರ್ಧಾರದ ಅನುಷ್ಠಾನದಲ್ಲಿ ನೋವು ಇದೆ. ಈ ಮಹತ್ವದ ನಿರ್ಧಾರವು ಅಲ್ಪಾವಧಿಯಲ್ಲಿ ಭಾರೀ ಟೀಕೆ ಮತ್ತು ಅನಾನುಕೂಲಗಳಿಗೆ ಎಡೆಮಾಡಿದೆ. ಹಳೆಯ ಕರೆನ್ಸಿ ಚಲಾವಣೆ ನಿಲ್ಲಿಸಿ, ಹೊಸ ನೋಟುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿರುವ ಕ್ರಮದಿಂದ ಆರ್ಥಿಕ ಚಟುವಟಿಕೆಗಳು ಕಡಿಮೆಯಾಗಿವೆ. ಎಲ್ಲಕ್ಕಿಂತ ಮುಖ್ಯವಾಗಿ, ದೇಶದ ಅರ್ಥವ್ಯವಸ್ಥೆಯ ಪ್ರಗತಿಯ ಮೇಲೆ ತಾತ್ಕಾಲಿಕ ಪರಿಣಾಮಗಳನ್ನು ಸೃಷ್ಟಿಸಿದೆ. ನೋಟುಗಳ ಅಮಾನ್ಯ ನಿರ್ಧಾರದ ಹಿಂದೆ ಉನ್ನತ ಮಟ್ಟದ ರಹಸ್ಯ ಕಾಪಾಡಲಾಗಿತ್ತು. ಹೊಸ ನೋಟುಗಳ ಮುದ್ರಣ, ಬ್ಯಾಂಕ್‌ಗಳು, ಅಂಚೆ ಕಚೇರಿಗಳು ಸೇರಿದಂತೆ ನಾನಾ ಹಣಕಾಸು ಸಂಸ್ಥೆಗಳಿಗೆ ನೋಟುಗಳ ಹಂಚಿಕೆ ಮತ್ತಿತರ ಎಲ್ಲಾ ಕಾರ್ಯಗಳನ್ನು ರಹಸ್ಯವಾಗಿ ನಡೆಸಲಾಗಿತ್ತು.

ವಾಸ್ತವವೆಂದರೆ, ನೋಟುಗಳ ಅಮಾನ್ಯ ಕ್ರಮದ ನಂತರ ಅಧಿಕ ಮುಖಬೆಲೆಯ ಬೃಹತ್ ಪ್ರಮಾಣದ ಹಣ ಬ್ಯಾಂಕ್‌ಗಳಿಗೆ ಠೇವಣಿ ರೂಪದಲ್ಲಿ



ಹರಿದುಬಂತು. ಬ್ಯಾಂಕ್‌ಗಳಿಗೆ ಬಂದಾಕ್ಷಣ ಇದು ಕಾನೂನುಬದ್ಧ ನಗದಾಗಲಿಲ್ಲ. ಬ್ಯಾಂಕ್ ಠೇವಣಿಗಳಲ್ಲಿ ಇದ್ದಾಕ್ಷಣ ಕಪ್ಪು ಹಣ ತನ್ನ ಬಣ್ಣ ಬದಲಿಸಿಕೊಳ್ಳದು. ವ್ಯತಿರಿಕ್ತ ಎಂಬಂತೆ, ಅದು ತನ್ನ ಅನಾಮಧೇಯತೆಯನ್ನು ಕಳೆದುಕೊಂಡಿತು. ಸರ್ಕಾರ ಈ ಹಣದ ವಾರಸುದಾರರನ್ನು ಪತ್ತೆ ಹಚ್ಚುವ ಕಾರ್ಯ ಶುರು ಮಾಡಿತು. ಕಂದಾಯ ಇಲಾಖೆ ಅಂತಿಮವಾಗಿ ಈ ಹಣವನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಿತು. ಆದಾಯ ತೆರಿಗೆ ಕಾಯಿದೆಗೆ ಕೆಲವೊಂದು ತಿದ್ದುಪಡಿ ತಂದು, ಸ್ವಯಂಘೋಷಿತ ಕಪ್ಪುಹಣಕ್ಕೆ ಒಂದು ಪ್ರಮಾಣದ ತೆರಿಗೆ ದರ ಮತ್ತು ಅಘೋಷಿತ ಹಣಕ್ಕೆ ಮತ್ತೊಂದು ಹಂತದ ತೆರಿಗೆ ದರ ವಿಧಿಸಲಾಗಿದೆ.

**5. ಇಂದು ಪರಿಸ್ಥಿತಿ ಹೇಗಿದೆ?**

ನೋಟುಗಳ ಅಮಾನ್ಯ ಕ್ರಮದಿಂದ ಎದುರಾಗಿದ್ದ ಅನಾನುಕೂಲಗಳು ಮತ್ತು ನೋವು ಇದೀಗ ಕಡಿಮೆಯಾಗುತ್ತಾ ಬಂದಿದೆ. ದೇಶದ ಅರ್ಥ ವ್ಯವಸ್ಥೆಯ ಚಟುವಟಿಕೆಗಳು ಸಹಜ ಸ್ಥಿತಿಯತ್ತ ಮರಳುತ್ತಿದೆ. ಆರ್ಥಿಕ ಪ್ರಗತಿಗೆ ಪೂರಕವಾಗಿ ಗ್ರಾಹಕರಿಗೆ ಸಾಲ ಸೌಲಭ್ಯ ಒದಗಿಸಲು ಸಾಕಷ್ಟು ಪ್ರಮಾಣದಲ್ಲಿ ಹಣಕಾಸು ಲಭ್ಯವಾಗುತ್ತಿದೆ ಎಂದು ಬ್ಯಾಂಕ್‌ಗಳೇ ಒಪ್ಪಿಕೊಳ್ಳುತ್ತಿವೆ.

ಕಾಳಧನ ಮತ್ತು ಅಕ್ರಮ ಸಂಪತ್ತಿನ ಹಣವೀಗ ಬ್ಯಾಂಕ್‌ಗಳ ಪಾಲಿಗೆ ಅಲ್ಪ ವೆಚ್ಚದ ನಿಧಿಯಾಗಿ ಪರಿವರ್ತನೆಯಾಗಿದೆ. ಹಾಗಾಗಿ, ಬ್ಯಾಂಕ್‌ಗಳು ಗ್ರಾಹಕರ ವಿವಿಧ ಸಾಲ ಯೋಜನೆಗಳ ಬಡ್ಡಿ ದರಗಳನ್ನು ಇಳಿಸುತ್ತಿವೆ. ಮತ್ತಷ್ಟು ಇಳಿಕೆಯಾಗುವ ಎಲ್ಲಾ ನಿರೀಕ್ಷೆ ಇದೆ. ಹಣಕಾಸು ಮಾರುಕಟ್ಟೆಯಲ್ಲಿ ಬೃಹತ್ ಪ್ರಮಾಣದಲ್ಲಿ ಹರಿದಾಡುತ್ತಿದ್ದ ಲೆಕ್ಕ ಸಿಗದ ಲಕ್ಷಾಂತರ ಕೋಟಿ ರೂಪಾಯಿ ಹಣ ಇದೀಗ ಬ್ಯಾಂಕಿಂಗ್ ವ್ಯವಸ್ಥೆಗೆ ಬಂದು ಸೇರಿದೆ. ಅನಾಮಧೇಯ ಹಣದ ಮಾಲಿಕರು ಈಗ ತೆರಿಗೆ ಕಟ್ಟುವಂತಾಗಿದೆ. ಅಡ್ಡ ದಾರಿಗಳಿಗೆ ಕಡಿವಾಣ ಬಿದ್ದಿದೆ. ಇವೆಲ್ಲವುಗಳ ಪರಿಣಾಮವಾಗಿ, ಬ್ಯಾಂಕಿಂಗ್ ವಹಿವಾಟಿನ ಗಾತ್ರ ಹಿಗ್ಗುತ್ತಿದ್ದು, ದೇಶದ ಅರ್ಥ ವ್ಯವಸ್ಥೆಯ ವ್ಯಾಪ್ತಿ ವಿಸ್ತಾರಗೊಳ್ಳುತ್ತಿದೆ.

ಮಧ್ಯಮ ಮತ್ತು ದೀರ್ಘಾವಧಿಯಲ್ಲಿ ದೇಶದ ಒಟ್ಟು ಆಂತರಿಕ ಉತ್ಪನ್ನ 'ಜಿಡಿಪಿ' ಸ್ವಚ್ಛವಾಗಿ, ಬೃಹದಾಕಾರವಾಗಿ ಬೆಳೆಯಲಿದೆ. ಬ್ಯಾಂಕಿಂಗ್ ವ್ಯವಸ್ಥೆಯನ್ನು ಪ್ರವೇಶಿಸುತ್ತಿರುವ ಹಣವು ಅಧಿಕೃತ ವಹಿವಾಟಿಗೆ ಸಾಕ್ಷಿಯಾಗುತ್ತಿರುವುದರಿಂದ ಇದು ಅತ್ಯಧಿಕ ತೆರಿಗೆ ಸಂಗ್ರಹಕ್ಕೆ ದಾರಿ ಮಾಡಿಕೊಡಲಿದೆ. ಇದರ ಫಲವೆಂಬಂತೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರ್ಥಿಕ ಲಾಭವನ್ನು ಗಳಿಸಲು ಸಾಧ್ಯವಾಗುತ್ತದೆ. ದೇಶದ ಅರ್ಥ ವ್ಯವಸ್ಥೆಯನ್ನು ಡಿಜಿಟಲ್ ವಹಿವಾಟಿಗೆ ಕೊಂಡೊಯ್ಯುವ ಕೆಲಸ ನಿರಂತರ ಮುಂದುವರಿಯಬೇಕಿದೆ. ❑


## ಯೋಜನಾ ಚಂದಾದಾರರಲ್ಲಿ ಕೋರಿಕೆ

ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ತಮ್ಮ **ಇ-ಮೇಲ್, ಫೋನ್ ನಂಬರ್ ಸೇರಿದಂತೆ, ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಒಳಗೊಂಡ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು.** ಚಂದಾದಾರರು, ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಸರಿ ಇದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. **ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ.** ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ-ಅಂಚೆ : yojanakannada@yahoo.com ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)

ಆಯಾಮ

# ನಗದಿನಿಂದ ಹಿತ ಮಿತ ನಗದಿಗೆ

* ಪ್ರವಾಕರ್ ಸಾಹೂ
** ಅಮೋಘ್ ಅರೋರ

ನೂರಕ್ಕೆ ನೂರರಷ್ಟು ವ್ಯವಹಾರವನ್ನು ನಗದುರಹಿತವಾಗಿಸುತ್ತೇವೆ ಎಂಬುದು ಸಾಧ್ಯವಾಗದ ಮಾತು; ಆದರೆ ಕಡಿಮೆ ನಗದು ವ್ಯವಹಾರದ ಸಮಾಜವನ್ನು ರೂಪಿಸುವತ್ತ ಮೊದಲ ಹೆಜ್ಜೆ ಇಟ್ಟು ನಂತರ ಹಂತ ಹಂತವಾಗಿ ಹಾಗೂ ನಿಧಾನವಾಗಿ ನಗದುರಹಿತ ಸಮಾಜವನ್ನು ರೂಪಿಸಬಹುದು.

ಭಾರತ ಸರ್ಕಾರ 2016 ರ ನವೆಂಬರ್ 8 ರಂದು 500 ಮತ್ತು 1000 ರೂಪಾಯಿಗಳ ಮುಖ ಬೆಲೆಯ ನೋಟುಗಳನ್ನು ಅಮಾನ್ಯಗೊಳಿಸಿತು. ದೇಶದಲ್ಲಿರುವ ನೋಟಿನ ಚಲಾವಣೆಯಲ್ಲಿ ಈ ಎರಡು ನೋಟುಗಳ ಮೊತ್ತ ಸುಮಾರು ಶೇಕಡಾ 85 ಕ್ಕಿಂತ ಹೆಚ್ಚು. ನೋಟು ಅಮಾನ್ಯೀಕರಣ ದೇಶದಲ್ಲಿ ನಗದಿನ ತೀವ್ರ ಕೊರತೆಯನ್ನು ಸೃಷ್ಟಿಸಿದ್ದರಿಂದ ಸರ್ಕಾರ ಎಲೆಕ್ಟ್ರಾನಿಕ್ ಪಾವತಿ ಮತ್ತು ವರ್ಗಾವಣೆಗೆ ಕಡ್ಡಾಯವಾಗಿ ಮೊರೆ ಹೋಗುವಂತೆ ಮಾಡಿತು. ಭಯೋತ್ಪಾದನೆಗೆ ಹಣದ ನೆರವು ನೀಡುವುದನ್ನು ನಿರ್ಬಂಧಿಸಲು ಮತ್ತು ಕಪ್ಪು ಹಣ ಸೃಷ್ಟಿಯಾಗುವುದನ್ನು ತಡೆಯುವ ಮುಖ್ಯ ಉದ್ದೇಶದಿಂದ ಜಾರಿಗೆ ತಂದ ನೋಟು ಅಮಾನ್ಯೀಕರಣ ಅಂತಿಮವಾಗಿ ನಗದುರಹಿತ ಆರ್ಥಿಕತೆಗೆ ರಹದಾರಿಯಾಯಿತು. 2016 ರ ನವೆಂಬರ್ 26 ರಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ತಮ್ಮ "ಮನ್ ಕಿ ಬಾತ್" ಕಾರ್ಯಕ್ರಮದಲ್ಲಿ ಭಾರತ ನಗದುರಹಿತ ಸಮಾಜವಾಗಬೇಕೆಂಬುದು ತಮ್ಮ ಕನಸು ಎಂದು ಹೇಳಿದರು. ಅವರ ಕನಸು ಸರಿ, ಆದರೆ ಶೇಕಡಾ 100 ರಷ್ಟು ನಗದುರಹಿತ ಸಮಾಜ ನಿರ್ಮಾಣ ಸಾಧ್ಯವಾಗದು. ಆದರೆ ಕಡಿಮೆ ನಗದು ವ್ಯವಹಾರದ ಸಮಾಜದತ್ತ ಹೆಜ್ಜೆ ಹಾಕಲು ಪ್ರಾರಂಭಿಸಿದರೆ ನಗದು ರಹಿತ ಸಮಾಜ ರೂಪಿಸುವುದು ಅಷ್ಟು ಕಷ್ಟವಾಗಲಿಕ್ಕಿಲ್ಲ.

ನೋಟು ಅಮಾನ್ಯೀಕರಣದ ವ್ಯಾಖ್ಯಾನ ಬದಲಾದಂತೆ, ಸರ್ಕಾರ ನಗದುರಹಿತ ಆರ್ಥಿಕತೆಯ ಆಶಯವನ್ನು ಬಲಗೊಳಿಸುತ್ತಿದೆ. ಕೇಂದ್ರ ಸರ್ಕಾರ 2014 ರಲ್ಲಿ ಜನ್‌ಧನ್ ಯೋಜನೆಯನ್ನು ಪ್ರಾರಂಭಿಸಿತು. 2016 ರ ಏಪ್ರಿಲ್ 20 ರ ವೇಳೆಗೆ ಈ ಯೋಜನೆಯಲ್ಲಿ 220 ಮಿಲಿಯನ್ ಖಾತೆಗಳನ್ನು ತೆರೆಯಲಾಯಿತು. 2016 ರ ಫೆಬ್ರುವರಿಯಲ್ಲಿ ಕಾರ್ಡುಗಳು ಮತ್ತು ಡಿಜಿಟಲ್ ಮುಖಾಂತರ ಹಣ ಪಾವತಿಸುವುದನ್ನು ಪ್ರೋತ್ಸಾಹಿಸಲು ನಿಯಮಾವಳಿಗಳನ್ನು ಸರ್ಕಾರ ಅನುಮೋದಿಸಿತು. ನಗದು ರೂಪದಲ್ಲಿ ಹಣ ಪಾವತಿಸುವ ಬಹು ದೊಡ್ಡ ವ್ಯವಸ್ಥೆಯನ್ನು ಪೇಮೆಂಟ್ ವ್ಯವಸ್ಥೆಗೆ ಬದಲಾಯಿಸಲು ಹೆಚ್ಚು ಒತ್ತು ಕೊಡಲಾಯಿತು. ಭ್ರಷ್ಟಾಚಾರ ಮತ್ತು ಕಪ್ಪುಹಣ ಸೃಷ್ಟಿಯನ್ನು ಕಡಿಮೆ ಮಾಡಲು ನಗದು ರೂಪದ ಪಾವತಿಯನ್ನು ಎಲೆಕ್ಟ್ರಾನಿಕ್ ವ್ಯವಸ್ಥೆಯ ಮುಖಾಂತರ ಪಾವತಿಸುವ ಸೌಲಭ್ಯಗಳನ್ನು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅಳವಡಿಸುವುದು ಬಹಳ ಮುಖ್ಯವಾಗುತ್ತದೆ.

ನಗದುರಹಿತ ಆರ್ಥಿಕ ವ್ಯವಸ್ಥೆಯು ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್, ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸಫರ್ ಅಥವಾ ಆನ್‌ಲೈನ್ ಖರೀದಿ ಮುಖಾಂತರ ನಡೆಯಬೇಕು. ನಗದುರಹಿತ ಆರ್ಥಿಕ ವ್ಯವಸ್ಥೆಯು ಕಾಗದದ ಹಣದಿಂದ ಡಿಜಿಟಲ್ ಹಣಕ್ಕೆ ಬದಲಾವಣೆಯಾಗುವ ಕ್ರಾಂತಿಕಾರಿ ಕ್ರಮವಾಗಿದ್ದು, ಈ ಕ್ರಮದಿಂದ ಆರ್ಥಿಕ ಕ್ಷೇತ್ರದಲ್ಲಿ ಪಾರದರ್ಶಕತೆ ಹೆಚ್ಚಾಗುತ್ತಾ ನಗದು ವ್ಯವಹಾರ ಕಡಿಮೆಯಾಗಿ ಕಪ್ಪುಹಣ ಸೃಷ್ಟಿಗೆ ಕಡಿವಾಣ ಬೀಳುತ್ತದೆ. ಎಲ್ಲ ರೀತಿಯ ಹಣಕಾಸಿನ ವ್ಯವಹಾರಗಳು– ಬಿಲ್‌ಗಳ ಪಾವತಿ ಇರಬಹುದು, ಹಣ್ಣುಗಳ ಖರೀದಿ ಇರಬಹುದು, ಬಸ್ ಅಥವಾ ಟ್ಯಾಕ್ಸಿ ಸಂಚಾರವಿರಬಹುದು ಯಾವ

* ಪ್ರಾಧ್ಯಾಪಕರು. ** ಸಂಶೋಧನಾರ್ಥಿ, ಆರ್ಥಿಕ ಬೆಳವಣಿಗೆ ಸಂಸ್ಥೆ. E-mail : * pravakarfirst@gmail.com ** amogh.arora04@yahoo.com

ವ್ಯವಹಾರವಾದರೂ ಕಾರ್ಡುಗಳು ಅಥವಾ ಡಿಜಿಟಲ್ ವ್ಯವಹಾರದ ಮುಖಾಂತರವೇ ಆಗಬೇಕು. ಜೇಬಿನಲ್ಲಿಟ್ಟುಕೊಳ್ಳುವ ಸಾಂಪ್ರದಾಯಿಕ ವಾಲೆಟ್ ಇದ್ದ ಹಾಗೆ ಇ-ವಾಲೆಟ್‌ನಲ್ಲಿ ನಗದನ್ನು ಇಟ್ಟುಕೊಳ್ಳುವ ಅಗತ್ಯ ಬರುವುದಿಲ್ಲ, ಇ-ವಾಲೆಟ್ ಬ್ಯಾಂಕಿನ ಅಕೌಂಟ್‌ಗೆ ನೇರವಾಗಿ ಸಂಪರ್ಕಿಸಿ ಅಲ್ಲಿಂದ ಹಣವನ್ನು ಕಡಿತಮಾಡಿಕೊಳ್ಳಲಾಗುತ್ತದೆ. ಇಂಟರ್‌ನೆಟ್ ಬ್ಯಾಂಕಿಂಗ್ ಮತ್ತು ಇತ್ತೀಚೆಗೆ ಬಂದಿರುವ ಯೂನಿಫೈಡ್ ಪೇಮೆಂಟ್ ಇಂಟರ್‌ಫೇಸ್ (ಯುಪಿಐ) ಗಳು ನಗದು ರಹಿತ ವ್ಯವಹಾರದ ನೇರ ವ್ಯವಸ್ಥೆಗಳಾಗಿವೆ. ಆದರೆ ಇ-ವಾಲೆಟ್ ಹೆಚ್ಚು ವ್ಯಾಪಕವಾಗಿದ್ದು ಹೆಚ್ಚು ಬಳಕೆಯಲ್ಲಿದೆ. ಸ್ಮಾರ್ಟ್ ಫೋನ್ ಬ್ಯಾಂಕಿಂಗ್ ವ್ಯವಸ್ಥೆ ಸಂಪೂರ್ಣವಾಗಿ ಜಾರಿಗೆ ಬಂದ ಮೇಲೆ ಕ್ರೆಡಿಟ್ ಕಾರ್ಡು ಮತ್ತು ಡೆಬಿಟ್ ಕಾರ್ಡುಗಳ ವ್ಯವಹಾರ ಅರ್ಥಹೀನವೆನಿಸುತ್ತದೆ ಮತ್ತು ಮೊಬೈಲ್ ಫೋನ್ ಕೋಡ್ ಎಟಿಎಂನಲ್ಲಿ ಹಣ ಪಡೆಯಲು ಸಾಕಾಗುವುದರಿಂದ ಕಾರ್ಡುಗಳ ಅಗತ್ಯವೇ ಬರುವುದಿಲ್ಲ.

### ನಗದುರಹಿತ ಆರ್ಥಿಕತೆಯ ಅನುಕೂಲಗಳು

ಭಾರತದ ಆರ್ಥಿಕ ಕ್ಷೇತ್ರ ವಿಶ್ವದಲ್ಲೇ ಅತಿ ವೇಗವಾಗಿ ಬೆಳೆಯುತ್ತಿದೆ, ಆದರೆ ಅದು ಕಪ್ಪುಹಣ, ಭ್ರಷ್ಟಾಚಾರ, ಭಯೋತ್ಪಾದನೆ, ಅಕ್ರಮ ಸಂಪತ್ತು ಮತ್ತಿತರ ಪಿಡುಗುಗಳಿಂದ ನರಳುತ್ತಿದೆ. ಕಪ್ಪುಹಣ ಮತ್ತು ಭ್ರಷ್ಟಾಚಾರದ ಹಿಡಿತವನ್ನು ಮಟ್ಟಹಾಕಲು, ಆಡಿಟ್ ಮತ್ತು ಜಾರಿ ನಿರ್ದೇಶನಾಲಯ ಮತ್ತಿತರ ಸಂಸ್ಥೆಗಳಿವೆ. ಆದರೆ ನಗದು ರಹಿತ ಆರ್ಥಿಕತೆ ಹೆಚ್ಚು ಹೆಚ್ಚು ಸಾಧುವಾದುದು. ಏಕೆಂದರೆ ಬಹುತೇಕ ಹಣಕಾಸಿನ ವ್ಯವಹಾರಗಳು ಇ-ವ್ಯವಸ್ಥೆಯಲ್ಲೇ ನಡೆಯುವುದರಿಂದ ಅವುಗಳನ್ನು ಪತ್ತೆಹಚ್ಚುವುದು ಸುಲಭ.

ಭಾರತದಲ್ಲಿ ಕೆಲವೇ ವ್ಯಕ್ತಿಗಳು ನಗದು ರಹಿತ ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದು, ಶೇಕಡಾ 10 ರಿಂದ 15 ರಷ್ಟು ಜನಸಂಖ್ಯೆ ಮಾತ್ರ ಇದರಲ್ಲಿ ತೊಡಗಿಕೊಂಡಿದೆ. ಈ ಸಂಖ್ಯೆ ಬ್ರೆಜಿಲ್ ಮತ್ತು ಚೀನಾದಲ್ಲಿ ಶೇಕಡಾ 40 ರಷ್ಟಿದೆ. ಇದರ ಮಧ್ಯೆ 2014 ರಲ್ಲಿ ಭಾರತದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯ ಹೊರಗೆ ಚಲಾವಣೆಯಲ್ಲಿರುವ ನೋಟುಗಳ ಸಂಖ್ಯೆ ದೇಶದ ಜಿಡಿಪಿಯ ಶೇಕಡಾ 11.1 ರಷ್ಟಿತ್ತು. ಇದು ಅಭಿವೃದ್ಧಿಹೊಂದುತ್ತಿರುವ



ದೇಶಗಳಾದ ರಷ್ಯಾ, ಬ್ರೆಜಿಲ್ ಮತ್ತು ಮೆಕ್ಸಿಕೊಗಿಂತ ಹೆಚ್ಚು. ಈ ಅಂಕಿಸಂಖ್ಯೆಗಳಿಂದ ತಿಳಿಯುವುದೇನೆಂದರೆ, ನಗದುರಹಿತ ಬಳಕೆದಾರರ ಮಾರುಕಟ್ಟೆಯನ್ನು ವಿಸ್ತರಿಸಲು ಅಗಾಧವಾದ ಅವಕಾಶವಿದೆ ಎಂಬುದು. ನಗದುರಹಿತ ವ್ಯವಹಾರ ಮಾಡುವವರ ವ್ಯಾಪ್ತಿಯನ್ನು ಅನುಕೂಲಕರವಾದ, ನಂಬಿಕಾರ್ಹವಾದ, ಸುರಕ್ಷತೆಯ ಮತ್ತು ಕೈಗೆ ನಿಲುಕುವ ದರದಲ್ಲಿ ಪಾವತಿ ಮಾಡುವ ವ್ಯವಸ್ಥೆಗಳು ಜಾರಿಗೆ ಬಂದರೆ ಇಲ್ಲಿಯವರೆಗೆ ಬ್ಯಾಂಕ್‌ನಲ್ಲಿ ವ್ಯವಹಾರ ಮಾಡದೆ ಇದ್ದವರನ್ನು ಬ್ಯಾಂಕ್ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಪ್ರಯತ್ನದಲ್ಲಿ ಅವರಿಗೆ ಸುಲಭವಾಗಿ ಸಾಲ ಸೌಲಭ್ಯಗಳು ಮತ್ತು ವಿಮಾ ಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗುತ್ತದೆ. ಇದು ಯಶಸ್ವಿಯಾಗಬೇಕಾದರೆ, ಬ್ಯಾಂಕ್‌ಗಳ ವ್ಯವಹಾರ ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವುದು ಮತ್ತು ಬ್ಯಾಂಕ್‌ಗಳ ಡಿಜಿಟಲ್ ಮೂಲಸೌಲಭ್ಯಗಳನ್ನು ಬಲಪಡಿಸುವುದು ಸವಾಲಿನ ಕೆಲಸವಾಗುತ್ತದೆ.

### ನಗದುರಹಿತ ಸಮಾಜ, ಸರ್ಕಾರ ಮತ್ತು ಸಾರ್ವಜನಿಕರ ಅನುಕೂಲತೆ

**ಪಾವತಿಗೆ ಅನುಕೂಲವಾದ ಮಾರ್ಗ:** ಪ್ರತಿಯೊಂದು ವ್ಯವಹಾರವು ನಿಜವಾಗಿಯೂ ನಗದುರಹಿತ ರೂಪದಲ್ಲಿ ನಡೆಯಲು ಪ್ರೋತ್ಸಾಹ ನೀಡುತ್ತದೆ. ನಗದುರಹಿತ ಆರ್ಥಿಕತೆ ಪ್ರತಿಯೊಬ್ಬರಿಗೂ (ಕಡಿಮೆ ಆದಾಯದವರನ್ನು ಹೊರತುಪಡಿಸಿ) ವ್ಯಾವಹಾರಿಕ ಖರ್ಚನ್ನು ಅದಷ್ಟು ಕಡಿಮೆ ಮಾಡುವುದು ಸೇರಿದಂತೆ ಅನೇಕ ಅನುಕೂಲಗಳನ್ನು ಒದಗಿಸುತ್ತದೆ.

**ಕಡಿಮೆ ರಿಸ್ಕ್:** ಸರಿಯಾದ ಸೈಬರ್ ಸೆಕ್ಯುರಿಟಿ ಇದ್ದರೆ ಆನ್‌ಲೈನ್‌ನಲ್ಲಿ ಪಾವತಿ ಮಾಡುವುದು ಅಪಾಯಕಾರಿಯಲ್ಲ, ಆದರೆ, ನಗದು ರೂಪದ ವ್ಯವಹಾರ ನಡೆಸುವಲ್ಲಿ ಯಾವಾಗಲು ಸುರಕ್ಷತೆಯ ಸಮಸ್ಯೆ ಕಾಡುತ್ತದೆ.

**ನೋಟು ಮುದ್ರಿಸುವ ವೆಚ್ಚ ಕಡಿಮೆಯಾಗುತ್ತದೆ:** ಹೊಸ ನೋಟುಗಳನ್ನು ಪ್ರಿಂಟ್ ಮಾಡುವುದು ಮತ್ತು ಹಳೆಯದಾದ ನೋಟುಗಳನ್ನು ಬದಲಾಯಿಸುವುದಕ್ಕೆ ಹೆಚ್ಚಿನ ಹಣಕಾಸು ಖರ್ಚಾಗುತ್ತದೆ. 2015 ರಲ್ಲಿ ನೋಟುಗಳನ್ನು ಮುದ್ರಿಸಲು ಆರ್‌ಬಿಐಗೆ ಸುಮಾರು 2700 ಕೋಟಿ ರೂಪಾಯಿ ಖರ್ಚಾಗಿದೆ. ನಗದುರಹಿತ ವ್ಯವಹಾರ ಜಾರಿಗೆ ಬಂದರೆ ನೋಟುಗಳ ಮುದ್ರಣದ ಖರ್ಚು ಗಣನೀಯವಾಗಿ ಕಡಿಮೆಯಾಗುತ್ತದೆ.

**ಅಪರಾಧ ಸಂಖ್ಯೆಗಳು ಕಡಿಮೆಯಾಗುತ್ತವೆ:** ಡ್ರಗ್ ವ್ಯವಹಾರ, ಭಯೋತ್ಪಾದನೆಗೆ ಹಣಕಾಸಿನ ನೆರವು ಮತ್ತು ಹಣವನ್ನು ಲಪಟಾಯಿಸುವುದು ಮುಂತಾದ ಅನೇಕ ಸಮಾಜ ವಿರೋಧಿ ಚಟುವಟಿಕೆಗಳು ಮತ್ತು ಕಾನೂನು ಬಾಹಿರ ಚಟುವಟಿಕೆಗಳು ನಗದು ಹಣದ ಮೂಲಕ ನಡೆಯುತ್ತವೆ. ನಗದುರಹಿತ ವ್ಯವಹಾರ ಜಾರಿಗೆ ಬಂದರೆ ಈ ಚಟುವಟಿಕೆಗಳು ನಡೆಯುವುದು ಬಹಳ ಕಷ್ಟವಾಗುತ್ತದೆ.

**ಬ್ಯಾಂಕಿಂಗ್ ಕ್ಷೇತ್ರಕ್ಕೆ ಒಳ್ಳೆಯದಾಗುತ್ತದೆ:** ಡಿಜಿಟಲ್ ಆರ್ಥಿಕತೆ ಬ್ಯಾಂಕಿಂಗ್ ಕ್ಷೇತ್ರಕ್ಕೆ ಒಳ್ಳೆಯದನ್ನು ಮಾಡುತ್ತದೆ. ಜನರು ಒಮ್ಮೆ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಗೆ ಹೊಂದಿಕೊಂಡರೆ ನಗದು ಹಣಕ್ಕೆ ಬೇಡಿಕೆ ಕಡಿಮೆಯಾಗುತ್ತದೆ ಮತ್ತು ಅದರ ಸಂಗ್ರಹವೂ ಕಡಿಮೆಯಾಗುತ್ತದೆ. ಹಾಗಾಗಿ ಬ್ಯಾಂಕ್‌ಗಳಲ್ಲಿ ಹೆಚ್ಚಿನ ಹಣ ಉಳಿದು ಉಳಿತಾಯಕ್ಕೆ ಅವಕಾಶವಾಗುತ್ತದೆ.

**ಪಾರದರ್ಶಕತೆ ಮತ್ತು ಉಸ್ತುವಾರಿ:** ನಗದುರಹಿತ ವ್ಯವಹಾರಗಳ ಉಸ್ತುವಾರಿ ನಡೆಸುವುದು ಸರ್ಕಾರಗಳಿಗೆ ಬಹಳ ಸುಲಭ. ತೆರಿಗೆ ವಂಚನೆ ಬಹಳ ಕಷ್ಟವಾಗುತ್ತದೆ ಹಾಗೂ ಸರ್ಕಾರಕ್ಕೆ ಆದಾಯ ಹೆಚ್ಚಾಗುತ್ತದೆ. ಕಳೆದೆರಡು ತಿಂಗಳುಗಳಲ್ಲಿ ದೇಶದಲ್ಲಿ ಸಣ್ಣ ಅಂಗಡಿಗಳಲ್ಲಿ ಮ್ತು ಸಣ್ಣಪುಟ್ಟ ವ್ಯವಹಾರ ಮಾಡುವವರು ಕಾರ್ಡುಗಳನ್ನು ಉಜ್ಜುವ ಯಂತ್ರಗಳನ್ನು ಅಳವಡಿಸಿಕೊಳ್ಳುವುದು ಹೆಚ್ಚಾಗಿ ಡಿಜಿಟಲ್ ವ್ಯವಹಾರ ಗಣನೀಯವಾಗಿ ವೃದ್ಧಿಸಿದೆ. ಇ-ವ್ಯವಹಾರ ನಡೆಸುವುದು ಗಣನೀಯವಾಗಿ ಹೆಚ್ಚಾಗಿ ಶೀಘ್ರವಾಗಿ

ಪಾವತಿ ಮಾಡಲು ಸಹಾಯವಾಗಿದ್ದು, ಇದು ದೇಶದ ಆರ್ಥಿತೆಯ ದೃಷ್ಟಿಯಿಂದ ಉತ್ತಮವಾದ ಬೆಳವಣಿಗೆಯಾಗಿದೆ. ಈ ಅವಧಿಯಲ್ಲಿ ಮೊಬೈಲ್ ವಾಲೆಟ್‌ಗಳ ಬಳಕೆ ವ್ಯಾಪಕವಾಗಿ ಹೆಚ್ಚಾಗಿದ್ದು, ದೇಶದ ಜನರು ಹೆಚ್ಚಿನ ಸಂಖ್ಯೆಯಲ್ಲಿ ನಗದು ವ್ಯವಹಾರದಿಂದ ಮೊಬೈಲ್ ವಾಲೆಟ್ ವ್ಯವಹಾರಕ್ಕೆ ನೇರವಾಗಿ ಬದಲಾವಣೆಯಾಗುವ ಸಾಧ್ಯತೆಗಳು ಹೆಚ್ಚಾಗಿವೆ. 2017 ರಲ್ಲಿ 10 ಬಿಲಿಯನ್ ಡಾಲರ್ ವ್ಯವಹಾರವನ್ನು ಮಾಡುವ ಸಾಧ್ಯತೆ ಇದೆ ಎಂದು "ಮೊಬಿಕ್‌ವಿಕ್' ಹೇಳಿಕೊಂಡಿದ್ದು ಈ ಅವಧಿಯಲ್ಲಿ 10 ಲಕ್ಷಕ್ಕಿಂತ ಹೆಚ್ಚು ವ್ಯಾಪರಸ್ಥರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲಾಗುತ್ತದೆ ಎಂದು ಆ ಸಂಸ್ಥೆ ತಿಳಿಸಿದೆ. ನಗದುರಹಿತ ಆರ್ಥಿಕತೆ ಅಥವಾ ಎಲೆಕ್ಟ್ರಾನಿಕ್ ವಹಿವಾಟಿನ ಕಡೆಗೆ ಹೋದರೆ ತೆರಿಗೆ ವಂಚನೆ ಕಡಿಮೆಯಾಗಿ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಪಾರದರ್ಶಕತೆ ಅವಕಾಶವಾದಾಗ ಕಪ್ಪುಹಣವನ್ನು ನಿರ್ಬಂಧಿಸಲು ಅವಕಾಶವಾಗುತ್ತದೆ. ಕೊನೆಗೆ ನಗದು ಹಣವನ್ನು ತೆಗೆದುಕೊಂಡು ಹೋಗುವುದು ಕಡಿಮೆಯಾಗುತ್ತದೆ ಮತ್ತು ಸಾಲ ಪಡೆದುಕೊಳ್ಳಲು ಹೆಚ್ಚು ಯೋಜನಾ ಬದ್ಧವಾದ ಹಾಗೂ ವ್ಯವಸ್ಥಿತವಾದ ವ್ಯವಸ್ಥೆ ಜಾರಿಗೆ ಬರುವುದರಿಂದ ದೇಶದ ಎಲ್ಲ ಸ್ತರದ ನಾಗರಿಕರನ್ನು ಆರ್ಥಿಕ ವ್ಯವಸ್ಥೆಯಲ್ಲಿ ಸೇರಿಸಿಕೊಳ್ಳಲು ಸಹಾಯವಾಗುತ್ತದೆ. ಈ ಬೆಳವಣಿಗೆಯಿಂದ ಸರ್ಕಾರ ಅಭಿವೃದ್ಧಿಗೆ ಹೆಚ್ಚಿನ ಹಣವನ್ನು ವ್ಯಯಮಾಡುವುದು ಹೆಚ್ಚಾಗುತ್ತದೆ ಮತ್ತು ಅದರ ಎಲ್ಲ ವ್ಯವಹಾರಗಳಲ್ಲಿ ಪಾರದರ್ಶಕತೆ ಹೆಚ್ಚಿ ಆದಾಯವೂ ಹೆಚ್ಚುತ್ತದೆ.

ಭಾರತದಂತಹ ಅಭಿವೃದ್ಧಿಶೀಲ ದೇಶ ನಗದುರಹಿತ ಆರ್ಥಿಕತೆಗೆ ಹೋಗುವುದರಿಂದ ಅನಾನುಕೂಲವೂ ಇದ್ದು, ಬಡವರಿಗೆ ನಗದುರಹಿತ ವ್ಯವಹಾರ ವ್ಯಾವಹಾರಿಕವಾಗಿ ಸಾಧುವಾಗುವುದಿಲ್ಲ. ನೋಟು ಅಮಾನ್ಯೀಕರಣದಿಂದ ಅಸಂಘಟಿತ ಮತ್ತು ಬ್ಯಾಂಕ್‌ಗಳಲ್ಲಿ ವ್ಯವಹಾರ ನಡೆಸದವರಿಗೆ ಬಹಳ ತೊಂದರೆಯಾಗಿದೆ. ಈ ಅಸಂಘಟಿತ ವಲಯ ನಗದುರಹಿತ ವಹಿವಾಟಿನತ್ತ ಹೆಜ್ಜೆ ಇಡಲು ಬಹಳ ಕಾಲಾವಕಾಶ ಬೇಕಾಗುತ್ತದೆ. ಪ್ರಾರಂಭದಲ್ಲಿ ನಗದುರಹಿತ ವ್ಯವಹಾರವನ್ನು ಬಳಸಿಕೊಳ್ಳಲು ಸ್ವಲ್ಪ ಕಷ್ಟವಾಗಬಹುದು, ಆದರೆ ಇದರಿಂದ ದೇಶ ಪಾರದರ್ಶಕವಾದ ಆರ್ಥಿಕತೆಯ ಕಡೆಗೆ ಮೊದಲ ಹೆಜ್ಜೆ



ಇಟ್ಟಂತಾಗುತ್ತದೆ. ನಗದು ವಹಿವಾಟಿನ ಕಾಲ ಮುಗಿದುಹೋಗುತ್ತದೆ ಎಂಬ ಆಲೋಚನೆ ಸರಿಯಲ್ಲ. ನಗದು ವ್ಯವಹಾರ ಎಂದೂ ನಶಿಸಿ ಹೋಗುವುದಿಲ್ಲ.

## ಕ್ರಮಗಳು

ನೋಟು ಅಮಾನ್ಯಗೊಳಿಸಿದ ತಕ್ಷಣ ಜನರು ನಗದು ಪಡೆದುಕೊಳ್ಳಲು ಬ್ಯಾಂಕ್‌ಗಳು ಮತ್ತು ಎಟಿಎಂಗಳ ಮುಂದೆ ಉದ್ದನೆಯ ಸರದಿ ಸಾಲಿನಲ್ಲಿ ನಿಂತುಕೊಳ್ಳುವುದನ್ನು ತಪ್ಪಿಸಲು ವಿವಿಧ ರೀತಿಯ ಡಿಜಲೀಕರಣವನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಲು ಸರ್ಕಾರ ಮುಂದಾಯಿತು.

**ಬಳಕೆದಾರರಿಗೆ ಲಕ್ಕಿ ಗ್ರಾಹಕ ಯೋಜನೆ, ವರ್ತಕರಿಗೆ ಡಿಜಿ ಧನ ವ್ಯಾಪಾರ ಯೋಜನೆಗಳು:** ಡಿಜಿಟಲ್ ವ್ಯವಸ್ಥೆಯಲ್ಲಿ ಪಾವತಿ ಮಾಡುವುದನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರ 2016 ರ ಡಿಸೆಂಬರ್ 25 ರಂದು ಡಿಜಿಟಲ್ ಲಾಟರಿ ಯೋಜನೆಗಳನ್ನು ಪ್ರಾರಂಭಿಸಿತು– ಬಳಕೆದಾರರಿಗೆ ಲಕ್ಕಿ ಗ್ರಾಹಕ ಯೋಜನೆ, ವ್ಯಾಪಾರಸ್ಥರಿಗೆ ಡಿಜಿ ಧನ ವ್ಯಾಪಾರ ಯೋಜನೆಗಳನ್ನು ಪ್ರಾರಂಭಿಸಲಾಯಿತು. ಈ ರೀತಿಯ ಪ್ರೋತ್ಸಾಹದಾಯಕವಾದ ಡಿಜಿಟಲ್ ಇಂಡಿಯಾ ಆಂದೋಳನ ಖಂಡಿತವಾಗಿಯೂ ದೇಶದ ಆರ್ಥಿಕ ಬೆನ್ನೆಲುಬನ್ನು ಬಲಪಡಿಸಿದೆ. ರೂಪೇ ಕಾರ್ಡುಗಳ ಮುಖಾಂತರ ಸಂಸ್ಕರಿಸಿದ ವಹಿವಾಟುಗಳನ್ನು ಮಾತ್ರ, ವ್ಯವಸ್ಥಿತವಾಗಿ ರೂಪಿತವಾದ ಹೆಚ್ಚುವರಿ ಸೇವಾ ಮಾಹಿತಿ (ಯುಎಸ್‌ಎಸ್‌ಡಿ), ಯುಪಿಐ ಮತ್ತು ಆಧಾರ ಆಧಾರಿತ ಪಾವತಿ ವ್ಯವಸ್ಥೆಗಳು ಈ ಯೋಜನೆಯ ಭಾಗವಾಗಿರುತ್ತವೆ.

**ವಿತ್ತೀಯ ಸಾಕ್ಷರತಾ ಅಭಿಯಾನ:** ಡಿಜಿಟಲ್ ಆರ್ಥಿಕತೆ ಮತ್ತು ನಗದುರಹಿತ ರೂಪಗಳಲ್ಲಿ ವ್ಯವಹಾರ ನಡೆಸುವುದನ್ನು ಜನರಲ್ಲಿ ಪ್ರೋತ್ಸಾಹಿಸುವದಕ್ಕಾಗಿ ವಿತ್ತೀಯ ಸಾಕ್ಷರತಾ ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಡಿಜಿಟಲ್ ವ್ಯವಹಾರವನ್ನು ಪ್ರೋತ್ಸಾಹಿಸಲು ಮತ್ತು ಅದರ ಬಗ್ಗೆ ತಿಳಿವಳಿಕೆ ಮೂಡಿಸುವುದು ಈ ಅಭಿಯಾನದ ಮುಖ್ಯ ಉದ್ದೇಶ. ಹಣವನ್ನು ವರ್ಗಾವಣೆ ಮಾಡುವಾಗ ಡಿಜಿಟಲ್ ಆಧಾರಿತ ನಗದುರಹಿತ ಅರ್ಥಿಕ ವ್ಯವಸ್ಥೆಯನ್ನು ಬಳಸುವಂತೆ ಕೇಂದ್ರ ಸರ್ಕಾರದ ಮಾನವ ಅಭಿವೃದ್ಧಿ ಸಚಿವಾಲಯ ನಾಗರಿಕರಲ್ಲಿ ವಿನಂತಿಸಿಕೊಂಡಿದೆ. ಉನ್ನತ ಶಿಕ್ಷಣ ಕ್ಷೇತ್ರದ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ನಗದು ಹಣವನ್ನು ಸ್ವೀಕರಿಸಬಾರದು ಮತ್ತು ನಗದುರಹಿತ ಕ್ಯಾಂಪಸ್‌ಗಳನ್ನು (ಅಂಗಡಿಗಳು, ಕ್ಯಾಂಟಿನ್‌ಗಳು ಮತ್ತು ಇತರೆ ಸೇವೆಗಳು) ರೂಪಿಸಬೇಕು ಎಂದು ವಿನಂತಿಸಿಕೊಂಡಿದೆ. ಈ ಮನವಿಯು ಅನೇಕ ಸಂಸ್ಥೆಗಳ ವಿದ್ಯಾರ್ಥಿಗಳು, ಬೋಧಕ ವರ್ಗಗಳನ್ನು ಪ್ರೋತ್ಸಾಹಿಸಿ ಈ ಆಂದೋಲನದಲ್ಲಿ ಭಾಗವಹಿಸುವಂತೆ ಮಾಡಿದೆ. ಈ ಮನವಿಗೆ, ಎಚ್‌ಆರ್‌ಡಿ ಪ್ರಾರಂಭಿಸಿರುವ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಂಡಿದ್ದಾರೆ ಮತ್ತು ಸಕಾರಾತ್ಮಕವಾದ ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ಕೊಟ್ಟಿರುವುದನ್ನು ನೋಡಿದರೆ ಜನರಲ್ಲಿ ಇದರ ಬಗ್ಗೆ ಎಷ್ಟರ ಮಟ್ಟಿಗೆ ಉತ್ಸಾಹ ಇದೆ ಎಂಬುದು ವ್ಯಕ್ತವಾಗುತ್ತದೆ.

**(ಬಿಹೆಚ್‌ಐಎಂ) ಹಣಕ್ಕಾಗಿ ಭಾರತ್ ಇಂಟರ್‌ಫೇಸ್:** ಆನ್‌ಲೈನ್‌ನಲ್ಲಿ ವ್ಯವಹಾರ ಸುಲಭವಾಗಲು ಪ್ರಧಾನ ಮಂತ್ರಿಗಳು 2016 ರ ಡಿಸೆಂಬರ್ 30 ರಂದು ಹೊಸ ಇ–ವಾಲೆಟ್ ಆಪ್ ಬಿಹೆಚ್‌ಐಎಂನ್ನು ಉದ್ಘಾಟಿಸಿದರು. ಆಧಾರ್ ಆಧರಿತ ಈ ಇ–ವಾಲೆಟ್ ಆಪ್ ತಮ್ಮ ಬ್ಯಾಂಕ್ ಅಕೌಂಟ್‌ನಿಂದ ನೇರವಾಗಿ ಡಿಜಿಟಲ್ ಪಾವತಿ ಮಾಡಲು ಅವಕಾಶ ಕಲ್ಪಿಸಿಕೊಡುತ್ತದೆ. ಅಕೌಂಟ್‌ದಾರನ ಫೋನ್ ನಂಬರಿಗೆ ಬ್ಯಾಂಕ್ ಅಕೌಂಟ್‌ಗೆ ಲಿಂಕ್ ಮಾಡಿ ಗುಂಡಿಯನ್ನು ಒತ್ತಿದರೆ ಹಣ ವರ್ಗಾವಣೆಯಾಗುತ್ತದೆ. ಆದರೂ, ಯುಪಿಐ ಆಧರಿತ ಬ್ಯಾಂಕ್ ಅಕೌಂಟ್‌ಗೆ ಈ ಆ್ಯಪ್‌ನ್ನು ಸರಿಹೊಂದಿಸಬಹುದಾದರೂ, ಒಂದೇ ಒಂದು ಯುಪಿಐ ಹೊಂದಾಣಿಕೆಯಾದ ಅಕೌಂಟ್‌ನ್ನು ಮಾತ್ರ ಬಿಹೆಚ್‌ಐಎಂಗೆ ಸೇರಿಸಲು ಸಾಧ್ಯ. ಎರಡು ಅಕೌಂಟ್‌ಗಳನ್ನು ಹೊಂದಿರುವ ವ್ಯಕ್ತಿ ಯುಪಿಐ ಅಥವಾ ಬಿಹೆಚ್‌ಐಎಂ ಗಳಲ್ಲಿ ಒಂದನ್ನು ಆಯ್ಕೆ

ಮಾಡಿಕೊಂಡು ಎರಡೂ ಅಕೌಂಟ್‌ಗಳಿಂದ ವ್ಯವಹಾರ ನಡೆಸಬಹುದು.

**ರೂಪೇ:** ರೂಪೇ, ಅಂತಾರಾಷ್ಟ್ರೀಯ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡುಗಳಾದ ವೀಸಾ ಮತ್ತು ಮಾಸ್ಟರ್ ಕಾರ್ಡ್ ಮಾದರಿಯ ಭಾರತೀಯ ಕಾರ್ಡು. ಜನ್‌ಧನ್ ಯೋಜನೆಯಡಿಯಲ್ಲಿ ರಾಷ್ಟ್ರೀಯ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ ರೂಪೇ ಕಾರ್ಡನ್ನು ಹೊರ ತಂದಿದೆ. ಪ್ರತಿಯೊಬ್ಬ ಅಕೌಂಟ್ ಹೊಂದಿರುವ ವ್ಯಕ್ತಿಗೆ ಒಂದು ಲಕ್ಷ ರೂಪಾಯಿಯ ಅಪಘಾತ ವಿಮೆಯೊಂದಿಗೆ ಈ ಕಾರ್ಡನ್ನು ಕೊಡಲಾಗುತ್ತದೆ. ರೂಪೇ (ಎಟಿಎಂ, ಪಾಯಿಂಟ್-ಆಫ್-ಸೇಲ್ (ಪಿಓಎಸ್) ಮತ್ತು ಆನ್‌ಲೈನ್ ಸೇಲ್ಸ್) ಛಾನಲ್‌ಗಳಲ್ಲಿ ಕೆಲಸ ಮಾಡುತ್ತದೆ ಮತ್ತು ವಿಶ್ವದಲ್ಲಿ ಇದು ಏಳನೇ ಪಾವತಿಯ ಗೇಟ್‌ವೇ ಆಗಿದೆ. ಕೋಟ್ಯಾಂತರ ಬಡ ಜನರು ರೂಪೇ ಕಾರ್ಡು ಹೊಂದಿರುವುದರಿಂದ ಕಡಿಮೆ ಆದಾಯವಿರುವವರನ್ನು ನಗದುರಹಿತ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಪ್ರಯತ್ನವಾಗಿದೆ. ಆದರೂ, ರೂಪೇನ ಮೊದಲ ಆದ್ಯತೆ ಎಲ್ಲರನ್ನು ಹಣಕಾಸಿನ ವ್ಯವಹಾರದಲ್ಲಿ ಒಳಗೊಳ್ಳುವಂತೆ ಮಾಡುವುದು, ರೂಪೇ ಅನ್ನು ವಿಶ್ವ ದರ್ಜೆಯ ಕ್ರೆಡಿಟ್/ಡೆಬಿಟ್ ಕಾರ್ಡನ್ನಾಗಿ ಮಾಡಲು ನೀತಿ ನಿರೂಪಣೆ ಸಿದ್ಧಪಡಿಸುವದಕ್ಕೆ ಆದ್ಯತೆ ನೀಡಬೇಕಾಗಿದೆ.

**ಆಧಾರ್ ಪೇಮೆಂಟ್ ಆ್ಯಪ್:** ಕೇಂದ್ರ ಸರ್ಕಾರ 2016 ರ ಡಿಸೆಂಬರ್ 25 ರಂದು ಆಧಾರ್ ಪೇಮೆಂಟ್ ಆ್ಯಪ್ ಪ್ರಾರಂಭಿಸಿತು. ಅದು ವ್ಯಕ್ತಿಯ ಬ್ಯಾಂಕ್ ಅಕೌಂಟ್ ಇದ್ದ ಹಾಗಿದೆ. ಇದನ್ನು ಗ್ರಾಹಕನ ಬಯೋಮೆಟ್ರಿಕ್ ರೀಡರ್‌ಗೆ ಸಂಪರ್ಕ ಕಲ್ಪಿಸಿದ ನಂತರ ಗ್ರಾಹಕ ತನ್ನ ಆಧಾರ್ ನಂಬರ್ ಮುಖಾಂತರ ತನಗೆ ಬೇಕಾದ ಬ್ಯಾಂಕ್‌ನ ಮುಖಾಂತರ ವ್ಯವಹಾರ ನಡೆಸಬಹುದು. ಫೋನ್ ಸಂಪರ್ಕವಿಲ್ಲದೆ ಈ ಆ್ಯಪ್‌ನ್ನು ಗ್ರಾಹಕ ಬಳಸಬಹುದಾದ ವಿಶೇಷತೆಯನ್ನು ಹೊಂದಿದೆ.

**ಅಂತಾರಾಷ್ಟ್ರೀಯ ಅನುಭವ:**
**ಸ್ವೀಡನ್‌ನ ಉದಾಹರಣೆ:**

ಸ್ವೀಡನ್ ದೇಶ, ವಿಶ್ವದ ಮೊದಲ ಐದು ನಗದುರಹಿತ ಆರ್ಥಿಕತೆಯ ದೇಶಗಳಲ್ಲಿ ಒಂದಾಗಿದೆ. ಮೊಬೈಲ್ ಅಥವಾ ಪ್ಲಾಸ್ಟಿಕ್ ಪೇಮೆಂಟ್‌ಗಳನ್ನು



ಡಿಜಿಟಲ್ ಮೂಲಸೌಲಭ್ಯಗಳೊಂದಿಗೆ ಮಾಡಲು ಅನುಕೂಲವಾಗುವಂತಹ ಪರಿಣಾಮಕಾರಿಯಾದ ನೀತಿಯನ್ನು ಅಳವಡಿಸಿಕೊಂಡಿದೆ. 2020 ವೇಳೆಗೆ ಬ್ಯಾಂಕ್‌ಗಳು, ಬಸ್‌ಗಳು, ಬೀದಿ ಬದಿಯ ವ್ಯಾಪಾರಿಗಳು, ಚರ್ಚ್‌ಗಳು ಸೇರಿದಂತೆ ಎಲ್ಲ ರೀತಿಯ ಹಣಕಾಸಿನ ವ್ಯವಹಾರಗಳನ್ನು ಶೇಕಡಾ 100 ಕ್ಕೆ ನೂರಷ್ಟು ನಗದುರಹಿತ ವ್ಯವಹಾರದ ರೂಪದಲ್ಲಿ ನಡೆಸುವುದಾಗಿ ಹೇಳಿಕೊಂಡಿರುವ ಮೊದಲ ರಾಷ್ಟ್ರವಾಗಿದೆ. ಆ ದೇಶದ ಕೇಂದ್ರೀಯ ಬ್ಯಾಂಕ್ ಆದ ರಿಕ್ಸ್‌ಬ್ಯಾಂಕ್ 2016 ರಲ್ಲಿ ಕೇವಲ ಶೇಕಡಾ 2 ರಷ್ಟು ಮಾತ್ರ ನಗದು ವ್ಯವಹಾರ ನಡೆಸಿದ್ದು, ಇದನ್ನು 2020 ರ ವೇಳೆಗೆ ಶೇಕಡಾ 0.05 ಕ್ಕೆ ಇಳಿಸಲು ಕ್ರಮ ತೆಗೆದುಕೊಂಡಿದೆ. ಸ್ವೀಡನ್‌ನ 1600 ಬ್ಯಾಕ್ ಶಾಖೆಗಳಲ್ಲಿ 900 ರಲ್ಲಿ ನಗದನ್ನು ಇಟ್ಟುಕೊಂಡಿಲ್ಲ ಮತ್ತು ಪ್ರಮುಖವಾಗಿ ಗ್ರಾಮಾಂತರ ಪ್ರದೇಶದಲ್ಲಿ ಅವು ನಗದನ್ನು ಠೇವಣಿಯಾಗಿ ಸ್ವೀಕರಿಸುತ್ತಿಲ್ಲ ಮತ್ತು ಎಟಿಎಂಗಳಿಲ್ಲ. 2009ರಲ್ಲಿ ಆ ದೇಶದಲ್ಲಿ 109 ಬಿಲಿಯನ್ ಸ್ವೀಡನ್ ಕ್ರೋನ್ ಚಲಾವಣೆಯಲ್ಲಿದ್ದು ಅವುಗಳ ಪ್ರಮಾಣ 2016 ರ ವೇಳೆಗೆ 80 ಬಿಲಿಯನ್ ಕ್ರೋನ್‌ಗಳಿಗೆ ಇಳಿಯಿತು.

ನಗದಿನಿಂದ ನಗದುರಹಿತ ವ್ಯವಸ್ಥೆಗೆ ಬದಲಾವಣೆಯಾಗುವ ಸಂದರ್ಭದಲ್ಲಿ ತಾಂತ್ರಿಕತೆ ಬಹಳ ಮಹತ್ವವಾದ ಪಾತ್ರ ವಹಿಸುತ್ತದೆ. ಸ್ವಿಸ್ (ಸ್ವೀಡನ್ ಬ್ಯಾಂಕ್‌ಗಳ ಮಾಲೀಕತ್ವದಲ್ಲಿರುವ ಮೊಬೈಲ್ ಆ್ಯಪ್, ಮತ್ತು ಸ್ವೀಡನ್ ಮತ್ತು ಡೆನ್ಮಾರ್ಕ್ ದೇಶಗಳ ಪ್ರಮುಖ ಬ್ಯಾಂಕ್‌ಗಳ ಸಹಯೋಗದೊಂದಿಗೆ ರೂಪಿಸಲಾಗಿದೆ) ಸ್ವೀಡನ್‌ನಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಈ ಆ್ಯಪ್ ಬಳಕೆದಾರರು ರೆಸ್ಟೋರೆಂಟ್‌ಗಳಲ್ಲಿರಲಿ, ಕ್ಲಬ್‌ನಲ್ಲಿರಲಿ ಅಥವಾ ಮಾರ್ಕೆಟ್‌ನಲ್ಲಿ ಸುತ್ತಾಡುತ್ತಿರಲಿ ಕ್ಷಣಮಾತ್ರದಲ್ಲಿ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಹಣವನ್ನು ವರ್ಗಾವಣೆ ಮಾಡುತ್ತದೆ. ಸ್ವೀಡನ್‌ನಲ್ಲಿ ಈ ಆ್ಯಪ್ ಬಳಸಿಕೊಂಡು ತಿಂಗಳಿಗೆ 1.2 ಲಕ್ಷ ಜನರು ವ್ಯವಹಾರ ನಡೆಸುತ್ತಾರೆ. 2014 ರ ಡಿಸೆಂಬರ್‌ನಲ್ಲಿ 1.69 ಬಿಲಿಯನ್ ಕ್ರೋನರ್ ಹಣ ಈ ಆ್ಯಪ್ ಮುಖಾಂತರ ವರ್ಗಾವಣೆಯಾಗಿದೆ. 2017 ರ ಅಂತ್ಯದ ವೇಳೆಗೆ 30 ಲಕ್ಷ ಬಳಕೆದಾರರು ಈ ಆ್ಯಪ್ ಬಳಸುತ್ತಾರೆ ಎಂಬ ವಿಶ್ವಾಸವನ್ನು ಆ್ಯಪ್‌ನ ಕಂಪನಿ ಹೇಳಿದೆ. ಆದರೂ, ವಾಸ್ತವಿಕತೆಗೂ ಇತರೆ ಪ್ರಮುಖವಾದ ಆಯಾಮಗಳಿಗೂ ಬಹಳ ವ್ಯತ್ಯಾಸವಿರುತ್ತದೆ. 2015 ರ ಡಿಸೆಂಬರ್ ಅಂತ್ಯದಲ್ಲಿ ಸ್ವೀಡನ್‌ನ ಜನಸಂಖ್ಯೆ 98.5 ಲಕ್ಷ, ಸಾಕ್ಷರತೆ ಶೇಕಡಾ 100. ಭಾರತದ ಜನಸಂಖ್ಯೆ 126 ಕೋಟಿ; ಸಾಕ್ಷರತೆ ಶೇಕಡಾ 75. ಭಾರತದಲ್ಲಿರುವ ಅನಕ್ಷರಸ್ಥರ ಸಂಖ್ಯೆ ಸ್ವೀಡನ್ ಜನಸಂಖ್ಯೆಯ 30 ಪಟ್ಟು ಹೆಚ್ಚಿದೆ. ಸ್ವೀಡನ್‌ನ ತಲಾ ಆದಾಯ ವಿಶ್ವದ ತಲಾ ಆದಾಯಕ್ಕಿಂತ ಶೇಕಡಾ 435 ರಷ್ಟು ಹೆಚ್ಚಿದೆ. ಆದರೆ ಭಾರತದ ಸರಾಸರಿ ಆದಾಯ ವಿಶ್ವದ ಸರಾಸರಿಗಿಂತ ಶೇಕಡಾ ಕೇವಲ 14 ರಷ್ಟಿದೆ. ಭಾರತದಲ್ಲಿ ಶೇಕಡಾ 68 ರಷ್ಟು ಜನರು ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಾರೆ, ಸ್ವೀಡನ್‌ನಲ್ಲಿ ಶೇಕಡಾ 85 ರಷ್ಟು ಜನ ನಗರ ಪ್ರದೇಶದಲ್ಲಿ ವಾಸಿಸುತ್ತಾರೆ. ಆದ್ದರಿಂದ ಭಾರತವನ್ನು ಸ್ವೀಡನ್ ಜೊತೆಗೆ ಹೋಲಿಕೆ ಮಾಡುವುದು ಸಾಧುವಲ್ಲ. ಆದರೂ ಭಾರತ ಬಿಹೆಚ್‌ಐಎಂ – ಭೀಮ್ ಆ್ಯಪ್‌ನ್ನು ರೂಪಿಸಿದ್ದು ದೊಡ್ಡ ಪ್ರಮಾಣದಲ್ಲಿ ಅದನ್ನು ಅಳವಡಿಸಿಕೊಳ್ಳಬೇಕಾಗಿದ್ದರೂ, ಭಾರತದ ಬಹುತೇಕ ಜನರು ತಾಂತ್ರಿಕತೆಗೆ ಇನ್ನೂ ಹೆಚ್ಚು ತೆರೆದುಕೊಂಡಿಲ್ಲ. ಆದ್ದರಿಂದ ಆರ್‌ಬಿಐ ಮತ್ತು ಬ್ಯಾಂಕ್‌ಗಳು ಸುರಕ್ಷಿತವಾಗಿ ಸುಲಭವಾಗಿ ನಗದುರಹಿತ ವ್ಯವಹಾರಗಳಲ್ಲಿ ದೇಶದ ಜನರು ತೊಡಗಿಕೊಳ್ಳುವಂತಹ ನೂತನ ಯೋಜನೆಗಳನ್ನು ಜಾರಿಗೆ ತರಬೇಕಾಗಿದೆ.

ಭಾರತದಲ್ಲಿ ತಕ್ಷಣ ಒಟ್ಟಾರೆ ಹಣಪಾವತಿ ವ್ಯವಸ್ಥೆ (ಆರ್‌ಟಿಜಿಎಸ್) ಮತ್ತು ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ (ಎನ್‌ಇಎಫ್‌ಟಿ) ಮೂಲಕ ಎಲ್ಲ ವರ್ಗಗಳ ಜನರು ಹಣ ವರ್ಗಾವಣೆ ಮಾಡುವುದು 2013 ರಿಂದ 2016 ರ ಅವಧಿಯಲ್ಲಿ ಮೂರು ಪಟ್ಟು ಹೆಚ್ಚಾಗಿದ್ದು, ಇದೇ ಅವಧಿಯಲ್ಲಿ ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಹಣ ವರ್ಗಾವಣೆ ಮಾಡುವುದು ಏಳು ಪಟ್ಟು ಹೆಚ್ಚಾಗಿದೆ. ಎಟಿಎಂ ಮತ್ತು ಪಿಓಎಸ್ ಕಾರ್ಡ್ ಮೂಲಕ ವ್ಯವಹಾರ ನಡೆಸುವುದು ಗಣನೀಯವಾಗಿ ಹೆಚ್ಚಿದೆ



ಮತ್ತು ಪಿಓಎಸ್ ಡೆಬಿಟ್ ಕಾರ್ಡ್ ಬಳಕೆ ಗಣನೀಯವಾಗಿ ವೃದ್ಧಿಯಾಗಿದೆ. ವೇಗವಾಗಿ ನಗದುರಹಿತವಾಗಿ ಹಣಪಾವತಿಸುವ ವ್ಯವಸ್ಥೆಯನ್ನು ಜಾರಿಗೆ ತಂದು ದಕ್ಷತೆಯನ್ನು ಹೆಚ್ಚಿಸಿಕೊಂಡು ಸರ್ಕಾರದ ಜನಕಲ್ಯಾಣ ಸೇವೆಗಳ ಹೊರೆಯನ್ನು ಬ್ಯಾಂಕ್ ಖಾತೆಗಳ ಮೂಲಕ ಕಡಿಮೆ ಮಾಡಲು ಬಳಸಿಕೊಳ್ಳುತ್ತಿವೆ (ಎಲ್‌ಪಿಜಿ ಬಳಕೆದಾರರ ಸಬ್ಸಿಡಿ ಮತ್ತು ನರೇಗಾ ಪಾವತಿ). ಭಾರತಲ್ಲಿ ಹಣದ ವ್ಯವಹಾರ ಶೇಕಡಾ 5 ರಷ್ಟು ಪ್ರಮಾಣದಲ್ಲಿ ಎಲೆಕ್ಟ್ರಾನಿಕ್ ಪೇಮೆಂಟ್ ಮುಖಾಂತರ ಆಗುತ್ತಿದ್ದರೂ, ನಗದು ರೂಪದಲ್ಲಿ ನಡೆಸುವ ವ್ಯವಹಾರ ಮುಂದುವರೆದಿದೆ.

## ಸವಾಲುಗಳು

ನೋಟು ಅಮಾನ್ಯೀಕರಣವು, ಇಡೀ ಆರ್ಥಿಕ ಕ್ಷೇತ್ರ ಕಡಿಮೆ ನಗದು ವ್ಯವಹಾರ ನಡೆಸುವುದಕ್ಕೆ ಉತ್ತೇಜನ ನೀಡಿದ್ದರೂ, ಅದು ನಾಗರಿಕರಿಗೆ ಮತ್ತು ಸರ್ಕಾರಕ್ಕೆ ಅನೇಕ ಸವಾಲುಗಳನ್ನು ಮುಂದಿಟ್ಟಿದೆ. ಈ ಹಿನ್ನೆಲೆಯಲ್ಲಿ ಡಿಜಿಟಲ್ ವ್ಯವಹಾರಕ್ಕೆ ಹೋಗಬೇಕು ಎಂಬುದು ಸರ್ವಾನುಮತದ ಅಭಿಪ್ರಾಯವಾಗಿದೆ. ಆದರೆ ಇದನ್ನು ಸಾಧಿಸಲು ಸರಿಯಾದ ಮೂಲಸೌಲಭ್ಯಗಳಿವೆಯೇ?

ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಶೇಕಡಾ 20.8 ಎಟಿಎಂ ಗಳು ಮತ್ತು ಖಾಸಗಿ ಬ್ಯಾಂಕ್‌ಗಳ ಶೇಕಡಾ 8.5 ಎಟಿಎಂಗಳು ಮಾತ್ರ ಇವೆ. ಗ್ರಾಮಾಂತರ ಪ್ರದೇಶದಲ್ಲಿ ಎಟಿಎಂಗಳನ್ನು ಕಾಣುವುದು ಅಪರೂಪ. ಇ-ವಾಲೆಟ್‌ಗಳು ಮತ್ತು ಮೊಬೈಲ್ ಪಾವತಿ ವ್ಯವಸ್ಥೆಗೆ ಸ್ಮಾರ್ಟ್ ಫೋನ್ ಮತ್ತು ಇಂಟರ್‌ನೆಟ್ ಸಂಪರ್ಕ ಅಗತ್ಯ, ಅದರೆ ದೇಶದ ಜನಸಂಖ್ಯೆಯಲ್ಲಿ ಕೇವಲ ಕಾಲು ಭಾಗ ಮಾತ್ರ ಸ್ಮಾರ್ಟ್ ಫೋನ್ ಹೊಂದಿದ್ದು, ವೇಗದ ಮತ್ತು ನಂಬಲರ್ಹವಾದ ಇಂಟರ್‌ನೆಟ್ ಸಂಪರ್ಕ ದುಬಾರಿ ಮತ್ತು ದೊರೆಯುವುದು ಕಷ್ಟ, ಪಬ್ಲಿಕ್ ವೈ-ಫೈ ಹಾಟ್‌ಸ್ಪಾಟ್‌ಗಳು ಮತ್ತು ಮೊಬೈಲ್ ಫೋನ್ ಬ್ಯಾಟರಿ ರಿಛಾರ್ಜ್ ಸ್ಥಳಗಳು ಬಹಳ ಕಡಿಮೆ ಮತ್ತು ಕೆಲವೇ ಕೆಲವು ಇವೆ. ಜೊತೆಗೆ ಸೈಬರ್ ಸೆಕ್ಯುರಿಟಿ ಸಮಸ್ಯೆ ಇದ್ದೇ ಇದೆ. ಸಣ್ಣ ಅಂಗಡಿ ಮತ್ತು ಬೀದಿ ಬದಿಯ ಮಾರಾಟಗಾರರಲ್ಲಿ ಕಾರ್ಡು ಸ್ವೈಪ್ ಮಾಡುವುದು ಎಷ್ಟು ಸುರಕ್ಷಿತ ಮತ್ತು ಕಾರ್ಡಿನ ವಿವರಗಳು ಗುಟ್ಟಾಗಿರುತ್ತವೆ ಎಂಬುದಕ್ಕೆ ಖಾತರಿ ಇಲ್ಲ, ಕಾರ್ಡ್‌ನ್ನು ವಿಕೃತಗೊಳಿಸಿದರೆ ಅದನ್ನು ಪುನಃ ಪಡೆದುಕೊಂಡು ಕಳೆದುಕೊಂಡ ಹಣವನ್ನು ಮರಳಿ ಪಡೆಯಬೇಕಾದರೆ ವರ್ಷಗಳೇ ಹಿಡಿಯುತ್ತದೆ. 2016 ರ ಅಕ್ಟೋಬರ್ ನಲ್ಲಿ ದೇಶದಲ್ಲಿ 30 ಲಕ್ಷ ಡೆಬಿಟ್ ಕಾರ್ಡುಗಳು ಎಟಿಎಂಗಳಲ್ಲಿ ತೊಂದರೆಗೊಳಗಾಗತ್ತವೆ ಎಂದು ಹೇಳಿ ಕಾರ್ಡಿನಲ್ಲಿರುವ ಪಿನ್ ಬದಲಿಸಲು ಹೇಳಲಾಯಿತು. ಇದಾದ ಒಂದು ತಿಂಗಳ ನಂತರ ನೋಟು ಅಮಾನ್ಯೀಕರಣದಿಂದ ಕಾರ್ಡುಗಳ ವ್ಯವಹಾರ ದಿಢೀರನೆ ಹೆಚ್ಚಾಯಿತು, ನೆಟ್‌ವರ್ಕ್ ಓವರ್‌ಲೋಡ್ ಆಗಿ ಕಾರ್ಡಿನ ಮೆಷಿನ್‌ಗಳು ಕೆಲಸ ಮಾಡುವುದನ್ನು ನಿಲ್ಲಿಸಿದವು ಜನರು ದೊಡ್ಡ ಕ್ಯೂನಲ್ಲಿ ನಿಲ್ಲಬೇಕಾಯಿತು.

ಕಪ್ಪುಹಣದ ವಿರುದ್ಧ ಹೋರಾಡಲು ನೋಟು ಅಮಾನ್ಯೀಕರಣಗೊಳಿಸಲಾಗಿದೆ ಎಂದು ಸರ್ಕಾರ ಹೇಳಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ಹಣ ಸಂಗ್ರಹಿಸುವುದೇ ಭ್ರಷ್ಟಾಚಾರಕ್ಕೆ ಮೂಲ. ವಾಸ್ತವವಾಗಿ ಮೇಲ್ಮಟ್ಟದಲ್ಲಿ ನಡೆಯುವ ಭ್ರಷ್ಟಾಚಾರದಲ್ಲಿ ನಗದು ಹಣ ಇರುವುದೇ ಇಲ್ಲ. ಆದ್ದರಿಂದ ಭ್ರಷ್ಟಾಚಾರದ ವಿರುದ್ಧದ ಸಮರದಲ್ಲಿ ರಾಜಕೀಯ ಪಕ್ಷಗಳಿಗೆ ಹಣ ಸಂಗ್ರಹಿಸುವ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರದಿದ್ದರೆ ಆ ಸಮರಕ್ಕೆ ಅರ್ಥವೇ ಇರುವುದಿಲ್ಲ. ನಗದುರಹಿತ ವ್ಯವಹಾರವನ್ನು ಉತ್ತೇಜಿಸಬೇಕಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಅದಕ್ಕೆ ಬೇಕಾದ ಎಲ್ಲ ರೀತಿಯ ಪೂರಕ ಸೌಲಭ್ಯಗಳನ್ನು ಮೊದಲು ರೂಪಿಸಲು ಸಾಕಷ್ಟು ಹಣ ಖರ್ಚು ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಭಾರತ ದಿನಬೆಳಗಾಗುವುದರೊಳಗೆ ನಗದುರಹಿತ ಸಮಾಜವಾಗುವುದಿಲ್ಲ. ಆದ್ದರಿಂದ ಸರ್ಕಾರ ಮೊದಲು ನಾಗರಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಬೇಕಾಗುತ್ತದೆ.

## ಸಾರಾಂಶ

ನೂರಕ್ಕೆ ನೂರರಷ್ಟು ವ್ಯವಹಾರವನ್ನು ನಗದುರಹಿತವಾಗಿಸುತ್ತೇವೆ ಎಂಬುದು ಸಾಧ್ಯವಾಗದ ಮಾತು, ಆದರೆ ಕಡಿಮೆ ನಗದು ವ್ಯವಹಾರದ ಸಮಾಜವನ್ನು ರೂಪಿಸುವತ್ತ ಮೊದಲ ಹೆಜ್ಜೆ ಇಟ್ಟು ನಂತರ ಹಂತ ಹಂತವಾಗಿ ಹಾಗೂ ನಿಧಾನವಾಗಿ ನಗದುರಹಿತ ಸಮಾಜವನ್ನು ರೂಪಿಸಬಹುದು. ಪೂರ್ಣ ಪ್ರಮಾಣದ ನಗದುರಹಿತ ಸಮಾಜ ನಿರ್ಮಾಣ ಬಹಳ ಕಷ್ಟಕರವಾದ ಕೆಲಸ. ಅಸಂಘಟಿತ ವಲಯದ ವ್ಯವಹಾರಗಳಲ್ಲಿ ನಗದು ಇನ್ನೂ ಪ್ರಮುಖ ಪಾತ್ರ ವಹಿಸುತ್ತದೆ. ಇಲ್ಲೂ ಸಹಾ ನಗದು ರಹಿತ ವಹಿವಾಟು ತರಬಹುದು. ಇದಕ್ಕೆ ಸರಿಹೊಂದುವ ತಾಂತ್ರಿಕೆಯನ್ನು ಅಳವಡಿಸಿಕೊಂಡ ಡೆಬಿಟ್ ಕಾರ್ಡುಗಳನ್ನು ರೂಪಿಸಬೇಕಾಗುತ್ತದೆ. ಚಲಾವಣೆಯಲ್ಲಿರುವ ನಗದು ಹಣದ ಪ್ರಮಾಣ ಕಡಿಮೆಯಾದರೆ ಮತ್ತು ಬಹುತೇಕ ವ್ಯವಹಾರಗಳು ಡಿಜಲೀಕರಣಕ್ಕೊಳಗಾದರೆ ನಗದು ಹಣವನ್ನು ಇಟ್ಟುಕೊಳ್ಳುವುದು ಕಡಿಮೆಯಾಗುತ್ತದೆ. ಹಣಕಾಸು ವ್ಯವಹಾರವು ಡಿಜಿಟಲ್ ಮುಖಾಂತರ ನಡೆಯುದಾದರೆ ದೇಶದಲ್ಲಿ ಪರ್ಯಾಯವಾಗಿ ನಡೆಯುವ ಹಣಕಾಸಿನ ವ್ಯವಹಾರವನ್ನು ತಹಬಂದಿಗೆ ತರಬಹುದು. ಇದು ಆಗಬೇಕಾದರೆ, ಲೆಕ್ಕಪತ್ರಗಳನ್ನು ಇಡುವ ವ್ಯವಸ್ಥೆಯನ್ನು ಸುಲಭಗೊಳಿಸಿ ತೆರಿಗೆ ಸಂಗ್ರಹಿಸುವ ತಳಹದಿಯನ್ನು ವಿಸ್ತಾರಗೊಳಿಸುತ್ತಾ ಹೋದರೆ ನಗದು ಹಣವನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುವುದು ಕಡಿಮೆಯಾಗಿ ಹಣದ ಕಳವು ಸಹಾ ಕಡಿಮೆಯಾಗುತ್ತದೆ. ಇದರಿಂದ ನಕಲಿ ನೋಟು ಮತ್ತು ಅವುಗಳ ಬಳಕೆ ಕಡಿಮೆಯಾಗುತ್ತದೆ. ಮಾಹಿತಿ ತಂತ್ರಜ್ಞಾನದ ಪೂರಕ ಸೌಲಭ್ಯಗಳು ದೊಡ್ಡ ಪ್ರಮಾಣದಲ್ಲಿ ಎಲ್ಲರಿಗೂ ದೊರೆಯಬೇಕು, ನಮಗೆ ಸ್ವಾತಂತ್ರ್ಯ ಬಂದು 70 ವರ್ಷ ಕಳೆದರೂ ಇದನ್ನು ಸಾಧಿಸಲು ಆಗಿಲ್ಲ. ಸೈಬರ್ ಸೆಕ್ಯುರಿಟಿ, ಆನ್‌ಲೈನ್ ಮೋಸ ತಡೆ, ಅಸಂಘಟಿತ ವಲಯವನ್ನು ಆರ್ಥಿಕ ವ್ಯವಸ್ಥೆಯಲ್ಲಿ ಒಳಗೊಳ್ಳುವಂತೆ ಮಾಡುವುದು, ತಿಳಿವಳಿಕೆ ಮೂಡಿಸುವ ಆಂದೋಳನ ಮತ್ತು ಸಮಸ್ಯೆಗಳನ್ನು ಬಗೆಹರಿಸಲು ಸೂಕ್ತ ವೇದಿಕೆ ರೂಪಿಸುವ ಕೆಲಸಗಳನ್ನು ಎಷ್ಟರ ಮಟ್ಟಿಗೆ ಮಾಡುತ್ತೇವೆಯೋ ಅದರ ಮೇಲೆ ನಗದುರಹಿತ ಸಮಾಜದ ನಿರ್ಮಾಣ ಅವಲಂಬಿತವಾಗಿದೆ. ❑

# ಸೈಬರ್ ಭದ್ರತೆ; ಸವಾಲು, ಪರಿಹಾರ

* ಡಾ. ಬಿ. ಎಂ. ಮೆಹೆಟ್ರೊ




**ಸೈಬರ್ ಸುರಕ್ಷತೆ ಎಲ್ಲ ರೀತಿಯ ಭದ್ರತೆ ಒದಗಿಸುತ್ತದೆ ಎಂದು ಭಾವಿಸುವುದಾದರೂ, ಇದಕ್ಕೂ ಮುನ್ನವೇ ನಾವೇ ಮುಂಜಾಗ್ರತೆ ತೆಗೆದುಕೊಳ್ಳುವುದು ಅಗತ್ಯ. ಅದರಲ್ಲೂ ಆನ್‌ಲೈನ್ ಬ್ಯಾಂಕಿಂಗ್ ಮಾಡುವಾಗ ಎಚ್ಚರದಿಂದ ಇರಬೇಕು.**

ತಾಂತ್ರಿಕತೆಯಲ್ಲಿನ ಅಭಿವೃದ್ಧಿ, ಆಧುನಿಕ ಸಮಾಜಕ್ಕೆ ಬೇಕಾದ ಎಲ್ಲಾ ಅಗತ್ಯಗಳನ್ನೂ ಪೂರೈಸುತ್ತಿದೆ. ಇದರಲ್ಲಿ ಬಹಳ ಮುಖ್ಯವಾದದ್ದು "ಎಲ್ಲಿಯಾದರೂ ಯಾವ ಸಮಯದಲ್ಲಾದರೂ" ಎಂಬ ಘೋಷವಾಕ್ಯ. ಅಂದರೆ ನಿಮ್ಮ ಯಾವುದೇ ಕೆಲಸಗಳನ್ನಾದರೂ ಎಲ್ಲಿ ಬೇಕಾದರೂ, ಯಾವ ಸಮಯದಲ್ಲಾದರೂ ಸೈಬರ್ ವರ್ಲ್ಡ್‌ನಲ್ಲಿ ಪೂರೈಸಬಹುದಾಗಿದೆ. ಇದಕ್ಕೆ ಉದಾಹರಣೆ ಎಂದರೆ ನಿಮ್ಮ ಕೆಲಸಗಳಾದ ಟಿಕೆಟ್ ಖರೀದಿ, ಬಿಲ್ ಪಾವತಿ, ಅಂತರ್ಜಾಲದಲ್ಲೇ ವಸ್ತುಗಳ ಖರೀದಿ ಮತ್ತು ಅಂತರ್ಜಾಲದಲ್ಲೇ ವಸ್ತುಗಳ ಮಾರಾಟ ಮಾಡುವುದಾಗಿದೆ. ಇಂಥ ಯಾವುದೇ ವ್ಯವಹಾರಗಳನ್ನು ಎಲ್ಲಿ ಬೇಕಾದರೂ ಮಾಡಬಹುದಾಗಿದೆ. ಇಂಥ ತಂತ್ರಜ್ಞಾನ ಆಧರಿತ ವ್ಯವಸ್ಥೆಯನ್ನು ಮೊದಲಿಗೆ ಹೈದರಾಬಾದ್‌ನಲ್ಲಿ 2001ರಲ್ಲಿ ಪ್ರದರ್ಶಿಸಲಾಯಿತು. ಎಲ್ಲ ರೀತಿಯ ಎಲೆಕ್ಟ್ರಾನಿಕ್ ಎಕೊ ವ್ಯವಸ್ಥೆಯನ್ನು ಸ್ಥಾಪಿಸಿ, ಅಲ್ಲಿ ಮನೆಯ ನೀರಿನ ಬಿಲ್ ಅನ್ನು ಮೊದಲಿಗೆ ಎಲೆಕ್ಟ್ರಾನಿಕ್ ಮಾದರಿಯಲ್ಲಿ ಮಾಡಲಾಯಿತು. ಈ ಎಕೊ ವ್ಯವಸ್ಥೆಯಲ್ಲಿ ಆಂಧ್ರ ಬ್ಯಾಂಕ್, ಹೆಚ್‌ಎಂಡಬ್ಲ್ಯೂಎಸ್‌ಎಸ್‌ಬಿ (ಜಲ ಮಂಡಳಿ), ಐಡಿಆರ್‌ಬಿಟಿ ಮತ್ತು ಸಿಎಂಸಿಗಳು ಭಾಗಿಯಾಗಿದ್ದವು. ಆಂಧ್ರ ಬ್ಯಾಂಕ್‌ನ ಇ–ಚೆಕ್‌ವೊಂದನ್ನು ಹೈದರಾಬಾದ್‌ನ ನಿವಾಸಿಯೊಬ್ಬರು ನೀಡಿ ಜಲ ಮಂಡಳಿ ಬಿಲ್ ಅನ್ನು ಪಾವತಿಸಲಾಯಿತು. ಮಾಹಿತಿ ರಕ್ಷಣೆಯ ಪ್ರಮುಖ ಗುರಿ ಗೌಪ್ಯತೆ, ಸಮಗ್ರತೆ ಮತ್ತು ಮಾಹಿತಿಯ ಲಭ್ಯತೆ ಕಲ್ಪಿಸುವುದಾಗಿದೆ. ಈ ಮೂರು ಅಂಶಗಳನ್ನು ರಕ್ಷಣೆಯ ಗುರಿಗಳು ಮತ್ತು ರಕ್ಷಣೆಯ ಸೇವೆಗಳು ಎಂದೇ ಹೇಳಲಾಗುತ್ತಿದೆ. ಇದರ ಜತೆಗೆ ದೃಢೀಕರಣ, ಉತ್ತರದಾಯಿತ್ವ ಮತ್ತು ಪ್ರಾಧಿಕಾರತ್ವ ಭದ್ರತೆಯ ಗುರಿಗಳಾಗಿದ್ದು ಇದನ್ನು ಚಿತ್ರ 1 ರಲ್ಲಿ ತೋರಿಸಲಾಗಿದೆ.

**ಚಿತ್ರ 1. ಮಾಹಿತಿ ಭದ್ರತಾ ಗುರಿಗಳು– ವಿವಿಧ ಪ್ರಕಾರಗಳಲ್ಲಿ**




* ಪ್ರಾಧ್ಯಾಪಕರು, ಸೈಬರ್ ಸೆಕ್ಯುರಿಟಿ ಕೇಂದ್ರ, ಬ್ಯಾಂಕಿಂಗ್ ತಂತ್ರಜ್ಞಾನ, ಸಂಶೋಧನಾ ಸಂಸ್ಥೆ (ಆರ್.ಬಿ.ಐ.). E-mail : bmmehtre@idrbt.ac.in

ಸೈಬರ್ ರಕ್ಷಣೆ ಒಂದು ನಿರಂತರ ಪ್ರಕ್ರಿಯೆ ಅಥವಾ ಇದು ಮಾಹಿತಿಯ ರಕ್ಷಣೆಯ ಗುರಿಯನ್ನು ಈಡೇರಿಸುತ್ತದೆ. ಇದನ್ನು ತರಹೇವಾರಿ ಹೆಸರುಗಳಿಂದ ಕರೆಯಲಾಗುತ್ತದೆ; ಮಾಹಿತಿ ರಕ್ಷಣೆ ಅಥವಾ ಸೈಬರ್ ಸೆಕ್ಯುರಿಟಿ, ಇದರ ಜತೆಗೆ ಐಟಿ ರಕ್ಷಣೆ, ಡಿಜಿಟಲ್ ಸೆಕ್ಯುರಿಟಿ, ಎಲೆಕ್ಟ್ರಾನಿಕ್ ಸೆಕ್ಯುರಿಟಿ, ಸಿಸ್ಟಮ್ ಸೆಕ್ಯುರಿಟಿ, ಇಂಟರ್‌ನೆಟ್ ಸೆಕ್ಯುರಿಟಿ ಇತ್ಯಾದಿ.

ಈಗ ಆನ್ ಲೈನ್ ಬ್ಯಾಂಕಿಂಗ್ ಅನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ. ಗ್ರಾಹಕರ ಖಾತೆಯ ವಿವರಗಳು (ಹೆಸರು, ವಿಳಾಸ, ಬ್ಯಾಂಕ್ ಬ್ಯಾಲನ್ಸ್ ಮತ್ತು ವಹಿವಾಟು) ಯಾವುದೇ ಬ್ಯಾಂಕ್ ಅಥವಾ ಅದರ ಗ್ರಾಹಕರಿಗೆ ಪ್ರಮುಖವಾದವು. ಈ ಮಾಹಿತಿಗಳನ್ನು ಇತರರಿಂದ ರಹಸ್ಯವಾಗಿ ಇಡಬೇಕು ಮತ್ತು ಇವುಗಳು ಗ್ರಾಹಕರಿಗೆ ಅಥವಾ ನಿರ್ದಿಷ್ಟ ಬ್ಯಾಂಕ್ ಸಿಬ್ಬಂದಿಗೆ ಮಾತ್ರ ಗೊತ್ತಿರಬೇಕು. ಈ ವಿವರಗಳ ಸೋರಿಕೆ (ಬೇರೆಯವರು ಅಕೌಂಟ್‌ಗೆ ಇಣುಕುವುದು ಅಥವಾ ಮಾಹಿತಿ ಗೊತ್ತಾಗುವುದು) ಗೌಪ್ಯತೆಯ ಉಲ್ಲಂಘನೆಯಾಗುತ್ತದೆ.

ಇದೇ ರೀತಿಯಲ್ಲಿ ಬ್ಯಾಂಕಿನ ಗ್ರಾಹಕರು ಮತ್ತು ಬ್ಯಾಂಕಿನ ನಡುವಿನ ಸಂಪರ್ಕವೂ ಸುರಕ್ಷಿತವಾಗಿರಬೇಕು, ಇದೇ ನಿಯಮ ಬ್ಯಾಂಕುಗಳಿಗೂ ಅನ್ವಯವಾಗುತ್ತದೆ. ಇದನ್ನು ಯಾವುದೇ ವಹಿವಾಟಿನಲ್ಲೂ ಬದಲಾವಣೆ ಮಾಡಬಾರದು. ಇದಕ್ಕೆ ಸಂದೇಶದ ಅಥವಾ ಮಾಹಿತಿಯ ಗೌಪ್ಯತೆ ಎಂದು ಕರೆಯಲಾಗುತ್ತದೆ.

ಈ ಗೌಪ್ಯತೆ ಮತ್ತು ರಹಸ್ಯವನ್ನು ಗೂಢಲಿಪಿಕರಣ ಮಾರ್ಗದ ಮೂಲಕ ಮಾಡಲಾಗುತ್ತದೆ. ಇದೊಂದು ಲಿಪಿಛಾಯೆ ಲಕ್ಷಣವಾಗಿದ್ದು ಸಂಕೀರ್ಣಮಯ ಸಂದೇಶಗಳನ್ನು ಬಳಸಿ ಈ ಮೂಲಕವೇ ಗೌಪ್ಯತೆ ಕಾಯ್ದುಕೊಳ್ಳಲಾಗುತ್ತದೆ. ಈ ಸಂಕೀರ್ಣಮಯ ಬರಹವೇ ಕಳುಹಿಸುವವರಿಂದ ಹೋಗಿ, ಅತ್ತ ಕಡೆ ಪಡೆಯುವವರಿಗೂ ಹೋಗುತ್ತದೆ. ಅಲ್ಲಿ ಲಿಪಿಛಾಯೆ ಲಕ್ಷಣದ ಮೂಲಕವೇ ಇದನ್ನು ಸರಿಯಾಗಿ ಪಡೆಯಲಾಗುತ್ತದೆ. ಲಭ್ಯತೆಯ ಸೇವೆಯು ಗ್ರಾಹಕರಿಗೆ ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ಸಿಗುವಂತೆ ಮಾಡುತ್ತದೆ. ಇಡೀ ಪ್ರಕ್ರಿಯೆಯು ಭದ್ರತೆಯ ವ್ಯವಸ್ಥೆಯಲ್ಲಿ ಪ್ರಮುಖವಾದದ್ದಾಗಿದೆ.

ಸೈಬರ್ ಸ್ಪೇಸ್‌ನಲ್ಲಿ ಕಂಪ್ಯೂಟರ್ ಮತ್ತು ಇತರೆ ಡಿಜಿಟಲ್ ಸಾಧನಗಳನ್ನು ತಲುಪುವ ಒಂದು ಮಾರ್ಗವೆಂದರೆ ಅದು ಇಂಟರ್ನೆಟ್. ಇದನ್ನು ನಿರ್ದಿಷ್ಟ ಗ್ರಾಹಕ ಸಂಖ್ಯೆ ಅಥವಾ ಯೂಸರ್‌ನೇಮ್ ಮತ್ತು ನಿರ್ದಿಷ್ಟ ಪಾಸ್‌ವರ್ಡ್ ಮೂಲಕ ತಲುಪಬಹುದಾಗಿದೆ. ಯೂಸರ್‌ನೇಮ್ ಮತ್ತು ಪಾಸ್‌ವರ್ಡ್ ಅನ್ನು ಮೊದಲ ಬಾರಿಗೆ ಕೊಟ್ಟಾಗ ಅದಕ್ಕೆ ನೊಂದಣಿ ಅಥವಾ ದಾಖಲು ಎಂದು ಕರೆಯಲಾಗುತ್ತದೆ. ಒಮ್ಮೆ ನೊಂದಣಿಯಾದರೆ, ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಬಳಸಿ ಅಕೌಂಟ್‌ಗೆ ಪ್ರವೇಶ ಪಡೆಯಬಹುದಾಗಿದೆ. ಇಂದು ಇಂಟರ್ನೆಟ್‌ನಲ್ಲಿ ಹಲವಾರು ಮಾರ್ಗಗಳಿದ್ದು ಇವುಗಳಿಗೆ ವೆಬ್ ಅಪ್ಲಿಕೇಶನ್ ಎಂದು ಕರೆಯಲಾಗುತ್ತದೆ. ಇಂಥ ವ್ಯವಸ್ಥೆಗೆ ಸುರಕ್ಷತಾ ಮಾರ್ಗದಿಂದ ಲಾಗಿನ್ ಆಗಬೇಕಾಗುತ್ತದೆ. ಚಿತ್ರ 2 ರಲ್ಲಿ ಸುರಕ್ಷಿತ ಲಾಗಿನ್ ಸೈಟ್ ಅನ್ನು ತೋರಿಸಲಾಗಿದೆ. ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ ಹಸಿರು ಬಣ್ಣದಲ್ಲಿ ಕಾಣಿಸುತ್ತಿರುವ ಬ್ಯಾಂಕ್ ಹೆಸರೇ ಇದು ಸುರಕ್ಷಿತವಾಗಿದೆ ಎಂದು ತೋರಿಸುವುದಾಗಿದೆ. ಅಂದರೆ ಈ ಬಣ್ಣ ಬಂದರೆ ನೀವು ಸುರಕ್ಷಿತವಾಗಿ ಲಾಗಿನ್ ಆಗುತ್ತಿದ್ದೀರಿ ಎಂದರ್ಥ.

ವ್ಯವಸ್ಥೆಯೊಂದಕ್ಕೆ ಲಾಗಿನ್ ಆಗಬೇಕಾದರೆ ಅಲ್ಲಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಅವಶ್ಯ. ಇದೊಂದು ರೀತಿ ಬೀಗ ಮತ್ತು ಅದರ ಕೀ ಇದ್ದ ಹಾಗಿದೆ. ಇದನ್ನು ನೀವು ಯಾರೊಂದಿಗೂ ಹಂಚಿಕೊಳ್ಳದೇ ರಹಸ್ಯವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ ಕಂಪ್ಯೂಟರ್ ವ್ಯವಸ್ಥೆಯಲ್ಲಿ ಪ್ರತಿಯೊಂದು ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ಒಬ್ಬೊಬ್ಬರನ್ನು ಪ್ರತಿನಿಧಿಸುತ್ತವೆ. ಲಾಗಿನ್ ಐಡಿ, ಪಾಸ್‌ವರ್ಡ್ ಹೊಂದಿರುವವರೇ ಅದರ ನಿಜವಾದ ಮಾಲಿಕರು. ಇಂಥ ಮಾಹಿತಿಗಳನ್ನು ಸೈಬರ್ ಕಳ್ಳರು ಕದಿಯಲು ಯತ್ನಿಸುತ್ತಲೇ ಇರುತ್ತಾರೆ. ಇವರನ್ನು ಹ್ಯಾಕರ್ಸ್ ಎಂದೂ ಕರೆಯಲಾಗುತ್ತದೆ. ಇದರಲ್ಲಿ ಒಂದು ಕುಖ್ಯಾತ ಮಾರ್ಗವೆಂದರೆ ಯಾವುದೇ ಸಂದೇಹ ಬರದ ರೀತಿಯಲ್ಲಿ 30 ಮಿಲಿಯನ್ ಡಾಲರ್ ಲಾಟರಿ ಹೊಡೆದಿದೆ ಎಂದು ನೂರಾರು ಇಮೇಲ್ ಕಳುಹಿಸುವುದು (ಅಥವಾ ಇಂಥದ್ದೇ ರೀತಿಯ ಮೇಲ್‌ಗಳು) ಒಮ್ಮೆ ನೀವು ಈ ಮೇಲ್‌ಗೆ ಪ್ರತಿಕ್ರಿಯೆ ನೀಡಿದರೆ ಸಾಕು ಅವರ ಜಾಲಕ್ಕೆ ಬಿದ್ದ ಹಾಗೆ ಎಂದೇ ಅರ್ಥ. ಅವರು ನೀವು ನೊಂದಣಿ ಮಾಡಿಸಿಕೊಳ್ಳಬೇಕು, ಹಣ ಕಟ್ಟಿ, ನಿಮ್ಮ ಮಾಹಿತಿ ಕೊಡಿ ಎಂದೆಲ್ಲಾ ಕೇಳುತ್ತಾರೆ. ಇಂಥ ಪ್ರಯತ್ನಗಳಿಗೆ ಫಿಶಿಂಗ್ ಎಂದೂ ಕರೆಯಲಾಗುತ್ತದೆ. ಇನ್ನುಳಿದಂತೆ ಮಾಹಿತಿಗಳನ್ನು ಕದಿಯುವ ಸಲುವಾಗಿ ಸೈಬರ್ ದಾಳಿಗಳಾದ ಸೋಶಿಯಲ್ ಎಂಜಿನಿಯರಿಂಗ್, ಸ್ಕ್ಯಾನಿಂಗ್, ದೋಷಗಳ ಗುರುತಿಸುವಿಕೆ ಮತ್ತು ವ್ಯವಸ್ಥೆಯ ದೋಷಗಳನ್ನು ಅರಿತು ದುರ್ಬಳಕೆ ಮಾಡಿಕೊಳ್ಳುವುದಾಗಿದೆ. ಈ ಮೂಲಕ ಮಾಹಿತಿ ಕದ್ದು ವ್ಯವಸ್ಥೆಯೊಳಗೆ ಪ್ರವೇಶಿಸುವುದನ್ನು ಸೈಬರ್ ಅಟ್ಯಾಕ್ ಎಂದು ಕರೆಯಲಾಗುತ್ತದೆ. ಇಂಥ ಸೈಬರ್

**ಚಿತ್ರ 2. ಸುರಕ್ಷಿತ ಲಾಗಿನ್**



**ಚಿತ್ರ 3. ಗಹನವಾದ ರಕ್ಷಣೆ – ಬಹು ಹಂತದ ಸೈಬರ್ ಸೆಕ್ಯುರಿಟಿ ನಿಯಂತ್ರಣ**




ದಾಳಿಗಳನ್ನು ತಡೆಯುವ ಸಲುವಾಗಿ ಅತ್ಯಂತ ಉತ್ತಮ ವ್ಯವಸ್ಥೆ ಹಾಗೂ ನಿವಾರಕಗಳನ್ನು ಇಟ್ಟುಕೊಳ್ಳಲೇಬೇಕು. ದೊಡ್ಡ ಕಂಪನಿಗಳು ಸೈಬರ್ ಸೆಕ್ಯುರಿಟಿ ನಿರ್ವಹಣಾ ಕೇಂದ್ರವನ್ನು ಹೊಂದಿರುತ್ತವೆ. ಇವು ಇಂಥ ದಾಳಿಗಳ ಬಗ್ಗೆ ಪರಿಶೀಲನೆ ನಡೆಸಿ ಎಚ್ಚರಿಕೆ ನೀಡುತ್ತವೆ. ಇಂಥ ಎಚ್ಚರಿಕೆಗಳನ್ನು ಸಿಸ್ಟಮ್ ಅಡ್ಮಿನಿಸ್ಟ್ರೇಟರ್ ನೋಡಿಕೊಂಡು ಪರಿಹಾರ ಹುಡುಕುತ್ತಾರೆ. ಆದರೆ ಕೆಲವೊಮ್ಮೆ ಇವು ತಪ್ಪು ಎಚ್ಚರಿಕೆಗಳೂ ಆಗಿರುತ್ತವೆ. ಸಾಮಾನ್ಯವಾಗಿ ಸುರಕ್ಷತೆಗಾಗಿ ಹಲವಾರು ಮಜಲುಗಳನ್ನು ಹಾಕಿಕೊಳ್ಳಲಾಗುತ್ತದೆ. ಮಾಹಿತಿಗಳು, ಅಪ್ಲಿಕೇಶನ್, ಹೋಸ್ಟ್ ಮತ್ತು ನೆಟ್‌ವರ್ಕ್ ಅಥವಾ ಪೆರಿಮೀಟರ್ ಅಸೆಟ್ ಮತ್ತು ಮೂಲಭೂತ ವ್ಯವಸ್ಥೆಯನ್ನು ನೋಡಿಕೊಳ್ಳಲಾಗುತ್ತದೆ. ಇದನ್ನು ಚಿತ್ರ 3ರಲ್ಲಿ ತೋರಿಸಲಾಗಿದೆ.

ಸೈಬರ್ ಸೆಕ್ಯುರಿಟಿಯನ್ನು ಒಂದು ವ್ಯವಸ್ಥೆಯ ಮೂಲಕ ನಿರ್ವಹಣೆ ಮತ್ತು ಉಪಯೋಗಿಸಲಾಗುತ್ತದೆ. ಅದೆಂದರೆ ಜನ, ಪ್ರಕ್ರಿಯೆ ಮತ್ತು ತಂತ್ರಜ್ಞಾನ. ಇದನ್ನು ಚಿತ್ರ 4ರಲ್ಲಿ ತೋರಿಸಲಾಗಿದ್ದು, ಇದು ಹೆಚ್ಚಾಗಿ ಜನರ ಮೇಲೆಯೇ ಅವಲಂಬಿತವಾಗಿರುತ್ತದೆ ಮತ್ತು ತಂತ್ರಜ್ಞಾನದ ಮೇಲೆ ಕಡಿಮೆ ಅವಲಂಬಿತವಾಗಿರುತ್ತದೆ. ತಂತ್ರಜ್ಞಾನವನ್ನು ವ್ಯವಸ್ಥೆಯೊಂದಕ್ಕೆ ಇನ್ ಸ್ಟಾಲ್ ಮಾಡಿ ಅದನ್ನು ಸರಿಯಾಗಿ ಜೋಡಿಸಿದಾಗ ಅದು ಹೇಗೆ ಸೂಚಿಸಲಾಗಿರುತ್ತದೆಯೊ ಹಾಗೆ ಕಾರ್ಯನಿರ್ವಹಣೆ ಮಾಡಿಕೊಂಡು ಹೋಗುತ್ತದೆ. ಆದರೆ ಮನುಷ್ಯ ವಿವಿಧ ಘಟ್ಟಗಳಲ್ಲಿ ವಿವಿಧ ರೀತಿ ವರ್ತಿಸುತ್ತಿರುತ್ತಾನೆ. ಇದಕ್ಕೆ ಪ್ರಮುಖವಾಗಿ ಸಂಸ್ಕೃತಿಗಳ ಬದಲಾವಣೆ ಮತ್ತು ಪ್ರಕ್ರಿಯೆ ಮತ್ತು ವಿಧಾನ ಅತ್ಯಗತ್ಯ.

ಸೈಬರ್ ಸುರಕ್ಷತೆ ಕೌಶಲ್ಯ ಆಧಾರಿತ ತಂತ್ರಜ್ಞಾನವಾಗಿದ್ದು, ಉತ್ತಮ ಮೂಲಸೌಕರ್ಯ, ಆಪರೇಟಿಂಗ್ ಸಿಸ್ಟಮ್, ಕಂಪ್ಯೂಟರ್ ನೆಟ್‌ವರ್ಕ್ ಮತ್ತು ಪ್ರೋಗ್ರಾಮಿಂಗ್ ಭಾಷೆಯ ಮೇಲೆ ಸಿದ್ಧವಾಗಿರುವ ಅಪ್ಲಿಕೇಶನ್‌ಗಳ ಚತುರತೆಯ ಮೇಲೆ ನಡೆಯುತ್ತದೆ. ಮುಂದಿನ ವರ್ಷಗಳಲ್ಲಿ ನಮ್ಮ ಯುವ ಎಂಜಿನಿಯರ್‌ಗಳಿಗೆ ಕೆಲಸ ಮಾಡಲು ಈ ಪ್ರದೇಶ ಅತಿ ಹೆಚ್ಚು ಅವಕಾಶಗಳನ್ನೂ ನೀಡುತ್ತದೆ. ಇದು ಕೇವಲ ಒಂದು ದೇಶಕ್ಕಷ್ಟೇ ಸೀಮಿತವಲ್ಲ, ಇದು ಜಾಗತಿಕವಾಗಿಯೂ ಬೇಕಾಗಿದೆ. ಏಕೆಂದರೆ ಇಡೀ ಜಗತ್ತು ಸೈಬರ್ ಸ್ಪೇಸ್ ಮೇಲೆ ಅವಲಂಬಿತವಾಗಿದ್ದು, ಸೈಬರ್ ಸೆಕ್ಯುಟಿರಿ ಎಲ್ಲರಿಗೂ ಬೇಕಾದುದ್ದಾಗಿದೆ.



**ಪಾಸ್‌ವರ್ಡ್‌ಗಳ ರಕ್ಷಣೆಗಾಗಿ ಸಲಹೆಗಳು**

– 8 ರಿಂದ 10 ಅಕ್ಷರಗಳಿರಲಿ, ಇದರಲ್ಲಿ ಅಕ್ಷರ, ಅಂಕೆಗಳ ಸಮ್ಮಿಳಿತವಾಗಿರಲಿ.
– ಇಂಗ್ಲಿಷಿನ ಸಣ್ಣ ಅಕ್ಷರ ಮತ್ತು ದಪ್ಪ ಅಕ್ಷರಗಳ ಬಳಕೆ ಇರಲಿ.
– ಪಾಸ್‌ವರ್ಡ್‌ಗಳಲ್ಲಿ ವಿಶೇಷ ಸಂಕೇತಗಳ ಬಳಕೆಯೂ ಇರಲಿ.
– ಬಹುಭಾಷೆಯ ಪಾಸ್‌ವರ್ಡ್ ಇಟ್ಟುಕೊಳ್ಳಿ. ಇದನ್ನು ಊಹೆ ಮಾಡುವುದು ಕಷ್ಟವಾಗಿರಲಿ.
– ಆಗಾಗ ಪಾಸ್‌ವರ್ಡ್ ಬದಲಾವಣೆ ಮಾಡುತ್ತಲೇ ಇರಿ
– ಹೆಸರು, ಹುಟ್ಟಿದ ದಿನಾಂಕಗಳನ್ನು ಪಾಸ್‌ವರ್ಡ್‌ಗಳಲ್ಲಿ ಬಳಕೆ ಮಾಡಬೇಡಿ. ಊಹೆ ಮಾಡುವುದು ಸುಲಭವಾಗಲಿದೆ.
– ಡಿಕ್ಷನರಿ ಪಾಸ್‌ವರ್ಡ್‌ಗಳ ಬಳಕೆ ಮಾಡಬೇಡಿ.
– ತಕ್ಷಣ ಪರಿಹಾರ ಕಂಡುಕೊಳ್ಳಿ.

**ಸುರಕ್ಷತಾ ಸಲಹೆಗಳು**
**(ಡೆಸ್ಕ್ ಟಾಪ್, ಲ್ಯಾಪ್ ಟಾಪ್, ಮೊಬೈಲ್ ಇಂಟರ್ನೆಟ್ ಬಳಕೆದಾರರಿಗೆ)**

* ಆಗಾಗ ಅಪ್‌ಡೇಟ್ ಮಾಡುತ್ತಲೇ ಇರಿ
* ಪಾಸ್‌ವರ್ಡ್
* ಅಧಿಕೃತ ವೆಬ್‌ಸೈಟ್‌ಗಳಿಂದಲೇ ಡೌನ್‌ಲೋಡ್ ಮಾಡಿ
* ಅಡ್ಮಿನಿಸ್ಟ್ರೇಟರ್
* ಟರ್ನ್ ಆಫ್
* ಗೌಪ್ಯತೆ ಲಿಪಿಛಾಯೆ
* ಯುಎಸ್ ಬಿ ಡ್ರೈವ್‌ಗಳ ಬಳಕೆ ಮಾಡುವಾಗ ಎಚ್ಚರ ಇರಲಿ
* ನಿಮ್ಮ ಕಂಪ್ಯೂಟರ್‌ನಲ್ಲಷ್ಟೇ ಆನ್‌ಲೈನ್ ಬ್ಯಾಂಕಿಂಗ್ ಬಳಕೆ ಮಾಡಿ
* ಆಗಾಗ ಬ್ಯಾಕ್‌ಅಪ್ ತೆಗೆದುಕೊಳ್ಳುತ್ತಲೇ ಇರಿ
* ಸಾಮಾಜಿತ ತಾಣ/ಮಾಧ್ಯಮಗಳಲ್ಲಿ ಹಂಚುವ ಮುನ್ನ ಇನ್ನೊಮ್ಮೆ ಯೋಚನೆ ಮಾಡಿ.




**ಸಂಸ್ಥೆಗಳಿಗೆ ಸುರಕ್ಷತಾ ಸಲಹೆಗಳು/ ಸಿಸ್ಟಮ್, ನೆಟ್‌ವರ್ಕ್ ಅಡ್ಮಿನಿಸ್ಟ್ರೇಟರ್‌ಗಳಿಗೆ**

* ಮೇಲಿನ ಆಡಳಿತ ಮಂಡಳಿಯಿಂದ ಸುರಕ್ಷತಾ ನೀತಿಯನ್ನು ಮಾಡಿಸಿ, ಒಪ್ಪಿಸಿ ಪಡೆದುಕೊಳ್ಳಿ.
* ಪ್ರತಿಯೊಬ್ಬ ಸಿಬ್ಬಂದಿಯೂ ಈ ಸುರಕ್ಷತಾ ನೀತಿ ಓದುವಂತೆ ಮತ್ತು ಅರ್ಥಮಾಡಿಕೊಳ್ಳುವಂತೆ ಮಾಡಿ
* ನಿಯಂತ್ರಣ ಮತ್ತು ಕೌಂಟರ್ ತಂತ್ರಗಳನ್ನು ಅವಧಿಗೊಮ್ಮೆ ಬದಲಾವಣೆ ಮಾಡಿ
* ಸುರಕ್ಷತಾ ತೇಪೆಗಳನ್ನು ಆಗಾಗ ಮಾಡುತ್ತಿರಿ.
* ಡಾಟಾ ಸೆಂಟರ್ ಮತ್ತು ಡಿಸಾಸ್ಟರ್ ಸೈಟ್ ಪರಿಸರದಲ್ಲಿ ಪ್ರತ್ಯೇಕತೆ ಇಟ್ಟುಕೊಳ್ಳಿ.
* ಆಗಾಗ ಸಿಸ್ಟಮ್ ಬ್ಯಾಕ್ ಅಪ್ ತೆಗೆದುಕೊಳ್ಳಿ ಮತ್ತು ವಾಪಸ್ ಹಾಕಿ ಪರೀಕ್ಷಿಸುತ್ತಲೇ ಇರಿ.
* ಪಾಸ್ ವರ್ಡ್ ನೀತಿ ರೂಪಿಸಿ, ಸಿಸ್ಟಮ್ ಅಡ್ಮಿನ್ ಸಿಬ್ಬಂದಿಯನ್ನು ರೂಪಿಸಿಕೊಳ್ಳಿ.
* ಐಡಿಆರ್ ಬಿಟಿ ಜುಲೈ 2016ರ ಸೆಕ್ಯುರಿಟಿ ಪಟ್ಟಿಯನ್ನು ಪರೀಕ್ಷಿಸಿಕೊಳ್ಳಿ. www.idrbt.ac.in

ಕಡೆಯದಾಗಿ, ಸೈಬರ್ ಸುರಕ್ಷತೆ ಎಲ್ಲ ರೀತಿಯ ಭದ್ರತೆ ಒದಗಿಸುತ್ತದೆ ಎಂದು ಭಾವಿಸುವುದಾದರೂ, ಇದಕ್ಕೂ ಮುನ್ನವೇ ನಾವೇ ಮುಂಜಾಗ್ರತೆ ತೆಗೆದುಕೊಳ್ಳುವುದು

**ಚಿತ್ರ 4. ಪಿಪಿಟಿ ಮೂಲಕ ನಿರ್ವಹಣೆ ಮತ್ತು ಆಡಳಿತ ರಕ್ಷಣೆ**

(ಜನ, ಪ್ರಕ್ರಿಯೆ ಮತ್ತು ತಾಂತ್ರಿಕತೆ)




ಅಗತ್ಯ. ಅದರಲ್ಲೂ ಇದು ಆನ್‌ಲೈನ್ ಬ್ಯಾಂಕಿಂಗ್ ಮಾಡುವಾಗ ಮತ್ತು ನಗದು ರಹಿತ ಆರ್ಥಿಕತೆಯಲ್ಲಿ ಎಚ್ಚರದಿಂದ ಇರಬೇಕು. ಅಲ್ಲದೇ ಇದು ಯುವ ಎಂಜಿನಿಯರ್‌ಗಳಿಗೆ ಉಜ್ವಲ ಭವಿಷ್ಯ ನೀಡುವ ಕ್ಷೇತ್ರ ಕೂಡ. ❑

ಅಭಿವೃದ್ಧಿ ಪಥ

## ಎಲ್‌ಇಡಿ ದಾರಿದೀಪ

ಎಲ್‌ಇಡಿ ಬಲ್ಬ್ ಮೂಲಕ ದಾರಿದೀಪ ಕಲ್ಪಿಸುವ ಬೃಹತ್ ಸೌಲಭ್ಯವನ್ನು ದಕ್ಷಿಣ ದೆಹಲಿ, ನಗರ ಪಾಲಿಕೆ ವ್ಯಾಪ್ತಿಯಲ್ಲಿ ಜನವರಿ 9, 2017ರಂದು ದೇಶಕ್ಕೆ ಸಮರ್ಪಿಸಲಾಯಿತು. ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಿಸುವ ಈ ಕಾರ್ಯಕ್ರಮ ವಿಶ್ವದಲ್ಲೆ ಅತಿ ದೊಡ್ಡ ಯೋಜನೆಯಾಗಿದ್ದು, ಕೇಂದ್ರ ಇಂಧನ ಖಾತೆ ನೇತೃತ್ವದಡಿ ಜಾರಿಯಾಗುತ್ತಿದೆ. ಎಲ್‌ಇಡಿ ಆಧರಿತ ರಾಷ್ಟ್ರೀಯ ದಾರಿದೀಪ ಯೋಜನೆಯನ್ನು ಇಂಧನ ದಕ್ಷತೆ ಸೇವಾ ಸಂಸ್ಥೆ; ದೆಹಲಿಯಲ್ಲಿ ಮಾತ್ರವಲ್ಲದೆ, ಪಂಜಾಬ್, ಹಿಮಾಚಲ ಪ್ರದೇಶ ಉತ್ತರ ಪ್ರದೇಶ, ಅಸ್ಸಾಂ, ತ್ರಿಪುರಾ, ಜಾರ್ಖಂಡ್, ಛತ್ತೀಸ್‌ಗಢ, ತೆಲಂಗಾಣ, ಆಂಧ್ರಪ್ರದೇಶ, ಗೋವಾ, ಕೇರಳ, ಮಹಾರಾಷ್ಟ್ರ, ಗುಜರಾತ್ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಜಾರಿಗೊಳಿಸಲಾಗುತ್ತಿದೆ.

ದೇಶದಲ್ಲಿ ಮಿತ ಇಂಧನ ಬಳಕೆಯ 15.59 ಲಕ್ಷ ಎಲ್‌ಇಡಿ ಬಲ್ಬ್‌ಗಳನ್ನು ಈಗಾಗಲೇ ಅಳವಡಿಸಲಾಗಿದ್ದು ಇದರಿಂದ 20.66 ಕೋಟಿ ಕೆಡಬ್ಲುಹೆಚ್ ವಿದ್ಯುತ್ ಉಳಿಸಿದಂತಾಗಿದೆ. ವಾರ್ಷಿಕ 1.71 ಲಕ್ಷ ಟನ್ ಹಸಿರು ಮನೆ ಅನಿಲ ಹೊರಸೂಸುವಿಕೆ ತಡೆಗಟ್ಟಿದಂತಾಗಿದೆ. ಭಾರತದಲ್ಲಿ 1200 ಕೋಟಿ ಅಮೆರಿಕನ್ ಡಾಲರ್ ಮೊತ್ತದ ಇಂಧನ ದಕ್ಷತೆ ಸಾಧಿಸಲು ಅವಕಾಶವಿದ್ದು ನೂತನ ವ್ಯಾಪಾರ ಮತ್ತು ಅನುಷ್ಠಾನ ಮಾದರಿಗಳ ಮೂಲಕ ಶೇ. 20 ರ ವರೆಗೆ ಇಂಧನ ಉಳಿತಾಯ ಮಾಡಬಹುದಾಗಿದೆ. *

## ರಸ್ತೆ ಸಂಪರ್ಕ

ಎಡ ತೀವ್ರಗಾಮಿ ಚಟುವಟಿಕೆಗಳಿಂದ ತೊಂದರೆಗೀಡಾಗಿರುವ ಪ್ರದೇಶಗಳಲ್ಲಿ ಸರ್ವಋತು ರಸ್ತೆ ಸಂಪರ್ಕ ಕಲ್ಪಿಸುವ ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಕ್ಕೆ, ಪ್ರಧಾನ ಮಂತ್ರಿ ನೇತೃತ್ವದ, ಆರ್ಥಿಕ ವ್ಯವಹಾರ ಕುರಿತಾದ ಸಂಪುಟ ಸಮಿತಿ ಅನುಮೋದನೆ ನೀಡಿದೆ. ಈ ಯೋಜನೆಯಡಿ 5,411.81 ಉದ್ದದ ರಸ್ತೆ ನಿರ್ಮಾಣ / ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಕೈಗೆತ್ತಿಕೊಳ್ಳಲಾಗುವುದು. ಇದು 126 ಸೇತುವೆ / ಅಡ್ಡ ಒಳ ಚರಂಡಿ ಕಾಮಗಾರಿಗಳನ್ನು ಒಳಗೊಂಡಿದೆ. ಎಡ ತೀವ್ರಗಾಮಿ ಚಟುವಟಿಕೆಗಳಿಂದ ತೊಂದರೆಗೀಡಾಗಿರುವ ದೇಶದ 44 ಜಿಲ್ಲೆಗಳಲ್ಲಿ ಒಟ್ಟು 11,724.53 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಈ ಯೋಜನೆಗಳನ್ನು ಜಾರಿಗೊಳಿಸಲಾಗುವುದು. ಇದರಲ್ಲಿ ಕೇಂದ್ರ ರಾಜ್ಯಗಳ ನಿಧಿ ಹೂಡಿಕೆ. ಪಿ.ಎಂ.ಜಿ.ಎಸ್.ವೈನಲ್ಲಿ ಇದ್ದಂತೆ 60:40 ಪ್ರಮಾಣದಲ್ಲಿರುತ್ತದೆ. ಆದರೆ, ಎಂಟು ಈಶಾನ್ಯ ರಾಜ್ಯಗಳು ಮತ್ತು ಮೂರು ಹಿಮಾಲಯ ತಪ್ಪಲಿನ ರಾಜ್ಯಗಳಲ್ಲಿ (ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ) ಈ ಪಾಲುದಾರಿಕೆ 90:10ರ ಪ್ರಮಾಣದಲ್ಲಿರುತ್ತದೆ. *

# ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ 'ನಗದುರಹಿತ' ಪರ್ವ

* ಸಮೀರ್ ಸೌರಭ್



**ಸರ್ಕಾರ ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಅಗತ್ಯಗಳನ್ನು ಪೂರೈಸುವ ಭರವಸೆ ನೀಡಬೇಕು ಮತ್ತು ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ತನ್ನ ಗಮನವನ್ನು ಕೇಂದ್ರೀಕರಿಸಬೇಕು. ಶಾಲೆಗಳು, ಕಾಲೇಜುಗಳು, ಪಂಚಾಯತ್ ಮುಂತಾದ ಸಂಸ್ಥೆಗಳ ಮೂಲಕ ವಿಶೇಷ ಚಾಲನೆ ನೀಡಿದರೆ ನಗದುರಹಿತ/ ಬ್ಯಾಂಕಿಂಗ್ ವಹಿವಾಟುಗಳ ಬಗ್ಗೆ ಜಾಗೃತಿ ಮೂಡಿಸಬಹುದಾಗಿದೆ.**

ಭಾರತ ನಗದುರಹಿತ ಅರ್ಥವ್ಯವಸ್ಥೆಯತ್ತ ಸಾಗುತ್ತಿರುವ ಬಗ್ಗೆ ವಿಶ್ವದಾದ್ಯಂತ ನೀತಿ ನಿರೂಪಕರು ಅನ್ವೇಷಣೆಯ ಸಾಧ್ಯತೆಗಳ ಬಗ್ಗೆ ಅದ್ಭುತವಾದ ಆಸಕ್ತಿಯನ್ನು ತಳೆದಿದ್ದಾರೆ. ಆದರೆ ನಗದು ವಹಿವಾಟು ಈಗಲೂ ಪ್ರಮುಖವಾದ ರೂಪದಲ್ಲಿ ಮುಂದುವರಿದೆ. ಆರ್ಥಿಕ ವಹಿವಾಟು ದಾಖಲಿಸುವುದರಿಂದ ಹಲವಾರು ಅನುಕೂಲಗಳಿವೆ. ಮೊದಲನೆಯದಾಗಿ ಸೂಕ್ತವಾದ ಕಂದಾಯ ತೆರಿಗೆ ಸಂಗ್ರಹಿಸಲು ಸರ್ಕಾರಕ್ಕೆ ಸಹಾಯ ಮಾಡುತ್ತದೆ, ಎರಡನೆಯದಾಗಿ ಅಕ್ರಮ ವಹಿವಾಟನ್ನು ಪರಿಣಾಮಕಾರಿಯಾಗಿ ಕಂಡು ಹಿಡಿದು ಅದನ್ನು ಕಡಿತಗೊಳಿಸಲು ಸಹಾಯ ಮಾಡುತ್ತದೆ, ಮೂರನೆಯದಾಗಿ ಭಾರತದಲ್ಲಿರುವ ದೊಡ್ಡ ಮಟ್ಟದ ಅಸಂಘಟಿತ ವಲಯವನ್ನು ಅರ್ಥ ಮಾಡಿಕೊಳ್ಳಲು ಮತ್ತು ಉತ್ತಮ ರೀತಿಯಲ್ಲಿ ಅಂದಾಜು ಮಾಡಲು ಸಾಧ್ಯವಾಗುತ್ತದೆ ಹಾಗೂ ಕೊನೆಯದಾಗಿ, ಅದರೆ ಅದೇ ಅಂತಿಮವಲ್ಲ, ಇದರಿಂದ ಸರ್ಕಾರದ ವಿವಿಧ ಕಾರ್ಯಕ್ರಮಗಳಲ್ಲಿ ಆಗುತ್ತಿರುವ ಸೋರಿಕೆಯನ್ನು ತಡೆಯಲು ಸಹಾಯವಾಗುತ್ತದೆ.

ನಗದುರಹಿತ ವಹಿವಾಟುಗಳಿಂದಾಗಿ, ಸರಿಸುಮಾರು ಎಲ್ಲ ವಹಿವಾಟುಗಳು ಡಿಜಿಟಲ್ ಹೆಜ್ಜೆ ಗುರುತುಗಳನ್ನು ಉಳಿಸುತ್ತವೆ. ಈ ವ್ಯವಸ್ಥೆಯಿಂದ ನಗದುರಹಿತ ಉಪಕರಣಗಳ ಮೂಲಕ ಹಣ ಪಾವತಿಸಿ ಖರೀದಿ ಮಾಡಲು ಉತ್ತೇಜನ ನೀಡಿದಂತಾಗುತ್ತದೆ (ಬ್ಯಾಂಕ್‌ನಿಂದ ಬ್ಯಾಂಕ್ ವಹಿವಾಟನ್ನು ಭೌತಿಕ ಹಣ ಒಳಗೊಳ್ಳದೆ ಉಪಯೋಗವನ್ನು ಹೆಚ್ಚಿಸುತ್ತದೆ) ಇದರಿಂದ ಹೆಚ್ಚಿನ ಆರ್ಥಿಕ ಪಾರದರ್ಶಕತೆಯನ್ನು ಪ್ರೋತ್ಸಾಹಿದಂತಾಗುತ್ತದೆ. ಬಹುಶಃ ಭಾರತದಲ್ಲಿ ಭ್ರಷ್ಟಚಾರ ಮತ್ತು ಕಪ್ಪುಹಣದ ವಿರುದ್ಧ ನೇರ ಹೋರಾಟಕ್ಕೆ ದಾರಿಯಾಗುತ್ತದೆ. ಡಿಜಿಟಲ್ ಹೆಜ್ಜೆ ಗುರುತುಗಳು ಇತರ ಪ್ರಮುಖ ಅನುಕೂಲಗಳನ್ನೂ ಹೊಂದಿವೆ. ಇದು ಸಾರ್ವಜನಿಕ ವಿತರಣೆಯ ವ್ಯವಸ್ಥೆಯನ್ನು ಸಮರ್ಥವಾಗಿ ಮಾಡುತ್ತದೆ. 2009 ರಲ್ಲಿ ಯೋಜನಾ ಆಯೋಗ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಖರ್ಚು, ಕಡಿಮೆ ಆದಾಯದ ಸಮೂಹದ ಕೇವಲ ಶೇ. 27 ರಷ್ಟು ಜನರನ್ನು ಮಾತ್ರ ತಲುಪಿದೆ ಎಂದು ಅಂದಾಜಿಸಿತ್ತು. ವಹಿವಾಟುಗಳ ಡಿಜಿಟಲೀಕರಣ ನಗದುರಹಿತ ಅರ್ಥವ್ಯವಸ್ಥೆಯತ್ತ ಸಾಗಲು ಒಂದು ಉತ್ತಮ ಮಾರ್ಗವಾಗಿದೆ. ಎಲೆಕ್ಟ್ರಾನಿಕ್ ಹಣ ಉಪಕರಣಗಳಿಗೆ ಪ್ರೋತ್ಸಾಹ, ಆರ್ಥಿಕ ಮೂಲಸೌಕರ್ಯ ಅಭಿವೃದ್ಧಿ ಮತ್ತು ಜನರಲ್ಲಿ ಡಿಜಿಟಲ್ ವಹಿವಾಟು ಅಭ್ಯಾಸ ಮಾಡಿಸುವುದರಿಂದ ಇಂತಹ ನಗದುರಹಿತ ಅರ್ಥವ್ಯವಸ್ಥೆ ಸಾಧನೆ ಮಾಡಲು ಸಾಧ್ಯ. ಹೆಚ್ಚಿನ ಮುಖ ಬೆಲೆಯ ನೋಟು ಚಲಾವಣೆ ರದ್ದತಿ ಮಾಡಿರುವುದು ಕೂಡಾ ನಗದುರಹಿತ ಅರ್ಥವ್ಯವಸ್ಥೆಗೆ ಅನುಕೂಲಕರವಾಗಿ ಪರಿಣಮಿಸುತ್ತದೆ. ನಗದುರಹಿತ ಅರ್ಥವ್ಯವಸ್ಥೆಯ ಪಯಣದಲ್ಲಿ ಹಲವಾರು ತೊಡಕುಗಳು ಇವೆ ಮತ್ತು ಭರವಸೆಗಳೂ ಇವೆ.

ಇಂದಿನ ಸಮಕಾಲೀನ ಚಿತ್ರಣದಲ್ಲಿ, ನಮ್ಮ ರಾಷ್ಟ್ರ, ವಿಶ್ವದಲ್ಲೇ ಅತ್ಯಂತ ಅಭಿವೃದ್ಧಿ ಹೊಂದುತ್ತಿರುವ ಮತ್ತು ಭರವಸೆಯ ಆರ್ಥಿಕ ವ್ಯವಸ್ಥೆಯಾಗಿ ಹೊರಹೊಮ್ಮಿದೆ.

* ನಿರ್ದೇಶಕರು, (ಯೋಜನೆ ಮತ್ತು ನೀತಿ) ಗ್ರಾಮೀಣಾಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ. E-mail : sameera.saurabh@gmail.com

ಭಾರತ ಬಹುತೇಕ ಕೃಷಿ ಮೂಲದ ಪ್ರಮುಖವಾಗಿ ಅಸಂಘಟಿತ ಗ್ರಾಮೀಣ ಅರ್ಥವ್ಯವಸ್ಥೆಯನ್ನು ಹೊಂದಿದೆ. ಶೇ. 68.84 ರಷ್ಟು ಭಾರತದ ಜನಸಂಖ್ಯೆ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಅನೌಪಚಾರಿಕ ವಲಯದಲ್ಲಿ ಶೇ. 20 ರಷ್ಟು ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಮತ್ತು ಶೇ.80 ರಷ್ಟು ಉದ್ಯೋಗವಿದೆ. ದೇಶದ ಜನಸಂಖ್ಯೆಯ ಸುಮಾರು 870 ಮಿಲಿಯನ್ ಜನರು ಗ್ರಾಮೀಣ ಪ್ರದೇಶದಲ್ಲಿದ್ದು ನಗದುರಹಿತ ವಹಿವಾಟು ಸಾಧನೆಗೆ ಅದು ದೊಡ್ಡ ಸವಾಲಾಗಿ ಪರಿಣಮಿಸಲಿದೆ. ಒಂದು ಅಂದಾಜಿನ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ 2020 ರ ಹೊತ್ತಿಗೆ ಅಂತರ್ಜಾಲ ಉಪಯೋಗಿಸುವವರ ಸಂಖ್ಯೆ ಅರ್ಧದಷ್ಟಾಗಲಿದೆ. ಸಂಪರ್ಕ ಹೊಂದಿರುವ ಗ್ರಾಮೀಣ ಗ್ರಾಹಕರ ಸಂಖ್ಯೆ 2015 ರಲ್ಲಿ 120 ಮಿಲಿಯನ್ ಇದ್ದು, ಅದು 2020 ರ ಹೊತ್ತಿಗೆ ಸರಿ ಸುಮಾರು 315 ಮಿಲಿಯನ್‌ಗೆ ಹೆಚ್ಚಲಿದೆ ಎಂದು ನಿರೀಕ್ಷಿಸಲಾಗಿದೆ. ಪ್ರಸ್ತುತ 18 ರಿಂದ 50 ವರ್ಷ ವಯೋಮಾನದ ಸುಮಾರು 160 ಮಿಲಿಯನ್ ಜನರು ಶೇ. 30 ರಷ್ಟು ಅಂತರ್ಜಾಲ ಹೊಂದಿದ್ದಾರೆ. ಅಸಕ್ತಿದಾಯಕ ಸಂಗತಿ ಏನೆಂದರೆ ಗ್ರಾಮೀಣ ಪ್ರದೇಶದ ಬೆಳವಣಿಗೆ ಗಮನಾರ್ಹವಾಗಿ ನಗರ ಕೇಂದ್ರಗಳಿಗಿಂತಲೂ ಹೆಚ್ಚಿನ ಬೆಳವಣಿಗೆ ಕಾಣಲಿದೆ ಎಂದು ನಿರೀಕ್ಷಿಸಲಾಗಿದೆ.

ಶೇ. 93 ರಷ್ಟಕ್ಕೂ ಹೆಚ್ಚು ಗ್ರಾಮೀಣ ಭಾರತದ ಜನರು ಯಾವುದೇ ಡಿಜಿಟಲ್ ವಹಿವಾಟು ನಡೆಸಿಲ್ಲ. ಅದ್ದರಿಂದ ನಿಜವಾದ ಅವಕಾಶವಿರುವುದು ಅಲ್ಲಿಯೇ. ಬಡ ಜನತೆ ಶೂನ್ಯ ಬಾಕಿ ಹಣದಲ್ಲಿ ಖಾತೆಗಳನ್ನು ತೆರೆಯುವುದು ಸೇರಿದಂತೆ ಸರ್ಕಾರ ಘೋಷಣೆ ಮಾಡಿ ಕ್ರಮಗಳನ್ನು ಕೈಗೊಂಡಿದೆ, ಅದರೆ ಬ್ಯಾಂಕ್ ಶಾಖೆಗಳು ಬೆಳವಣಿಗೆ ಕಡಿಮೆ ಇದ್ದು, ಹೆಚ್ಚಿನ ಸಾಲ ನೀಡುವುದು ಅತ್ಯಲ್ಪವಾಗಿದೆ. ಆರ್‌ಬಿಐ ಅಂಕಿಅಂಶಗಳ ಪ್ರಕಾರ 2001 ರಲ್ಲಿ ಭಾರತ ಪ್ರತಿ 100,000 ಲಕ್ಷ ಗ್ರಾಮೀಣ ಪ್ರದೇಶದ ಜನರಿಗೆ 5.3 ಬ್ಯಾಂಕ್ ಶಾಖೆಗಳಿದ್ದವು. ಇಂದು ಅದು ಕೇವಲ 7.8 ಇದೆ.

### ಪರೋಕ್ಷ ಲಾಭಗಳು

ಭಾರತದಲ್ಲಿ ನಗದುರಹಿತ ವಹಿವಾಟಿನಿಂದ ಮೂರು ವಿಶಿಷ್ಟವಾದ ಅದರೆ ಮುಖ್ಯವಾದ ಪರೋಕ್ಷ ಲಾಭಗಳಿವೆ.



(ಎ) ಹಣಕಾಸು ಸೇರ್ಪಡೆಯನ್ನು ಪ್ರೋತ್ಸಾಹಿಸುತ್ತದೆ:

(ಬಿ) ಹಣಕಾಸಿನ ವಹಿವಾಟುಗಳ ದಾಖಲೆಗಳನ್ನು ಇಡಬಹುದಾಗಿದೆ: ಮತ್ತು

(ಸಿ) ಹಣಕಾಸಿನ ವಹಿವಾಟಿನಲ್ಲಿ ತೊಡಗಿಕೊಂಡಿರುವ ಇಬ್ಬರು ವ್ಯಕ್ತಿಗಳ ವಹಿವಾಟು ವೆಚ್ಚವನ್ನು ಕಡಿಮೆ ಮಾಡುತ್ತದೆ.

ಕಡೆಯ ಅಂಶವನ್ನು ಪರಿಶೀಲಿಸಿದಾಗ ಸಾಮಾನ್ಯವಾಗಿ ಯಾವುದೇ ಅರ್ಥವ್ಯವಸ್ಥೆಯನ್ನು ಗಮನಿಸಿದಾಗ ಇದು ನಿಜ ಎನಿಸುತ್ತದೆ, ಮೊದಲಿನ ಎರಡು, ವಿಶೇಷವಾಗಿ ಭಾರತದಲ್ಲಿ ಪ್ರಸ್ತುತವಾಗಿವೆ. ಗಂಗೋಪಾಧ್ಯಾಯ (2009) ರಲ್ಲಿ ಹೇಳಿದಂತೆ ಅರ್ಧಕ್ಕೂ ಹೆಚ್ಚು ಭಾರತೀಯ ಜನಸಂಖ್ಯೆಯನ್ನು ಆರ್ಥಿಕ ವ್ಯವಸ್ಥೆಯಲ್ಲಿ ಸೇರ್ಪಡೆ ಮಾಡಿಲ್ಲ. ಭಾರತದಲ್ಲಿ ಪ್ರತಿ 100,000 ಜನರಿಗೆ 7.8 ಬ್ಯಾಂಕ್ ಶಾಖೆಗಳಿವೆ, ಪ್ರತಿ ನೂರು ಚದರ ಕಿಲೋಮೀಟರ್‌ಗೆ ಮೂರಕ್ಕೂ ಕಡಿಮೆ ಶಾಖೆಗಳಿವೆ. ಗ್ರಾಮೀಣ ಭಾರತದಲ್ಲಿ ಪ್ರತಿ ನೂರು ಚದರ ಕಿಲೋಮೀಟರ್‌ಗೆ ಒಂದು ಶಾಖೆಗೂ ಕಡಿಮೆ ಇವೆ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಶೇ.45, ನಗರ ಪ್ರದೇಶಗಳಲ್ಲಿ ಶೇ.28 ಮತ್ತು ಭಾರತದ ಎಲ್ಲ ಮನೆಗಳು ಶೇ.38, ಅಲ್ಲಿಗೆ ತಲುಪುವ ಮಾರ್ಗ ಮತ್ತು ಲಭ್ಯತೆ ನಿಗದಿತ ಬ್ಯಾಂಕ್ ಆಯ್ಕೆಗೆ ಮುಖ್ಯ ಅಂಶಗಳಾಗಿರುತ್ತವೆ. ಅರ್ಥಿಕ ವ್ಯವಸ್ಥೆಯಲ್ಲಿ ಸೇರ್ಪಡೆಗೊಳ್ಳಬೇಕಾದರೆ ಪ್ರತಿ ಮನೆಗೆ ಬ್ಯಾಂಕ್ ಸೌಲಭ್ಯ ಲಭ್ಯವಾಗಬೇಕಾಗಿರುವುದು ಅಗತ್ಯ, ಬರೇ ಬ್ಯಾಂಕ್ ಭೌತಿಕ ಲಭ್ಯತೆ ಮಾತ್ರ ಸಾಲದು. ಭಾರತದಲ್ಲಿ ಶೇ.90 ಹೆಚ್ಚಿನ ಕಾರ್ಮಿಕ ಬಲ ಅಸಂಘಟಿತ ವಲಯದಲ್ಲಿದೆ ಮತ್ತು ಭೌತಿಕವಾಗಿ ಬ್ಯಾಂಕ್‌ಗಳ ಲಭ್ಯತೆಯ ದೊಡ್ಡ ಅವಕಾಶದ ವೆಚ್ಚ ಅವರ ಮೇಲಿದೆ, ಇದು ವಿಶೇಷವಾಗಿ ಅವರಿಗೆ ಮುಖ್ಯವಾಗಿರುತ್ತದೆ (ಇದು ಪ್ರತಿ ದಿನ ಅವರ ಸಂಪಾದನೆಯ ಮೇಲೆ ಲೆಕ್ಕ ಹಾಕಲಾಗಿದೆ). ಭಾರತದ ಅನೌಪಚಾರಿಕ ವಲಯದಲ್ಲಿ ಉದ್ಯೋಗದಾತರು ದೊಡ್ಡ ಪ್ರಮಾಣದಲ್ಲಿದ್ದಾರೆ ಮತ್ತು ಪ್ರಾಥಮಿಕವಾಗಿ ಅವರು ನಗದಿನಲ್ಲಿ ವಹಿವಾಟು ನಡೆಸುತ್ತಾರೆ. ನಗದುರಹಿತ ವಹಿವಾಟು ಪ್ರೋತ್ಸಾಹಿಸಲು ವ್ಯವಸ್ಥೆಯನ್ನು ಸಾಧ್ಯವಾಗಿಸಬೇಕು, ಆದ್ದರಿಂದ ಹಣಕಾಸು ಸೇರ್ಪಡೆಗೊಳಿಸಲು ಪ್ರಸ್ತುತವಿರುವ ನೀತಿಗಳನ್ನು ನಿರ್ದೇಶಿಸಲು ಸಹಜವಾಗಿ ವಿಸ್ತರಣೆ ಮಾಡಬೇಕು. ಸೇವಾ ಶುಲ್ಕ ಮತ್ತು ಡಿಬಿಟ್/ಕ್ರೆಡಿಟ್ ಕಾರ್ಡ್ ವಹಿವಾಟಿನ ಮೇಲಿನ ತೆರಿಗೆ ವಿಧಿಸುವುದನ್ನು ಸರ್ಕಾರ ಕಡಿತಗೊಳಿಸುವುದಾಗಿ ಘೋಷಿಸಿದೆ. ಸರ್ಕಾರಗಳು ಕಳೆದ ವರ್ಷಗಳಲ್ಲಿ ಉಪಕ್ರಮಿಸಿರುವ ಅಥವಾ ಇ–ಪಾವತಿ, ಪ್ಲಾಸ್ಟಿಕ್ ವಹಿವಾಟು, ನಗದುರಹಿತ ಪಾವತಿಯತ್ತ ಅವು ಕೇಂದ್ರೀಕರಿಸಿಕೊಂಡಿವೆ. ಇದು ದಿಟವಾಗಿ ಭವಿಷ್ಯದ ಭಾರತೀಯ ಅರ್ಥವ್ಯವಸ್ಥೆಯಾಗಿದೆ. ಪ್ರಶ್ನೆ ಏನೆಂದರೆ ಕೂಲಂಕಷವಾಗಿ ಪರೀಕ್ಷಿಸಿದಾಗ ಭಾರತ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ನಗದು ಅರ್ಥವ್ಯವಸ್ಥೆಯನ್ನೇ ಹೊಂದಿದ್ದು, ಅದು ನಗದುರಹಿತ ವಹಿವಾಟಿಗೆ ಸಜ್ಜಾಗಿದೆಯೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಆರ್‌ಬಿಐ ಅಂಕಿಅಂಶಗಳನ್ನು ಗಮನಿಸಿದಾಗ ಜುಲೈ 2016 ರಲ್ಲಿ ಬ್ಯಾಂಕ್‌ಗಳು 697.2 ಮಿಲಿಯನ್ ಡೆಬಿಟ್ ಕಾರ್ಡ್‌ಗಳನ್ನು ಮತ್ತು 25.9 ಮಿಲಿಯನ್ ಕ್ರೆಡಿಟ್ ಕಾರ್ಡ್‌ಗಳನ್ನು ಪಡೆದುಕೊಂಡ ಹಣವನ್ನು ಕಡಿತಗೊಳಿಸಿ ಅಥವಾ ಕಾರ್ಡ್‌ಗಳನ್ನು ರದ್ದುಗೊಳಿಸಿ ಗ್ರಾಹಕರಿಗೆ ವಿತರಿಸಿವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ ಕಾರ್ಡ್‌ಗಳ ಸಂಖ್ಯೆ ವೈಯಕ್ತಿಕವಾಗಿ ಕಾರ್ಡ್‌ಗಳನ್ನು ಹೊಂದಿರುವವರ ಸಂಖ್ಯೆಗೆ ಸಮಾನವಾಗಿರುವುದಿಲ್ಲ. ಸಾಮಾನ್ಯವಾಗಿ ನಗರ ನಿವಾಸಿಗಳು ಹಲವಾರು ಕಾರ್ಡ್‌ಗಳನ್ನು ಹೊಂದಿರುತ್ತಾರೆ ಮತ್ತು ಗ್ರಾಮೀಣ ಪ್ರದೇಶಗಳಲ್ಲೂ ಈಗ ಇದೇ ಪ್ರವೃತ್ತಿಯನ್ನು ಕಾಣಬಹುದಾಗಿದೆ. ಕಾರ್ಡ್‌ಗಳನ್ನು ಪ್ರಾಥಮಿಕವಾಗಿ ಮೂರು ಕಾರಣಗಳಿಗಾಗಿ ಉಪಯೋಗಿಸುತ್ತಾರೆ – ಎಟಿಎಂಗಳಿಂದ ಹಣ ಪಡೆಯಲು, ಅನ್‌ಲೈನ್ ಪಾವತಿಗಳಿಗೆ ಮತ್ತು ಪಾಯಿಂಟ್ ಅಫ್ ಸೇಲ್ ಅಂಗಡಿಗಳಲ್ಲಿ, ಹೋಟೆಲ್‌ಗಳಲ್ಲಿ, ಇಂಧನ ಪಂಪ್ ಮುಂತಾದ ಕಡೆಗಳಲ್ಲಿ ಹಣ ಪಾವತಿಸಲು. ಭಾರತದಲ್ಲಿ ಕೇವಲ ಶೇ.26 ರಷ್ಟು ಜನರು ಮಾತ್ರ ಅಂತರ್ಜಾಲ ಸಂಪರ್ಕ ಹೊಂದಿದ್ದಾರೆ, ಮತ್ತು ಕೇವಲ




200 ಮಿಲಿಯನ್ ಜನರು ಡಿಜಿಟಲ್ ಪಾವತಿ ಸೇವೆಗಳನ್ನು ಉಪಯೋಗ ಮಾಡುತ್ತಿದ್ದಾರೆ. ಭಾರತದ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ ನಕ್ಷೆಯಲ್ಲಿ ಅಸಮಾನತೆ ವ್ಯಕ್ತವಾಗಿದೆ ಮತ್ತು ಆಕಾಶದಷ್ಟು ಅಂತರ ಹೊಂದಿದೆ. ಗ್ರಾಮೀಣ ಭಾರತದಲ್ಲಿ ಕೇವಲ ಶೇ.18 ರಷ್ಟು ಎಟಿಎಂಗಳನ್ನು ನಿಯೋಜಿಸಲಾಗಿದೆ. ಆರ್‌ಬಿಐನ ಸ್ವಂತ ಸಂಶೋಧನೆಯ ಪ್ರಕಾರ ಹೆಚ್ಚಿನ ಮಹಿಳಾ ಜನಸಂಖ್ಯೆ ಹೊಂದಿರುವ ರಾಜ್ಯಗಳು ಮತ್ತು ಹೆಚ್ಚಿನ ಗ್ರಾಮೀಣ ಜನಸಂಖ್ಯೆ ಇರುವ ಕಡೆ ಕಡಿಮೆ ಮಟ್ಟದ ಹಣಕಾಸು ವ್ಯವಸ್ಥೆ ಸೇರ್ಪಡೆಯಾಗಿದೆ.

ಗೂಗಲ್ ಇಂಡಿಯಾ ಮತ್ತು ಬೋಸ್ಟನ್ ಕನ್ಸಲ್ಟಿಂಗ್ ಸಮೂಹದ ವರದಿಯಂತೆ ಕಳೆದ ವರ್ಷ ಭಾರತದಲ್ಲಿ ಶೇ.75 ರಷ್ಟು ವಹಿವಾಟು ನಗದು ಆಧಾರದಲ್ಲಿ ನಡೆದಿದ್ದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಾದ ಅಮೆರಿಕ, ಜಪಾನ್, ಫ್ರಾನ್ಸ್, ಜರ್ಮನಿ ಮುಂತಾದ ಕಡೆಗಳನ್ನು ಇದು ಸುಮಾರು ಶೇ.20 –25 ರಷ್ಟು ನಡೆದಿದೆ. ನೋಟು ಚಲಾವಣೆಯ ರದ್ದತಿಯಿಂದ ಮೊಬೈಲ್ ಅಥವಾ ಇ–ವಾಲೆಟ್ ಕಂಪೆನಿಗಳು ತಮ್ಮ ವ್ಯವಹಾರಗಳನ್ನು ನಾಲ್ಕು ಪಟ್ಟು ಹೆಚ್ಚಿಸಿಕೊಂಡಿವೆ. ದೇಶದಲ್ಲಿ ಬಹುಪಾಲು ನಗದು ವಹಿವಾಟುಗಳು ಸಣ್ಣ ವಿನಿಮಯದ ವಸ್ತುಗಳು ಅಥವಾ ಸೇವೆಗಳಿಗೆ ನಡೆದಿವೆ ಮತ್ತು ಪಿಓಎಸ್ ಟರ್ಮಿನಲ್ ಇನ್ನು ಸಾಕಷ್ಟು ಪ್ರದೇಶಗಳನ್ನು ತಲುಪಿಲ್ಲ. ಮಿಲಿಯನ್‌ಗಟ್ಟಲೆ ಜನರು ಇನ್ನು ಬ್ಯಾಂಕ್ ಖಾತೆಗಳನ್ನೇ ಹೊಂದಿಲ್ಲ, ಪಿಓಎಸ್ ಮಾರಾಟಕ್ಕೆ ಪ್ರವೇಶ ಮಾಡಿಲ್ಲ, ಅಂತರ್ಜಾಲ ಅಥವಾ ಮೂಲಸೌಕರ್ಯಗಳ ಬಗ್ಗೆ ಅರ್ಥವಾಗಿಲ್ಲ ಮತ್ತು ಆನ್‌ಲೈನ್ ಪಾವತಿ ಮಾದರಿಗಳನ್ನು ಉಪಯೋಗ ಮುಂತಾದವುಗಳನ್ನು ತಿಳಿದುಕೊಂಡಿಲ್ಲ. ಗ್ರಾಮೀಣ ಭಾರತ ಮತ್ತು ಸಣ್ಣ ಪಟ್ಟಣಗಳಲ್ಲಿ ಡಿಜಿಟಲ್ ವಹಿವಾಟು ನಡೆಸಲು ಅನುಕೂಲವಾಗುವಂತೆ ಪಿಓಎಸ್ ಟರ್ಮಿನಲ್‌ಗಳು ಮತ್ತು ಡಿಜಿಟಲ್ ಸೇವೆಗಳು ದೊಡ್ಡ ಮಟ್ಟದಲ್ಲಿ ಪ್ರವೇಶಿಸಬೇಕು. ಈ ವರ್ಷ ಜುಲೈನಲ್ಲಿ, 881 ಮಿಲಿಯನ್ ವಹಿವಾಟುಗಳು ಡೆಬಿಟ್ ಕಾರ್ಡ್‌ಗಳನ್ನು ಎಟಿಎಂಗಳಲ್ಲಿ ಮತ್ತು ಪಿಓಎಸ್ ಟರ್ಮಿನಲ್‌ಗಳಲ್ಲಿ ಬಳಕೆ ಮಾಡಲಾಗಿದೆ. ಇದರಲ್ಲಿ ಶೇ.92 ರಷ್ಟು ಎಟಿಎಂಗಳಿಂದ ನಗದು ಹಿಂಪಡೆಯಲಾಗಿದೆ. ಭಾರತದಲ್ಲಿ ಕಾರ್ಡ್‌ಗಳ ಮುಖ್ಯ ಉದ್ದೇಶ ಅಂದರೆ ಹಣ ಹಿಂಪಡೆಯುವುದು.

ಡಿಜಿಟಲ್ ಇಂಡಿಯಾ ಎದುರಿಸುತ್ತಿರುವ ಮತ್ತೊಂದು ದೊಡ್ಡ ಸಂಕಷ್ಟ ಏನೆಂದರೆ ಮೊಬೈಲ್ ಅಂತರ್ಜಾಲ ಎಲ್ಲ ಕಡೆಗಳಲ್ಲಿ ಆಳವಾಗಿ ಪ್ರವೇಶ ಮಾಡದಿರುವುದು. ಏಕೆಂದರೆ ಮೊಬೈಲ್ ಅಂತರ್ಜಾಲ ಸಂಪರ್ಕಗಳಿಗಿಂತಲೂ ಹೆಚ್ಚು ಪಿಓಎಸ್ ಕಾರ್ಯನಿರ್ವಹಿಸುತ್ತಿವೆ. ಈ ಮೊದಲು ಬ್ಯಾಂಕ್‌ಗಳು ಕಾರ್ಡ್ ಆಧರಿತ ವಹಿವಾಟುಗಳ ಮೇಲೆ ಶುಲ್ಕ ವಿಧಿಸುತ್ತಿದ್ದು, ಅದು ಕೂಡಾ ಒಂದು ತಡೆಯಾಗಿತ್ತು ಎಂಬುದನ್ನು ತೋರಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕಡಿಮೆ ಸಾಕ್ಷರರು ಇರುವುದರ ಜೊತೆಗೆ ಅಂತರ್ಜಾಲ ಸಂಪರ್ಕ ಅಥವಾ ಮೂಲ ಸೌಲಭ್ಯಗಳು ಇಲ್ಲದಿರುವುದು ಡಿಜಿಟಲ್ ವಹಿವಾಟು ಅಳವಡಿಸಿಕೊಳ್ಳಲು ತುಂಬಾ ಕಷ್ಟವಾಗಿದೆ.

### ನಗದುರಹಿತ ಗ್ರಾಮೀಣ ಅರ್ಥವ್ಯವಸ್ಥೆಯ ಸವಾಲುಗಳು

* **ನಗದು ಪ್ರಭಾವವಿರುವ ಅರ್ಥವ್ಯವಸ್ಥೆ:** ಭಾರತದಲ್ಲಿ ದೊಡ್ಡ ಮಟ್ಟದಲ್ಲಿ ನಗದು ಚಲಾವಣೆಯಿದೆ. ನಗದು ಚಲಾವಣೆಯ ಮೊತ್ತ ಭಾರತದ ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಯ ಶೇ.13 ರಷ್ಟು.

* **ವಹಿವಾಟು ಪ್ರಮುಖವಾಗಿ ನಗದಿನಲ್ಲಿ ನಡೆಯುತ್ತದೆ:** ಹತ್ತಿರತ್ತಿರ ಶೇ. 95 ರಷ್ಟು ವಹಿವಾಟುಗಳು ನಡೆಯುವುದು ನಗದಿನಲ್ಲಿ. ದೊಡ್ಡ ಗಾತ್ರದಲ್ಲಿ ಅನೌಪಚಾರಿಕ/ ಅಸಂಘಟಿತ ವಲಯಗಳ ಕಾರ್ಮಿಕರು ನಗದು ಆಧಾರದಲ್ಲಿ ವಹಿವಾಟು ನಡೆಸಲು ಅದ್ಯತೆ ನೀಡುತ್ತಾರೆ. ಅವರಿಗೆ ಅಗತ್ಯವಾದ ಡಿಜಿಟಲ್ ಸಾಕ್ಷರತೆ ಇರುವುದಿಲ್ಲ.

* **ಎಟಿಎಂಗಳು ಮುಖ್ಯವಾಗಿ ನಗದು ಪಡೆಯಲು ಮಾತ್ರ, ಆನ್‌ಲೈನ್ ವಹಿವಾಟುಗಳನ್ನು ಬಗೆಹರಿಸಿಕೊಳ್ಳಲು ಅಲ್ಲ:** 21 ಕೋಟಿ ರೂಪೇ ಕಾರ್ಡ್‌ಗಳು ಸೇರಿದಂತೆ ದೊಡ್ಡ ಸಂಖ್ಯೆಯಲ್ಲಿ ಎಟಿಎಂ ಕಾರ್ಡ್‌ಗಳಿವೆ. ಅದರೆ ಸುಮಾರು ಶೇ.92ರಷ್ಟು ಎಟಿಎಂ ಕಾರ್ಡ್‌ಗಳನ್ನು ನಗದು ಹಿಂಪಡೆಯಲು ಉಪಯೋಗಿಸುತ್ತಾರೆ. ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಹಲವಾರು ಕಾರ್ಡ್‌ಗಳನ್ನು ಹೊಂದಿದ್ದು ಇದು ಗ್ರಾಮೀಣ ಪ್ರದೇಶಗಳಲ್ಲಿ ಕಡಿಮೆ ಪ್ರವೇಶ ಮಾಡಿರುವುದನ್ನು ತೋರಿಸುತ್ತದೆ.



* **ನಿಯಮಿತವಾಗಿ ದೊರಕುತ್ತಿರುವ ಪಾಯಿಂಟ್ ಆಫ್ ಸೇಲ್ ಟರ್ಮಿನಲ್‌ಗಳು:** ಆರ್‌ಬಿಐ ಪ್ರಕಾರ 2016 ಜುಲೈ ಅಂತ್ಯಕ್ಕೆ ವಿವಿಧ ಬ್ಯಾಂಕ್‌ಗಳ ಸ್ಥಳಗಳಲ್ಲಿ 1.44 ಮಿಲಿಯನ್ ಪಿಓಎಸ್ ಟರ್ಮಿನಲ್‌ಗಳನ್ನು ಅಳವಡಿಸಲಾಗಿದೆ. ಅದರೆ ಹೆಚ್ಚಿನವು ನಗರ/ ಅರೆ ನಗರ ಪ್ರದೇಶಗಳಲ್ಲಿವೆ.

* **ಗ್ರಾಮೀಣ ಭಾರತದಲ್ಲಿ ಮೊಬೈಲ್ ಅಂತರ್ಜಾಲ ಪ್ರವೇಶ ದುರ್ಬಲವಾಗಿದೆ:** ಡಿಜಿಟಲ್ ವಹಿವಾಟುಗಳನ್ನು ಬಗೆಹರಿಸಿಕೊಳ್ಳಲು ಅಂತರ್ಜಾಲ ಸಂಪರ್ಕ ಅಗತ್ಯವಾಗಿ ಬೇಕಾಗಿದೆ. ಅದರೆ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಸಂಪರ್ಕ ಗಮನಾರ್ಹವಾಗಿಲ್ಲ. ಇದರೊಂದಿಗೆ, ದೇಶದ ಗ್ರಾಮೀಣ ಭಾಗಗಳಲ್ಲಿ ಸಾಕ್ಷರತಾ ಮಟ್ಟ ಕಡಿಮೆಯಿದೆ, ಇದರಿಂದಾಗಿ ದೊಡ್ಡ ಮಟ್ಟದಲ್ಲಿ ಪ್ಲಾಸ್ಟಿಕ್ ಹಣ ಉಪಯೋಗಿಸಲು ತೊಂದರೆ ಎದುರಾಗಿದೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಭೀಮ್ (ಭಾರತ್ ಇಂಟರ್‌ಪೇಸ್

ಫಾರ್ ಮನಿ) ಯನ್ನು ಪ್ರಧಾನ ಮಂತ್ರಿಗಳು ಪ್ರಾರಂಭಿಸಿದ್ದಾರೆ. ಇದು ಯುಎಸ್‌ಎಸ್‌ಡಿ ಅಂದರೆ ಮೊಬೈಲ್ ಅಂತರ್ಜಾಲವಿಲ್ಲದೆ ಕಾರ್ಯನಿರ್ವಹಿಸುತ್ತದೆ.

ಖಾಸಗಿ ಬ್ಯಾಂಕ್‌ಗಳ 2014 ವಾರ್ಷಿಕ ವರದಿಯ ವಿಶ್ಲೇಷಣೆಯಂತೆ ಖಾಸಗಿ ವಲಯದ ಬ್ಯಾಂಕ್‌ಗಳು ಗ್ರಾಮೀಣ ಪ್ರದೇಶದಲ್ಲಿ ತಮ್ಮ ಇರುವಿಕೆಯನ್ನು ಭದ್ರಗೊಳಿಸಿಕೊಳ್ಳುತ್ತಿವೆ. ಅವು ಸರಾಸರಿ ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಹೊಸ ಶಾಖೆಗಳನ್ನು ಶೇ.50–65 ರಷ್ಟು ಆರಂಭಿಸಿವೆ. ಮೊದಲ ಸ್ಥಾನದಲ್ಲಿರುವ ಖಾಸಗಿ ಸಾಲ ನೀಡುವ ಐಸಿಐಸಿಐ ಬ್ಯಾಂಕ್, ಆ್ಯಕ್ಸಿಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಸ್ ಬ್ಯಾಂಕ್‌ಗಳು, ಬ್ಯಾಂಕ್‌ಗಳು ಇಲ್ಲದ ಕಡೆಗಳಲ್ಲಿ ಮತ್ತು ಬ್ಯಾಂಕ್‌ಗಳಿರುವ ಪ್ರದೇಶಗಳಲ್ಲಿ ಕಳೆದ ಐದು ವರ್ಷಗಳಿಂದ ತಮ್ಮ ಇರುವಿಕೆಯನ್ನು ವಿಸ್ತರಿಸುತ್ತಿವೆ. ಬ್ಯಾಂಕ್‌ಗಳು ಇಲ್ಲದ ಗ್ರಾಮೀಣ ಕೇಂದ್ರಗಳಲ್ಲಿ (ಹಂತ–5 ಮತ್ತು 6 ಪಟ್ಟಣಗಳಲ್ಲಿ) ಮೂರು ವರ್ಷಗಳ ಅವಧಿ 2013–16 ರಲ್ಲಿ ತಮ್ಮ ಶಾಖೆಗಳನ್ನು ಪ್ರಾರಂಭಿಸಲು ಅದ್ಯತೆ ನೀಡಲು ಬ್ಯಾಂಕ್‌ಗಳಿಗೆ ಆರ್‌ಬಿಐ ಹೇಳಿದೆ. ಹೊಸ ಬ್ಯಾಂಕ್‌ಗಳನ್ನು ತೆರೆಯುವಾಗ ಕನಿಷ್ಠ ಶೇ.25 ರಷ್ಟು ಹೊಸ ಶಾಖೆಗಳನ್ನು ಈ ಪ್ರದೇಶಗಳಲ್ಲಿ ತೆರೆಯುವಂತೆ ಕೂಡಾ ಹೇಳಿದೆ. ಒಂದು ವರ್ಷದಲ್ಲಿ ಶೇ.25 ಕ್ಕೂ ಹೆಚ್ಚು ಶಾಖೆಗಳನ್ನು ತೆರೆಯುವ ಬ್ಯಾಂಕ್ ಶಾಖೆಗೆ ಕೇಂದ್ರ ಬ್ಯಾಂಕ್ ಸಾಲವನ್ನು ನೀಡಲಿದೆ, ಅದು ಮುಂದಿನ ವರ್ಷ ಸಾಧನೆ




ಮಾಡುವ ಮಾನದಂಡದಡಿಯಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗಲಾಗುವುದು.

ಅರೆ ನಗರ ಮತ್ತು ಗ್ರಾಮೀಣ ಮಾರುಕಟ್ಟೆಗಳು ಪ್ರಸ್ತುತ ದೊಡ್ಡ ಕೇಂದ್ರಗಳಿಗಿಂತಲೂ ವೇಗವಾಗಿ ಬೆಳೆಯುತ್ತಿವೆ. ಇದರ ಪರಿಣಾಮವಾಗಿ ಇತ್ತೀಚಿನ ದಿನಗಳಲ್ಲಿ ಈ ಪ್ರದೇಶಗಳಲ್ಲಿ ಶಾಖೆಗಳ ದೊಡ್ಡ ಪಾಲು ವಿಸ್ತರಣೆಯಾಗುತ್ತಿದೆ. ಎಲ್ಲ ಸೇವೆಗಳನ್ನು ಇವು ಒಂದೇ ಸೂರಿನಡಿ ನೀಡುವತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿವೆ. ಹಣಕಾಸಿನ ಸೇರ್ಪಡೆಗೆ ತಂತ್ರಜ್ಞಾನ ದೊಡ್ಡ ಸಾಧನವಾಗಿದೆ, ಇದರಲ್ಲಿ ಗಾಲಿಗಳ ಮೇಲೆ ಶಾಖೆಗಳು, ಮೊಬೈಲ್ ವ್ಯಾನ್ ಆಧರಿತ ಶಾಖೆಗಳು ಸೇರಿದಂತೆ ದೂರದ ಬ್ಯಾಂಕ್‌ಗಳಿಲ್ಲದ ಗ್ರಾಮಗಳಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ನೀಡಲು ಗುರಿಯಿರಿಸಿಕೊಂಡಿವೆ. ಅದರೆ, ಇಲ್ಲಿ ಗ್ರಾಮೀಣ ಶಾಖೆಗಳು ಒಂದು ಪ್ರಮುಖ ಸಮಸ್ಯೆಯನ್ನು ಎದುರಿಸುತ್ತಿವೆ ಅದೇನೆಂದರೆ ವ್ಯವಹಾರ ಕುದುರಿಸಿಕೊಳ್ಳಲು ಸಮಯ ತೆಗೆದುಕೊಳ್ಳುತ್ತಿವೆ ಎನ್ನುವುದು. ಗ್ರಾಮೀಣ ಶಾಖೆಗಳನ್ನು ನಡೆಸಿಕೊಂಡು ಹೋಗಲು ಪ್ರತಿ ತಿಂಗಳು ಸುಮಾರು ನಾಲ್ಕು ಲಕ್ಷ ರೂಪಾಯಿಗಳು ವೆಚ್ಚವಾಗುತ್ತದೆ. ಅದರೆ ಹಂತ–1 ನಗರಗಳಲ್ಲಿ ಈ ವೆಚ್ಚ ರೂ.9 ಲಕ್ಷ. ಈ ನಡುವೆ ಗ್ರಾಮೀಣ ವಿಸ್ತರಣೆಯ ವಿಷಯಕ್ಕೆ ಬಂದರೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ತುಂಬಾ ಹಿಂದೆ ಬಿದ್ದಿಲ್ಲ ಎನ್ನುವುದು. ಆರ್ಥಿಕ ವರ್ಷ 2014 ರಲ್ಲಿ ಎಸ್‌ಬಿಐ 1,053 ಶಾಖೆಗಳನ್ನು ಪ್ರಾರಂಭಿಸಿದೆ, ಇವು ಶೇ.57 ರಷ್ಟು ಶಾಖೆಗಳನ್ನು ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳಲ್ಲಿ ಆರಂಭಿಸಿವೆ. ಕಡಿಮೆ ರಿಯಲ್ ಎಸ್ಟೇಟ್ ಬಾಡಿಗೆ ದರಗಳಿಂದ ಗ್ರಾಮೀಣ ಶಾಖೆಗಳಿಗೆ ಲಾಭವಾಗಿದ್ದರೂ, ಸೇವೆಗಳ ಮತ್ತು ಸಿಬ್ಬಂದಿ ವೆಚ್ಚ ಈ ಲಾಭದಲ್ಲಿ ಭರಿಸಿವೆ. ಆದರೆ ಆರ್‌ಬಿಐ ಶೇ.25 ರಷ್ಟು ಹೊಸ ಶಾಖೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಮಾಡಬೇಕು ಎನ್ನುವ ಮಾನದಂಡದಿಂದಾಗಿ ಬ್ಯಾಂಕ್‌ಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಶಾಖೆಗಳನ್ನು ತೆರೆಯಲು ಭರದಿಂದ ಮುನ್ನುಗ್ಗುತ್ತಿವೆ.

| ಹೊಸ ಶಾಖೆಗಳು | | | |
|---|---|---|---|
| | ಐಸಿಐಸಿಐ ಬ್ಯಾಂಕ್ | ಹೆಚ್‌ಡಿಎಫ್‌ಸಿ ಬ್ಯಾಂಕ್ | ಆ್ಯಕ್ಸಿಸ್ ಬ್ಯಾಂಕ್ |
| **ಒಟ್ಟು ಶಾಖೆ** | 3,753 | 3,062 | 2,402 |
| ಶಾಖೆಗಳಿಲ್ಲದ ಪ್ರದೇಶ | 448 | 318 | 438 |
| ಶೇಕಡಾವಾರು ಶಾಖೆ | 11.9 | 10.4 | 18.2 |
| **2014ರಲ್ಲಿ ಒಟ್ಟು ಶಾಖೆ** | 653 | 341 | 455 |
| **2014ರಲ್ಲಿ ತೆರೆಯಲಾದ ಶಾಖೆ** | 317 | 230 | 298 |
| ಶೇಕಡಾವಾರು ಒಟ್ಟು ಶಾಖೆ | 48.5 | 67.4 | 65.5 |
| **ಗ್ರಾಮೀಣ ಶಾಖೆ** | 841 | 674 | 576 |
| ಬ್ಯಾಂಕುಗಳಿಲ್ಲದ ಪ್ರದೇಶದಲ್ಲಿ ಶೇ. ಪ್ರಮಾಣ | 53.3 | 47.2 | 76 |

### ಭರವಸೆ ಮತ್ತು ಮುಂದಿನ ಹಾದಿ

ದೇಶದ 1.3 ಬಿಲಿಯನ್ ಜನರ ಹಣದ ಶೇ. 86 ರಷ್ಟು ಚಲಾವಣೆಯಲ್ಲಿದ್ದ ನೋಟುಗಳನ್ನು ಕೆಲವೇ ಗಂಟೆಗಳಲ್ಲಿ ರದ್ದುಗೊಳಿಸಿದ್ದು, ಇದರಿಂದಾಗಿ ದೈನಂದಿನ ಜೀವನ ಸ್ವಲ್ಪ ಕಾಲ ಅಸ್ತವ್ಯಸ್ತವಾಗಿದ್ದು ನಿಜವಾಗಿತ್ತು. ಹೆಚ್ಚಿನ ಭಾರತೀಯ ಅರ್ಥಿಕ ಚಟುವಟಿಕೆಗಳು ಅನೌಪಚಾರಿಕ ವಲಯದಲ್ಲಿ ಚೆಕ್ ಇಲ್ಲದ ನಗದಿನಲ್ಲಿ ಪಾವತಿಯಾಗುತ್ತವೆ. ಇದರ ಫಲವಾಗಿ ವ್ಯಾಪಕವಾಗಿ ನೇರ ಮತ್ತು ಪರೋಕ್ಷ ತೆರಿಗೆಯಿಂದ ತಪ್ಪಿಸಿಕೊಳ್ಳುತ್ತಾರೆ. ಆದರೆ ರಾಜ್ಯದ ನಿಜವಾದ ಅರ್ಥವ್ಯವಸ್ಥೆಯನ್ನು ಮೌಲ್ಯಮಾಪನ ಮಾಡುವಲ್ಲಿ ಅಸಾಮರ್ಥ್ಯವಾಗಿದೆ. ಉದಾಹರಣೆಗೆ ರೈತರಿಗೆ ಆದಾಯ ತೆರಿಗೆ ಇಲ್ಲ, ಅದರೂ ಹೆಚ್ಚಿನವರು ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಹೊಂದಿದ್ದಾರೆ.

ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಮೊದಲ ಬಾರಿಗೆ 1998 ರಲ್ಲಿ ಬಿಡುಗಡೆ ಮಾಡಿದ್ದರು. ಯಾವುದೇ ಗೊಂದಲಗಳಿಲ್ಲದೇ ಬ್ಯಾಂಕ್ ಖಾತೆಗಳ ಸೃಷ್ಟಿ ಪ್ರಸ್ತುತ ಸರ್ಕಾರದಲ್ಲಿ ಏರುಮುಖವಾದವು. ಆದರೆ ಈಗಲೂ ಕೃಷಿ ಅರ್ಥವ್ಯವಸ್ಥೆ ಮಧ್ಯವರ್ತಿಗಳ ಮತ್ತು ವ್ಯಾಪಾರಸ್ಥರ ನಿಯಂತ್ರಣದಲ್ಲಿದ್ದು, ರೈತರಿಗೆ ನಗದ ರೂಪದಲ್ಲೇ ಪಾವತಿ ಮಾಡುತ್ತಾ ದರಗಳ ವ್ಯತ್ಯಾಸದ ಲಾಭವನ್ನು ಅವರು ಮಾಡಿಕೊಳ್ಳುತ್ತಿದ್ದಾರೆ.

ಜನ್ ಧನ್ ಆಧಾರ್ ಮೊಬೈಲ್ (ಜೆಎಎಂ) ಡಿಜಿಟಲ್ ವಹಿವಾಟಿನ ಸಂಸ್ಕೃತಿಯನ್ನು ಪ್ರೋತ್ಸಾಹಿಸುತ್ತದೆ. ಇದು ದೇಶದ ಪ್ರತಿ ಕುಗ್ರಾಮವನ್ನು ತಲುಪಲು ತನ್ನನ್ನು ವಿಸ್ತರಿಸಿಕೊಳ್ಳುತ್ತಿದೆ. ಆಧಾರ್ ಅನ್ನು 2009 ರಲ್ಲಿ ಪರಿಚಯಿಸಲಾಯಿತು, ಆದರೆ ಏಳು ವರ್ಷಗಳೊಳಗೆ ಈ ಯೋಜನೆಯಡಿ 1.07 ಬಿಲಿಯನ್ ಜನರು ನೊಂದಾಯಿಸಿಕೊಂಡಿದ್ದಾರೆ, ಅಥವಾ ದೇಶದ ಜನಸಂಖ್ಯೆಯ ಸುಮಾರು ಶೇ.88 ರಷ್ಟು. ದೊಡ್ಡ ಸಂಖ್ಯೆಯಲ್ಲಿ ಸರ್ಕಾರಿ ವರ್ಗಾವಣೆ (ಡಿಬಿಟಿ)ಗಳನ್ನು ಜೆಎಎಂ ಮೂಲಕ ಮಾಡಲಾಗುತ್ತಿದೆ. ಇದರಿಂದಾಗಿ ಜನರಲ್ಲಿ ಡಿಜಿಟಲ್ ವಹಿವಾಟು ಜಾಗೃತಿ ಮೂಡುತ್ತಿದೆ.

### ನಗದುರಹಿತ ಅರ್ಥವ್ಯವಸ್ಥೆಗೆ ಸರ್ಕಾರದ ನೇರ ಕೊಡುಗೆ

ಸರ್ಕಾರ ಮತ್ತು ನಾಗರಿಕರ ನಡುವೆ ಸಂವಾದಕ್ಕಾಗಿ ದೊಡ್ಡ ಸಂಖ್ಯೆಯ ನೋಡಲ್ ಪಾಯಿಂಟ್‌ಗಳಿವೆ. ಇದರಲ್ಲಿ ಸರ್ಕಾರದ ಪಾತ್ರ ಏನೆಂದರೆ ಕೆಲವು ಪಾವತಿಗಳಿಗೆ ನಗದುರಹಿತ ವಹಿವಾಟುಗಳನ್ನು ಕಡ್ಡಾಯ ಮಾಡುವುದು ಮತ್ತು ಕೆಲವು ಸೇವೆಗಳಿಗೆ ಒಂದು ಮೊತ್ತವನ್ನು ದಾಟಿದಾಗ ಅದಕ್ಕೂ ಕೂಡಾ ಕಡ್ಡಾಯ ಮಾಡುವುದು, ಇದನ್ನು ಈಗಾಗಲೇ ಆರಂಭಿಸಲಾಗಿದೆ. ಉದಾಹರಣೆಗೆ ಪಾಸ್ ಪೋರ್ಟ್‌ಗಳಿಗೆ ನಗದುರಹಿತವಾಗಿ (ಆನ್‌ಲೈನ್ ಪಾವತಿ ಅಥವಾ ಬ್ಯಾಂಕ್ ಡ್ರಾಫ್ಟ್‌ಗಳು) ಪಾವತಿ ಮಾಡುವುದು ಕಡ್ಡಾಯ. ಇತರ ವಿವಿಧ ರೀತಿಯ ತೆರಿಗೆಗಳ ಪಾವತಿ (ಆದಾಯ, ಮಾರಾಟ ಅಥವಾ ಅಬಕಾರಿ ಶುಲ್ಕ) ನಗದುರಹಿತ ಪದ್ಧತಿಯಲ್ಲಿ ಕಡ್ಡಾಯವನ್ನು ಮಾಡಬಹುದು. ತೆರಿಗೆ ವಿನಾಯಿತಿಯೊಂದಿಗೆ (ಶೇ.1 ರಿಂದ ಶೇ.2) ಗೃಹಕೃತ್ಯ ಮಾಡುವ ಅಸಂಘಟಿತ ವಲಯ (ಮನೆ ಕೆಲಸದವರು, ಕಸ ಗುಡಿಸುವವರು ಮುಂತಾದವರಿಗೆ) ಪಾವತಿ ಮಾಡುವ ಸಂಬಳವನ್ನು ನಗದುರಹಿತ ಪಾವತಿ ಮಾಡುವುದು ಕೂಡಾ ಅಭಿವೃದ್ಧಿ ಪಡಿಸಬಹುದು. ಇದು ಎರಡು ಕೆಲಸಗಳನ್ನು ಮಾಡುತ್ತದೆ, ಒಂದು ಗೃಹಕೃತ್ಯ ಮಾಡುವವರು ನಗದುರಹಿತವಾಗುವುದರಿಂದ ಪ್ರೋತ್ಸಾಹಧನ ಸಿಗುವುದು ಮತ್ತು ಎರಡನೆಯದು ಅಸಂಘಟಿತ ವಲಯವನ್ನು ಆರ್ಥಿಕವಾಗಿ ಸೇರ್ಪಡೆಗೊಳಿಸಲು ದೊಡ್ಡ ಪಾಲು ಸಿಗುತ್ತದೆ. ಇದಲ್ಲದೇ ಪ್ರೋತ್ಸಾಹಧನ ಮತ್ತು ನಗದುರಹಿತ ವಹಿವಾಟನ್ನು ಮೇಲ್ಗಡೆ ತಿಳಿಸಿದಂತೆ ಕಡ್ಡಾಯ ಮಾಡುವುದು, ಸರ್ಕಾರದ ಈ ಕೆಲವು ಕಾರ್ಯಕ್ರಮಗಳಿಂದ ನೇರವಾಗಿ ಮತ್ತು ನಗದುರಹಿತ ವಹಿವಾಟಿಗೆ ಒಂದು ದೊಡ್ಡ ವೇದಿಕೆಯನ್ನು ಪ್ರಾರಂಭಿಸಿದಂತಾಗುವುದು.

ನಗದುರಹಿತ ವಹಿವಾಟು ಒಪ್ಪಿಕೊಳ್ಳಲು ಇರುವ ಕೊರತೆಗಳ ಅಡಚಣೆಗಳನ್ನು ನೀತಿ ರೂಪಿಸುವಾಗ ಸರಿಪಡಿಸುವ ಅಗತ್ಯವಿದೆ ಮತ್ತು ಇನ್ನೊಂದು ಅಡಚಣೆ ವಹಿವಾಟಿನ ಹೆಚ್ಚಿನ ವೆಚ್ಚ. ಆದರೆ ಇಲ್ಲಿ ಗಮನಿಸಬೇಕಾದ ವಿಷಯ ಅಂದರೆ ಈ ಎರಡು ತೊಡಕುಗಳ ನಿವಾರಣೆ ಮಾಡಿದರೂ ಕೂಡಾ, ನಗದುರಹಿತ ವಹಿವಾಟು ಸ್ವಯಂ ಚಾಲಿತವಲ್ಲ. ಶಿಫಾರಸ್ಸುಗಳ ಚೌಕಟ್ಟು ಐದು 'ಎ' ಗಳನ್ನು ಒಳಗೊಂಡಿದ್ದರೆ ಒಳ್ಳೆಯದು. ಅವುಗಳೆಂದರೆ ಆರ್ಥಿಕ ಸೇರ್ಪಡೆಯನ್ನು ನಗದುರಹಿತ ಪಾವತಿ ಉಪಕರಣಗಳು ದೊರಕುತ್ತಿರಬೇಕು, ಅಂಗೀಕಾರಕ್ಕೆ ಅರ್ಹವಾಗಿರಬೇಕು, ಒಪ್ಪಿಕೊಳ್ಳುವಂತೆ ಇರಬೇಕು, ಸಮೃದ್ಧವಾಗಿರಬೇಕು ಮತ್ತು ಜಾಗೃತಿ ಮೂಡಿಸಬೇಕು.

ಸರ್ಕಾರ ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಅಗತ್ಯಗಳನ್ನು ಪೂರೈಸುವ ಭರವಸೆ



ನೀಡಬೇಕು ಮತ್ತು ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ತನ್ನ ಗಮನವನ್ನು ಕೇಂದ್ರೀಕರಿಸಬೇಕು. ಶಾಲೆಗಳು, ಕಾಲೇಜುಗಳು, ಪಂಚಾಯತ್ ಮುಂತಾದ ಸಂಸ್ಥೆಗಳ ಮೂಲಕ ವಿಶೇಷ ಚಾಲನೆ ನೀಡಿದರೆ ನಗದುರಹಿತ/ ಬ್ಯಾಂಕಿಂಗ್ ವಹಿವಾಟುಗಳ ಬಗ್ಗೆ ಜಾಗೃತಿ ಮೂಡಿಸಬಹುದಾಗಿದೆ. ಡಿಜಿಟಲ್ ವೇದಿಕೆಗೆ ಹೆಚ್ಚು ಹೆಚ್ಚು ಜನರನ್ನು ಕರೆತರಲು ಆರ್ಥಿಕ ಸಾಕ್ಷರತೆ ಅಗತ್ಯವಾಗಿದೆ. ನಗದು ಪಾವತಿಯ ಬದಲು ಡಿಜಿಟಲ್ ಪಾವತಿ ಅಥವಾ ಬ್ಯಾಂಕ್‌ಗಳ ಮೂಲಕ ಪಾವತಿಯನ್ನು ಪ್ರೋತ್ಸಾಹಿಸಬೇಕು. ಎಲ್ಲ ಸಮಾಜಕಲ್ಯಾಣ ಚಟುವಟಿಕೆಗಳನ್ನು ಬ್ಯಾಂಕ್‌ಗಳೊಂದಿಗೆ ಸೇರ್ಪಡೆಗೊಳಿಸುವುದು ಕಾರ್ಯತಂತ್ರದ ಹೆಜ್ಜೆಯಾಗಿದೆ. ಒಂದು ಬಲವಾದ ಬ್ಯಾಂಕಿಂಗ್ ಆಧಾರ, ನಗದುರಹಿತ ಅರ್ಥವ್ಯವಸ್ಥೆಯ ಮೂಲ ಪೂರ್ವಾಗತ್ಯವಾಗಿದೆ. ಮುಂದಿನ ದಾರಿ ಸ್ಪಷ್ಟವಾಗಿದೆ. ಪ್ರವೇಶಾಧಿಕಾರ, ಮತ್ತು ಜಾಗೃತಿ, ಎಲೆಕ್ಟ್ರಾನಿಕ್ ಪಾವತಿ ಸಾಧನೆ ಮಾಡಲು ರಾಷ್ಟ್ರವ್ಯಾಪಿ ಆರ್ಥಿಕ ಸಾಕ್ಷರತೆ ಆಂದೋಲನದೊಂದಿಗೆ ಮಧ್ಯಮ ಅವಧಿಯ ಕಾರ್ಯತಂತ್ರದಲ್ಲಿ ಸುಧಾರಣೆಯಾಗಬೇಕಾಗಿದೆ. ಆರ್ಥಿಕ ಕೌಶಲಗಳು, ಸಾಲ ನಿರ್ವಹಣೆ ಮತ್ತು ಗ್ರಾಮೀಣ ಭಾರತದಲ್ಲಿ ಹೆಚ್ಚಿನ ಖಾತೆಗಳ ಮಾಲಿಕತ್ವಗಳ ಮೂಲಕ ಆರ್ಥಿಕ ಶಿಕ್ಷಣ ಕಾರ್ಯಕ್ರಮಗಳ ಗುರಿ ಸುಧಾರಣೆ ಮಾಡಬಹುದು. ❑


# ಯೋಜನಾ

## ಮಾರ್ಚ್ 2017 ವಿಶೇಷ ಸಂಚಿಕೆಯ ವಿಷಯ

# ಕೇಂದ್ರ ಮುಂಗಡಪತ್ರ 2017-18

# ಚುನಾವಣೆ; ಕಾಳಧನಕ್ಕೆ ನೋಟು ಅಮಾನ್ಯದ ಅಂಕುಶ




* ಎಸ್. ವೈ. ಖುರೇಶಿ

ಅಭೂತಪೂರ್ವ ಅಮಾನ್ಯೀಕರಣ ಕ್ರಮವು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಲು ವರದಾನವಾಗುವ ವಿಶ್ವಾಸ ಮೂಡಿಸಿದೆ. ಇದೇ ವೇಳೆ ನಗದುರಹಿತ ವ್ಯವಹಾರಗಳು ಹೆಚ್ಚಿನ ಪಾರದರ್ಶಕತೆ ಮತ್ತು ಪರಿಶೀಲನೆಗೆ ಅವಕಾಶ ಒದಗಿಸುತ್ತವೆ.

ಸುದೀರ್ಘ ಕಾಲದಿಂದಲೂ ಚುನಾವಣೆಯಲ್ಲಿ ಗೆಲುವಿಗಾಗಿ ಮತ್ತು ಮತದಾರರ ಮೇಲೆ ಪ್ರಭಾವ ಬೀರುವುದಕ್ಕಾಗಿ ವ್ಯಾಪಕ ಹಣಬಲ ಬಳಕೆಗೆ ಭಾರತದ ರಾಜಕೀಯ ವಲಯ ಸಾಕ್ಷಿಯಾಗುತ್ತಾ ಬಂದಿದೆ.ಭಾರತದಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಸಾಂಪ್ರದಾಯಿಕವಾಗಿ ಇರುವ ತಿಳಿವಳಿಕೆಯೆಂದರೆ, ಮತದಾನದ ಹಿಂದಿನ ದಿನ ರಾತ್ರಿ ಹಂಚಲಾಗುವ ಹಣ ಮತ್ತು ಮದ್ಯವು ಜನಪ್ರತಿನಿಧಿಯೊಬ್ಬನ ಗೆಲುವನ್ನು ನಿರ್ಧರಿಸುತ್ತದೆ.ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ಎಂಬುದನ್ನು ಮಾರಾಟದ ಸರಕಾಗಿಸಿ, ಅದನ್ನು ಹಣದ ಚೀಲವೊಂದರಲ್ಲಿ ತುಂಬಿ ದೇಶಾದ್ಯಂತ ಸುತ್ತುವ ನಮ್ಮ ರಾಜಕೀಯ ಪಕ್ಷಗಳ ಪರಿಪಾಠಕ್ಕೆ ಬಲವಾದ ಸಾಕ್ಷ್ಯಾಧಾರಗಳಿವೆ.

ಪ್ರಜಾಸತಾತ್ಮಕ ಸುಧಾರಣಾಸಂಸ್ಥೆಯ (ಎಡಿಆರ್) ವಿಶ್ಲೇಷಣೆಯಿಂದ ತಿಳಿದುಬರುವುದೇನೆಂದರೆ, 2011ರಲ್ಲಿ ನಡೆದ ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ, ಪುದುಚೆರಿ ಮತ್ತು ಅಸ್ಸಾಂ ವಿಧಾನಸಭಾ ಚುನವಣೆ ಅಭ್ಯರ್ಥಿಗಳು ಸಲ್ಲಿಸಿದ ಪ್ರಮಾಣ ಪತ್ರಗಳ ಪೈಕಿ, 576 ಉಮೇದುವಾರರು (ವಿಶ್ಲೇಷಣೆಗೆ ಒಳಪಡಿಸಲಾದ 3,547 ಮಂದಿಯಲ್ಲಿ ಶೇ.16ರಷ್ಟು) ಕೋಟ್ಯಾಧಿಪತಿಗಳು (ಬಹುಕೋಟಿ ಒಡೆಯರು) ಮತ್ತು ಅಭ್ಯರ್ಥಿಗಳಲ್ಲಿ ಶೇ.50ರಷ್ಟು ಮಂದಿ ತೆರಿಗೆ ಆದಾಯ ರಿಟರ್ನ್ಸ್ ಸಲ್ಲಿಸಿಯೇ ಇಲ್ಲದವರು.ಈ ಪರಿಸ್ಥಿತಿ ಇತರ ರಾಜ್ಯಗಳಲ್ಲೇನೂ ಭಿನ್ನವಾಗಿಲ್ಲ.

ಚುನಾವಣೆಯಲ್ಲಿ ಬಿತ್ತಲಾದ ಭ್ರಷ್ಟಾಚಾರದ ಬೀಜ, ಅಂತಿಮವಾಗಿ ದೇಶದ ಆಡಳಿತದಲ್ಲಿ ಮೊಳಕೆಯೊಡೆಯುತ್ತದೆ. ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷಗಳು ಪ್ರಚಾರಕ್ಕಾಗಿ ಕೋಟ್ಯಾಂತರ ರೂಪಾಯಿ ವ್ಯಯಿಸುವುದರಿಂದ, ಅವರು ಅಧಿಕಾರಕ್ಕೆ ಬಂದ ಮೇಲೆ ಸಾಕಷ್ಟು ನಿಧಿಯನ್ನು ಸಂಪಾದಿಸಲೇಬೇಕು. ಅನಿವಾರ್ಯತೆಯಿಂದಾಗಿ ತಲೆಯೆತ್ತುವ ಈ 'ಸಂಗ್ರಹ ಚಳವಳಿ' ರಾಜಕಾರಣಿ–ಅಧಿಕಾರಶಾಹಿ ನಡುವಿನ ನಂಟಿಗೆ ದಾರಿ ಮಾಡುತ್ತದೆ.ಆಡಳಿತದ ಎರಡು ಪ್ರಮುಖ ಅಂಗಗಳು ಈ ರೀತಿ ಅಕ್ರಮ ಸಂಬಂಧದಲ್ಲಿ ಕೈ ಜೋಡಿಸಿದಾಗ, ಭ್ರಷ್ಟಾಚಾರವು ದಶದಿಕ್ಕುಗಳಲ್ಲೂ ಹಬ್ಬಿ, ಕೊನೆಗೆ ಜೀವನದ ಪ್ರತಿ ಸ್ತರಕ್ಕೂ ವ್ಯಾಪಿಸುತ್ತದೆ. ಪೇದೆಗಳು ಅಥವಾ 'ಪತ್ವಾರಿ'ಗಳಂತಹ ಅತ್ಯಂತ ಕೆಳ ಹಂತದಲ್ಲಿರುವ ನೌಕರರನ್ನು ಮಾತನಾಡಿಸಿದರೂ, ಸಿದ್ಧ ಉತ್ತರ ಧುತ್ತನೆ ಪ್ರತಿಕ್ರಿಯೆಯಾಗಿ ಹೊರಹೊಮ್ಮುತ್ತದೆ – "ಊಪರ್ ತಕ್ ದೇನಾ ಹೈ" (ನಾವು ಮೇಲಿನವರೆಗೂ ಸಲ್ಲಿಸಬೇಕು)...

### ರಾಜ್ಯಗಳಿಗೆ ಸರ್ಕಾರದ ನಿಧಿ

ಚುನಾವಣೆಗಾಗಿ ಹುಚ್ಚಾಪಟ್ಟೆ ಹಣ ಖರ್ಚು ಮಾಡುವ ಬಗ್ಗೆ ರಾಜಕೀಯ ಪಕ್ಷಗಳೇನೂ ಖುಷಿಯಾಗಿಲ್ಲ. ಅವುಗಳೂ ಸಹ ಈ ಬಗ್ಗೆ ಕಳವಳ ವ್ಯಕ್ತಪಡಿಸಿವೆ. ಆದರೆ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಗಂಭೀರ ಚರ್ಚೆಯ ಅನುಪಸ್ಥಿತಿಯ ಹಿನ್ನೆಲೆಯಲ್ಲಿ ಅವುಗಳ ಕಳವಳ ಕೇವಲ

* ಭಾರತದ ನಿವೃತ್ತ ಮುಖ್ಯ ಚುನಾವಣಾ ಆಯುಕ್ತರು. E-mail : syquraishi@gmail.com

ಬಾಯಿಮಾತಿಗಷ್ಟೇ ಸೀಮಿತವಾಗಿದೆ.ಈ ಸಮಸ್ಯೆ ಕುರಿತಾಗಿ ಸಂಸದೀಯ ಚರ್ಚೆಗಳು ನಡೆದಿವೆ, ಸಮಿತಿಗಳು ರಚನೆಯಾಗಿವೆ. ಆದರೆ, ಇದೆಲ್ಲದರ ಬಳಿಕ ನಮಗೆ ಕೇಳಿಸುವ ಒಂದೇ ಒಂದು ದನಿ ಎಂದರೆ, ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರವೇ ನಿಧಿ ಪೂರೈಸಬೇಕು.

ಈ ವಿಷಯಕ್ಕೆ ಸಂಬಂಧಿಸಿದಂತೆ ಅತ್ಯಂತ ಜನಪ್ರಿಯ ಸಮಿತಿಯೆಂದರೆ, 'ಇಂದ್ರಜಿತ್ ಗುಪ್ತಾ ಸಮಿತಿ'. 1999ರಲ್ಲಿ ರಚಿಸಲಾದ ಈ ಸಮಿತಿಯು ಡಾ.ಮನಮೋಹನ್ ಸಿಂಗ್, ಮಾನ್ಯ ಸೋಮನಾಥ್ ಚಟರ್ಜಿ ಅವರಂತಹ ಹಲವು ರಾಜಕೀಯ ಧುರೀಣರನ್ನು ಒಳಗೊಂಡಿತ್ತು. ಚುನಾವಣೆಗೆ ಸರ್ಕಾರ ಕೇವಲ ಭಾಗಶಃ ನಿಧಿ ಒದಗಿಸಬೇಕು, ಅದೂ ಸಹ ಪಕ್ಷದಲ್ಲಿ ನೈಜ ಆಂತರಿಕ ಪ್ರಜಾಭುತ್ವ ಇದ್ದಲ್ಲಿ ಮಾತ್ರ ಎಂಬ ಷರತ್ತು ವಿಧಿಸಿ ಈ ಸಮಿತಿ ತನ್ನ ಶಿಫಾರಸನ್ನು ಮುಂದಿಟ್ಟಿತು.ಆದರೆ, ಯಾವ ರಾಜಕೀಯ ಪಕ್ಷವೂ ಇದನ್ನು ಒಪ್ಪಲು ಸಿದ್ಧವಿರಲಿಲ್ಲ.

ಮತದಾರರನ್ನು ಸೆಳೆಯಲು ಮತದಾನಕ್ಕೆ ಮುನ್ನ ಹಣ ಹಂಚುವ ಬಗ್ಗೆ ಭಾರತೀಯ ಚುನಾವಣಾ ಆಯೋಗ ತೀವ್ರ ಕಳವಳ ಹೊಂದಿದೆ. ಭಾರತದ ಮುಖ್ಯ ಚುನಾವಣಾ ಆಯುಕ್ತರಾಗಿ (ಸಿಇಸಿ) ಅಧಿಕಾರ ವಹಿಸಿಕೊಂಡಾಗ ನನ್ನ ಹಲವು ಆರಂಭಿಕ ಪತ್ರಿಕಾಗೋಷ್ಠಿಗಳಲ್ಲಿ, ನನಗೆ ನಾನು ಎರಡು ಸವಾಲುಗಳನ್ನು ಒಡ್ಡಿಕೊಂಡಿದ್ದೆ. ಅವುಗಳೆಂದರೆ – ಹಣದ ದುರುಪಯೋಗ ಮತ್ತು ಮತದಾರರ ನಿರುತ್ಸಾಹ.ಈ ಸಮಸ್ಯೆಗಳನ್ನು ಗಂಭೀರವಾಗಿ ಎದುರಿಸಲು ಎರಡು ವಿಭಾಗಗಳನ್ನು ರಚಿಸಲಾಯಿತು. ಎರಡೂ ಸಹ ಭಾರಿ ಯಶಸ್ಸು ಗಳಿಸಿದವು.

ಒಂದು ವಿಭಾಗ ಅದುವರೆಗಿನ ಗರಿಷ್ಠ ಮತದಾನವನ್ನು ಸಾಧಿಸಿದರೆ, ಮತ್ತೊಂದು ವಿಭಾಗ ಕೋಟ್ಯಾಂತರ ರೂಪಾಯಿ ಹಣ ಮತ್ತು ಮದ್ಯ ಸೇರಿದಂತೆ ಇತರ ವಸ್ತುಗಳನ್ನು ಬಯಲಿಗೆಳೆಯಿತು. ನಮ್ಮ ಕ್ರಿಯಾಶೀಲ ಕ್ರಮಗಳಿಂದಾಗಿ, ಉತ್ತರ ಪ್ರದೇಶದ ಹಾಲಿ ಶಾಸಕರೊಬ್ಬರನ್ನು ವಜಾಗೊಳಿಸುವ ಮತ್ತು ಅನರ್ಹಗೊಳಿಸುವುದು ಮತ್ತು ಜಾರ್ಖಂಡ್‌ನಲ್ಲಿ ಎರಡು ರಾಜ್ಯಸಭಾ ಚುನಾವಣೆಗಳನ್ನು ರದ್ದುಗೊಳಿಸುವುದು ಸೇರಿದಂತೆ ಕೆಲವೊಂದು ಹೆಗ್ಗುರುತು ಎನಿಸುವಂತಹ ಸಾಧನೆಗಳು ಸಾಧ್ಯವಾದವು.




ಜೊತೆ ಜೊತೆಯಲ್ಲೇ, ಮತದಾರರನ್ನು ಮತಕ್ಕಾಗಿ ಹಣ ಪಡೆಯದಂತೆ ಪ್ರೇರೇಪಿಸುವ ಮತ್ತು ಅವರಲ್ಲಿ ಅರಿವು ಮೂಡಿಸುವ ಉದ್ದೇಶದ ಮತದಾರ ಶಿಕ್ಷಣ ಕಾರ್ಯಕ್ರಮವನ್ನೂ ಕೈಗೊಳ್ಳಲಾಯಿತು. 2011ರಿಂದ ಪ್ರತಿವರ್ಷ ಜನವರಿ 25ರಂದು ಆಚರಿಸಲಾಗುತ್ತಿರುವ ಮತ್ತು ವಿಶ್ವದಲ್ಲೇ ಅತಿದೊಡ್ಡ ಮತದಾರ ನೊಂದಣಿ ಕಾರ್ಯಕ್ರಮ ಎನಿಸಿರುವ 'ರಾಷ್ಟ್ರೀಯ ಮತದಾರರ ದಿನ'ದಂದು (ಎನ್‌ವಿಡಿ), ಹೊಸ ಮತದಾರರಿಗೆ ಅದರಲ್ಲೂ ಬಹುತೇಕ ಯುವ ಮತದಾರರಿಗೆ ನೈತಿಕ ಮತದಾನದ ಸಂಕಲ್ಪ ದೀಕ್ಷೆ ನೀಡಲಾಯಿತು. ಇದುವರೆಗೂ ಬಹುತೇಕ 140 ದಶಲಕ್ಷ ಮತದಾರರು ಈ ಸಂಕಲ್ಪ ದೀಕ್ಷೆ ಸ್ವೀಕರಿಸಿದ್ದಾರೆ.

ಕ್ರಿಯಾಶೀಲ ವೆಚ್ಚ ನಿಯಂತ್ರಣ ವಿಭಾಗ, ಮತದಾರ ಶಿಕ್ಷಣ ವಿಭಾಗ ಮತ್ತು ಮಾಧ್ಯಮ, ಸಮಾಜದ ತೀವ್ರ ನಿಗಾ ಹಿನ್ನೆಲೆಯಲ್ಲಿ, ಚುನಾವಣಾ ನೀತಿ ಸಂಹಿತೆಯಿಂದ ತಪ್ಪಿಸಿಕೊಳ್ಳಲು ಚುನಾವಣಾ ವೆಚ್ಚದಲ್ಲಿ ವ್ಯತ್ಯಾಸ ತೋರಿಸುವುದು ಕಷ್ಟಸಾಧ್ಯವಾಗಿ ಪರಿಣಮಿಸುತ್ತಿದೆ.

ಆದರೆ, ವಾಸ್ತವದಲ್ಲಿ ಕಪ್ಪುಹಣ ಇನ್ನೂ ಮುಂದುವರಿದಿರುವುದು ದುರದೃಷ್ಟಕರ ವಿಷಯ.

ಚುನಾವಣೆಗೆ ಸ್ಪರ್ಧಿಸಲು ಹಣವಿಲ್ಲದೆ, ಪ್ರಜಾಪ್ರಭುತ್ವ ಕಾರ್ಯನಿರ್ವಹಿಸುವುದು ಸಾಧ್ಯವಿಲ್ಲ ಎಂಬುದು ವಾಸ್ತವ. ಆದರೆ, ಇಡೀ ಪ್ರಕ್ರಿಯೆಯನ್ನು ಹಣವೇ ನಿಯಂತ್ರಿಸಲು ಮತ್ತು ಕೇವಲ ಶ್ರೀಮಂತರು ಮಾತ್ರ ಚುನಾವಣೆಗೆ ಸ್ಪರ್ಧಿಸಿ ರಾಜಕೀಯ



ವ್ಯವಸ್ಥೆಯನ್ನು ಹೈಜಾಕ್ ಮಾಡಲು ಅವಕಾಶ ನೀಡಬಾರದು.

ಆದ್ದರಿಂದ ಅಭ್ಯರ್ಥಿಗಳ ವೆಚ್ಚದ ಮೇಲೆ ಸರ್ಕಾರ ಮಿತಿಯನ್ನು ನಿಗದಿಗೊಳಿಸಿದೆ – ಆದರೂ, ವಿಚಿತ್ರವೆಂದರೆ ರಾಜಕೀಯ ಪಕ್ಷಗಳ ವೆಚ್ಚಕ್ಕೆ ಇದು ಅನ್ವಯಿಸುವುದಿಲ್ಲ. ರಾಜಕೀಯ ಪಕ್ಷಗಳ ವೆಚ್ಚದ ಮೇಲೆ ನಿರ್ಬಂಧ ಇಲ್ಲದಿರುವುದು ಅಭ್ಯರ್ಥಿಗಳ ವೆಚ್ಚಕ್ಕೆ ಮಿತಿ ವಿಧಿಸುವ ತರ್ಕವನ್ನೇ ಅರ್ಥಹೀನವನ್ನಾಗಿಸುತ್ತದೆ ಮತ್ತು ಆರ್ಥಿಕ ಅಶಿಸ್ತಿನ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ಪ್ರತಿಸ್ಪರ್ಧಿಗಳನ್ನು ಮೀರಿಸುವ ಸಲುವಾಗಿ ಎಲ್ಲಾ ಪಕ್ಷಗಳೂ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತವೆ. 2014ರ ಸಾರ್ವತ್ರಿಕ ಚುನಾವಣೆಯಲ್ಲಿ, ಪ್ರಚಾರಕ್ಕಾಗಿ ಬರೋಬ್ಬರಿ 30,000 ಕೋಟಿ ರೂ.ಖರ್ಚು ಮಾಡಲಾಗಿದೆ ಎಂದು ಅಂದಾಜಿಸಲಾಗಿದೆ.

ಈ ಹಣ ಎಲ್ಲಿಂದ ಬರುತ್ತದೆ? ಹಣದ ಮೂಲವು– ಕಾರ್ಪೊರೇಟ್ ಫಂಡ್, ಸಣ್ಣಪುಟ್ಟ ದೇಣಿಗೆಗಳು, ಕೂಪನ್‌ಗಳ ಮಾರಾಟ ಮತ್ತು ಸದಸ್ಯತ್ವ ಶುಲ್ಕದಿಂದ ಬರಬಹುದು. ಇದಲ್ಲದೆ, ಠೇವಣಿಗಳ ಮೇಲೆ ಬಡ್ಡಿ, ಬಾಡಿಗೆ ಮತ್ತು ಕಂದಾಯ ಮೂಲದಿಂದಲೂ ಆದಾಯ ಬರಬಹುದು. ಆದರೆ, ಬಹುತೇಕ ದೇಣಿಗೆಗಳ ಮೂಲದ ಬಗ್ಗೆ ಯಾವುದೇ ಪಾರದರ್ಶಕತೆ ಇಲ್ಲ. ಸುಮಾರು ಶೇ.75 ರಿಂದ 80ರಷ್ಟು ದೇಣಿಗೆಗಳನ್ನು ನಗದು ರೂಪದ ದೇಣಿಗೆಗಳೆಂದು ತೋರಿಸಲಾಗುತ್ತದೆಯಾದರೂ, ಅದರ ಮೂಲವನ್ನು ಬಹಿರಂಗಪಡಿಸುವುದಿಲ್ಲ. ಇದು ಗಂಭೀರ ವಿಚಾರ. ಇದು ವಿದೇಶಿ ಹಣ ಆಗಿರಬಹುದು ಅಥವಾ ಅಪರಾಧ, ಮಾದಕ ಪದಾರ್ಥ ಅಥವಾ ರಿಯಲ್ ಎಸ್ಟೇಟ್ ಮಾಫಿಯಾವೂ ಈ ಹಣದ ಮೂಲವಾಗಿರಬಹುದು.

'ಓಟಿಗಾಗಿ ನೋಟು' ಕುಖ್ಯಾತಿಯನ್ನು ನಮ್ಮ ಚುನಾವಣೆಗಳ ಸಾಮಾನ್ಯ ಲಕ್ಷಣವೆಂಬಂತೆ ಅಮೆರಿಕದ ರಾಜತಾಂತ್ರಿಕ ವಾಹಿನಿಗಳ ಮೂಲಕ ಬಿಂಬಿಸಲಾಗಿದೆ ಮತ್ತು 'ವಿಕಿಲೀಕ್ಸ್' ಇದನ್ನು ಸೋರಿಕೆ ಮಾಡಿದೆ. 2009ರ ಉಪ ಚುನಾವಣೆಯಲ್ಲಿ ಪ್ರತಿ ಮತದಾರರಿಗೆ 5,000 ರೂ. ಹಂಚುತ್ತಿರುವ ಬಗ್ಗೆ ತಮಿಳುನಾಡು ಮೂಲದ ಕೇಂದ್ರ ಸಚಿವರೊಬ್ಬರ ಆಪ್ತರೊಬ್ಬರು ನೀಡಿದ ಹೇಳಿಕೆಯನ್ನು ಒಂದು ವಾಹಿನಿಯಲ್ಲಿ

ಉಲ್ಲೇಖಿಸಲಾಗಿತ್ತು. ಅವರ ಗೆಲುವಿನ ನಂತರ, ಹಣ ಹಂಚಿಕೆಯೇ ಅವರ ಖಚಿತ ಗೆಲುವಿನ ಸೂತ್ರ ಎಂದು ಆ ವ್ಯಕ್ತಿ ಪ್ರಕಟಿಸಿದರು.ಈ "ತಿರುಮಂಗಲಂ ಸೂತ್ರ"ವು ನಮಗೆ ಅತಿದೊಡ್ಡ ಸವಾಲಾಗಿ ಮಾರ್ಪಟ್ಟಿತ್ತು.

2014ರ ಚುನಾವಣೆ ವೇಳೆ ಸುಮಾರು 300 ಕೋಟಿ ರೂ. ಅಕ್ರಮ ಹಣವನ್ನು ಆಯೋಗ ವಶಪಡಿಸಿಕೊಂಡಿತು. 2014ರ ಬಳಿಕ ಎಲ್ಲ ವಿಧಾನಸಭಾ ಚುನಾವಣೆಗಳಲ್ಲಿ ಮಾಡಲಾದ ಹಣದ ಜಪ್ತಿ ಪ್ರಮಾಣವು ಇದುವರೆಗಿನ ಗರಿಷ್ಠ ದಾಖಲೆ ಎನಿಸಿದೆ. ಉದಾಹರಣೆಗೆ, 2015ರ ವಿಧಾನಸಭಾ ಚುನಾವಣೆಯಲ್ಲಿ ಬಿಹಾರದಲ್ಲಿ ಅತ್ಯಧಿಕ ಹಣ (19 ಕೋಟಿ ರೂ.) ಜಪ್ತಿಯಾಗಿದೆ. ತಮಿಳುನಾಡಿನಲ್ಲಿ ಈ ಮೊತ್ತ 100 ಕೋಟಿ ರೂ. ದಾಟಿದೆ.

ಇಂದು ರಾಜಕಾರಣಿಗಳೆಲ್ಲ ಭ್ರಷ್ಟರೆಂಬ ಅಭಿಪ್ರಾಯ ಸಾರ್ವಜನಿಕರಲ್ಲಿ ಮನೆಮಾಡಿದೆ. ರಾಜಕಾರಣಿಗಳ ಬಗ್ಗೆ ಅಂತಹ ಒಂದು ಅಭಿಪ್ರಾಯ ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ. ದೇಶದಲ್ಲಿ ನಾವು ಪ್ರಾಮಾಣಿಕ ರಾಜಕಾರಣಿಗಳ ಶ್ರೇಷ್ಠ ಪರಂಪರೆಯನ್ನು ಹೊಂದಿದ್ದೇವೆ. ನಿಜವಾಗಿಯೂ ಹೇಳಬೇಕೆಂದರೆ, ಭಾರತ ದೈತ್ಯ ರಾಷ್ಟ್ರವಾಗಿ ಬೆಳೆದದ್ದು ಮುಖ್ಯವಾಗಿ ನಾವು ಹೊಂದಿದ್ದ ಇಂತಹ ಶ್ರೇಷ್ಠ ರಾಜಕಾರಣಿಗಳಿಂದಲೇ.

ಭಾರತದಲ್ಲಿ, ವಿಶೇಷವಾಗಿ ದೇಶದ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ದೊಡ್ಡ ಪ್ರಮಾಣದ ಕಪ್ಪು ಹಣ ಇದ್ದ ಕಾರಣದಿಂದಲೇ, 2008ರಲ್ಲಿ ವಿಶ್ವಾದ್ಯಂತ ಕಂಡುಬಂದ ಆರ್ಥಿಕ ಹಿಂಜರಿತದ ದುಷ್ಪರಿಣಾಮಗಳು ಭಾರತಕ್ಕೆ ಅಷ್ಟಾಗಿ ತಟ್ಟಲಿಲ್ಲ ಎಂದು ಹೇಳಲಾಗುತ್ತದೆ. ಆದರೆ, ಭಾರತದಲ್ಲಿ ಚುನಾವಣೆಗಳ ಮೇಲೆ ಹಣದ ಪ್ರಭಾವವು ವಿನಾಶಕಾರಿ ಪರಿಣಾಮ ಬೀರುತ್ತಿದೆ. ಪ್ರಧಾನ ಮಂತ್ರಿಗಳು



ಘೋಷಿಸಿದ 500 ರೂ. ಮತ್ತು 1,000 ರೂ. ನೋಟುಗಳ ಅಮಾನ್ಯೀಕರಣವು ಪಂಚ ರಾಜ್ಯಗಳ ಚುನಾವಣೆಗೆ ಮುನ್ನ, ಸರಿಯಾದ ಸಮಯದಲ್ಲೇ ನಡೆದಿದೆ. ಸಾರ್ವಜನಿಕರಿಗೆ ಹಂಚಲು ಚೀಲಗಟ್ಟಲೆ ನೋಟುಗಳನ್ನು ಸಿದ್ಧಪಡಿಸಿಕೊಂಡಿದ್ದ ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷಗಳು, ಹಣವನ್ನು ಏನು ಮಾಡಬೇಕೆಂದು ದಿಕ್ಕು ತೋಚದೆ ಸಂದಿಗ್ಧಕ್ಕೆ ಸಿಲುಕಿದರು.

ನನಗೆ ವೈಯಕ್ತಿಕವಾಗಿ ಅನಿಸುವ ಪ್ರಕಾರ, ಈ ಕ್ರಮವು ಪ್ರಸಕ್ತ ನಡೆಯುತ್ತಿರುವ ಚುನಾವಣೆಗಳ ಮೇಲೆ ಭಾರಿ ಪರಿಣಾಮ ಬೀರಲಿದೆ.ಏಕೆಂದರೆ, ಕಪ್ಪುಹಣವು ಹಂಚಿಕೆಯ ಹಾದಿಯಲ್ಲಿರುವುದು ಇದೇ ಸಮಯದಲ್ಲಿ. ಚುನಾವಣೆ ವೇಳೆ ತನ್ನ ಕಬಂಧ ಬಾಹುಗಳನ್ನು ಚಾಚುವ, ಗಡಿಭಾಗದಲ್ಲಿ ಚಲಾವಣೆಗೊಳ್ಳುವ ನಕಲಿ ನೋಟುಗಳಿಗೂ ಈ ಕ್ರಮ ಭಾರಿ ಪೆಟ್ಟು ನೀಡಿದೆ.

ಮೊದಮೊದಲು, ಮತದಾನದ ದಿನಾಂಕ ಹತ್ತಿರವಿದ್ದಾಗ ಮತ್ತು ನೀತಿ ಸಂಹಿತೆ ಜಾರಿಗೊಂಡ ನಂತರ ಹಣದ ಹಂಚಿಕೆ ನಡೆಯುತ್ತಿತ್ತು. ಆದರೆ, ಚುನಾವಣಾ ಆಯೋಗವು ಇದರ ವಿರುದ್ಧ ಕ್ರಮ ಜರುಗಿಸಲು ಮುಂದಾದ ಹಿನ್ನೆಲೆಯಲ್ಲಿ, ರಾಜಕೀಯ ಪಕ್ಷಗಳು ಮುಂಚಿತವಾಗಿಯೇ ಹಣ ಹಂಚಿಕೆ ಮಾಡಲು ಆರಂಭಿಸಿವೆ. ಆದ್ದರಿಂದ ಚುನಾವಣೆಗೆ ಕೆಲವೇ ವಾರಗಳ ಮುನ್ನ ನಗದು ಅಮಾನ್ಯ ಘೋಷಣೆಯಾಗಿದ್ದು ಹಣ ಹಂಚಿಕೆ ಕಾರ್ಯವ್ಯೂಹಗಳಿಗೆ ಸರಿಯಾದ ಸಮಯಕ್ಕೆ ಬಲವಾದ ಹೊಡೆತ ನೀಡಿದಂತಾಗಿದೆ.

ನನ್ನ – "ಎನ್ ಅನ್‌ಡಾಕ್ಯುಮೆಂಟೆಡ್ ವಂಡರ್–ದಿ ಮೇಕಿಂಗ್ ಆಫ್ ದಿ ಗ್ರೇಟ್ ಇಂಡಿಯನ್ ಎಲೆಕ್ಷನ್" ಪುಸ್ತಕದಲ್ಲಿ, ಚುನಾವಣೆ ವೇಳೆ ನಾವು ಪತ್ತೆ ಮಾಡಿದ 40 ಕಪ್ಪುಹಣ ಸಾಗಣೆ ಮಾರ್ಗಗಳ ಬಗ್ಗೆ ವಿವರಿಸಿದ್ದೇನೆ. ಮತ್ತೆ ಆ ಕೆಲಸ ಮಾಡಲು ಹೊಸ ಮಾರ್ಗಗಳು ಹುಟ್ಟಿಕೊಳ್ಳುತ್ತವೆ ಎಂಬುದರಲ್ಲಿ ನನಗೆ ಎಳ್ಳಷ್ಟೂ ಅನುಮಾನವಿಲ್ಲ. ಆದರೆ, ಅದಕ್ಕೆ ಸಮಯ ಬೇಕು. ಸದ್ಯಕ್ಕೆ ಈಗ ನಡೆಯುತ್ತಿರುವ ಚುನಾವಣೆಗಳು ಅಕ್ರಮ ಹಣದ ಪ್ರವಾಹದಿಂದ ತಪ್ಪಿಸಿಕೊಳ್ಳಲಿವೆ. ನಗದು ಅಮಾನ್ಯೀಕರಣದ ಲಾಭಗಳನ್ನು ಲೆಕ್ಕ ಹಾಕುವಾಗ, ಚುನಾವಣೆ



ವಿಚಾರದಲ್ಲಿ ಕಲಿತ ಪಾಠಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಪ್ರಧಾನ ಮಂತ್ರಿಗಳು ನಗದು ಅಮಾನ್ಯೀಕರಣ ನಿರ್ಧಾರ ಪ್ರಕಟಿಸಿದ ಒಂದೆರಡು ದಿನಗಳಲ್ಲೇ ನಾನು ದಿನಪತ್ರಿಕೆಯೊಂದಕ್ಕೆ ಬರೆದ ಲೇಖನದಲ್ಲಿ ಆ ನಿರ್ಧಾರವನ್ನು ಬಾಧಿಸಬಹುದಾದ ಕಳವಳವನ್ನು ವ್ಯಕ್ತಪಡಿಸಿದ್ದೆ. ಬ್ಯಾಂಕ್ ಅಧಿಕಾರಿಗಳನ್ನೊಳಗೊಂಡ ಸಂಕೀರ್ಣತೆಯೊಂದಿಗೆ ಹೊಸ ಅಕ್ರಮ ವ್ಯವಹಾರವೊಂದು ಉದ್ಯಮ ರೂಪದಲ್ಲಿ ತಲೆ ಎತ್ತಲಿದೆ ಹೇಳಿದ್ದೆ. ನನ್ನ ಭವಿಷ್ಯ ನಿಜವಾಗಿತ್ತು. ಎಲ್ಲೆಲ್ಲೂ ಇರುವ ಮಧ್ಯವರ್ತಿಗಳು ಮತ್ತು ಒಳಸಂಚುಕೋರ ಬ್ಯಾಂಕ್ ಅಧಿಕಾರಿಗಳ ಬಗ್ಗೆ ನಾನು ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ಇದು ನನ್ನ ಅನುಭವದಿಂದ ನೀಡಿದ ಸಲಹೆಯಾಗಿತ್ತು.

ನಮ್ಮ (ಚುನಾವಣಾ ಆಯೋಗದ) ವಿಚಕ್ಷಣಾ ತಂಡವು, 2 ಕೋಟಿ ರೂ.ಗಿಂತಲೂ ಹೆಚ್ಚು ಹಣ ಸಾಗಿಸುತ್ತಿದ್ದ ವಾಹನವೊಂದನ್ನು ತಡೆದಿತ್ತು. ಆ ಹಣವನ್ನು ಎಟಿಎಂ ಮರುಭರ್ತಿಗೆ ಕೊಂಡೊಯ್ಯುತ್ತಿರುವುದಾಗಿ ನಮಗೆ ಹೇಳಲಾಯಿತು. ಹಾಗಾಗಿ, ನಾವು ಕ್ಷಮೆ ಕೋರಿ ಅವರನ್ನು ಬಿಟ್ಟುಬಿಟ್ಟೆವು. ಮರುದಿನವೇ, ದುಪ್ಪಟ್ಟು ಹಣ ಸಾಗಿಸುತ್ತಾ ಅದೇ ವಿವರಣೆ ನೀಡಿದ ಮತ್ತೊಂದು ವಾಹನ ಬೇರೊಂದು ವಿಚಕ್ಷಣಾ ತಂಡಕ್ಕೆ ಸಿಕ್ಕಿಬಿತ್ತು. ಮೂರನೇ ವಾಹನವನ್ನು ತಡೆದಾಗ ಅದರಲ್ಲಿದ್ದದ್ದು 11 ಕೋಟಿ ರೂಪಾಯಿ. ನಾವು ತನಿಖೆ ನಡೆಸಲು ನಿರ್ಧರಿಸಿದೆವು. ಆಗ, ಆ ವಾಹನದಲ್ಲಿ ಯಾವುದೇ ಭದ್ರತಾ ಸಿಬ್ಬಂದಿ ಇಲ್ಲದಿರುವುದು ಮತ್ತು ಇತರ ಯಾವುದೇ ಕಡ್ಡಾಯ ಭದ್ರತಾ ನಿಯಮಗಳನ್ನು ಪಾಲಿಸದಿರುವುದು ನಮ್ಮ ಕಣ್ಣಿಗೆ ಬಿದ್ದಿತು. ನಾನು ಕೂಡಲೇ ಆಗಿನ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಗವರ್ನರ್ ಶ್ರೀ ಡಿ. ಸುಬ್ಬಾರಾವ್ ಅವರೊಂದಿಗೆ ಮಾತನಾಡಿದೆ. ಅವರು ಈ ರೀತಿಯ ಅವ್ಯವಹಾರದ ಬಗ್ಗೆ ಆಘಾತಗೊಂಡಿದ್ದಲ್ಲದೆ, ಪ್ರಕರಣದ ತನಿಖೆಗೆ ಆದೇಶಿಸಿದರು.

2016ರ ಮೇನಲ್ಲಿ ಕೊನೆಗೊಂಡ ವಿಧಾನಸಭೆ ಚುನಾವಣೆಯೊಂದರಲ್ಲಿ, ನಾವು ಅದೇ ಮೊದಲಬಾರಿಗೆ ಹಿಂದೆಂದೂ ಕೈಗೊಳ್ಳದಂತಹ ಕ್ರಮವೊಂದನ್ನು ಕೈಗೊಂಡಿದ್ದೆವು. ಅನಿಯಂತ್ರಿತ ಹಣದ ಹರಿವಿನ ಹಿನ್ನೆಲೆಯಲ್ಲಿ ತಮಿಳುನಾಡಿನ ಅರವಕುರಿಚಿ ಮತ್ತು ತಂಜಾವೂರು ಕ್ಷೇತ್ರಗಳಲ್ಲಿನ ಚುನಾವಣೆಯನ್ನೇ ರದ್ದುಪಡಿಸಬೇಕಾದ ಅನಿವಾರ್ಯತೆಗೆ ಆಯೋಗ ಸಿಲುಕಿತ್ತು.

ಆಗ ಚುನಾವಣಾ ಆಯೋಗ ಸರ್ಕಾರಕ್ಕೆ ಪತ್ರ ಬರೆದು, ಕಪ್ಪುಹಣ ಬಳಕೆ ಕುರಿತು ನಂಬಲಾರ್ಹ ಸಾಕ್ಷ್ಯಾಧಾರಗಳು ದೊರೆತರೆ ಚುನಾವಣೆಯನ್ನು ರದ್ದುಪಡಿಸುವ ಶಾಶ್ವತ ಶಾಸನಬದ್ಧ ಅಧಿಕಾರ ನೀಡುವಂತೆ ಕೋರಿತ್ತು.ಆಗಿನ ಕಾನೂನು ಸಚಿವಾಲಯ ಈ ಪ್ರಸ್ತಾಪವನ್ನು ತಿರಸ್ಕರಿಸಿತ್ತಾದರೂ, ಕಪ್ಪುಹಣದ ವಿರುದ್ಧ ತಮ್ಮ ಸಮರ ಮುಂದುವರಿಸುವ ಸಲುವಾಗಿ ಈಗಿನ ಪ್ರಧಾನಿಗಳು ಇದನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ.

ಬಿಜೆಪಿಯ ಆರ್ಥಿಕ ವ್ಯವಹಾರ ಕೋಶದ ಮುಖ್ಯಸ್ಥರಾದ ಶ್ರೀ ಗೋಪಾಲ್ ಕೃಷ್ಣ ಅಗರ್‌ವಾಲ್ ಅವರು, ನಗದು ಅಮಾನ್ಯೀಕರಣ ಕ್ರಮದಿಂದಾಗಿ ಕನಿಷ್ಠ ಈಗಿನ ಚುನಾವಣೆಯಲ್ಲಾದರೂ ಪೂರೈಕೆ ದೃಷ್ಟಿಯಿಂದ ಚುನಾವಣಾ ಹಣಕಾಸು ಸಮಸ್ಯೆ ನಿವಾರಣೆಯಾಗುತ್ತದೆ ಎಂದು ಹೇಳಿದ್ದರು. "ಇದುವರೆಗೂ ರಾಜಕೀಯ ಪಕ್ಷಗಳ ಮೇಲೆ, ಅವುಗಳು ಚುನಾವಣೆಗೆ ಮಾಡಿದ ಖರ್ಚಿನ ಲೆಕ್ಕ ನೀಡಬೇಕೆಂಬ ಒತ್ತಡವಿರುತ್ತಿತ್ತು. ಆದರೆ, ಈ ಹಣದ ಚಲಾವಣೆ ಮತ್ತು ನಿಯಂತ್ರಣ ಪರಿಣಾಮಕಾರಿಯಾಗಿರಲಿಲ್ಲ. ಇದು ಪೂರೈಕೆಗೆ ಸಂಬಂಧಿಸಿದಂತೆ ಹೊಡೆತ ನೀಡಲಿದ್ದು, ಖರ್ಚಿನ ಪ್ರಮಾಣವನ್ನು ಗಣನೀಯವಾಗಿ ಇಳಿಕೆ ಮಾಡುತ್ತದೆ," ಎಂದು ಅವರು ಹೇಳಿದ್ದರು. ಸುದೀರ್ಘ ಕಾಲದಿಂದ ಬಾಕಿ ಉಳಿದಿರುವ ಚುನಾವಣಾ ಸುಧಾರಣೆ ಪ್ರಸ್ತಾವಗಳನ್ನು ಯಾವುದೇ ವಿಳಂಬವಿಲ್ಲದೆ ಕೈಗೆತ್ತಿಕೊಳ್ಳುವ ಮೂಲಕ ಮುಂದಿನ ಕ್ರಮಗಳನ್ನು ಕೈಗೊಂಡರೆ ಮಾತ್ರ ಈ ವಾದಗಳು ಸರಿಯೆಂದು ಸಾಬೀತಾಗುತ್ತವೆ.




ಚುನಾವಣಾ ನಿಗಾ ಸಂಸ್ಥೆಯಾಗಿರುವ 'ಪ್ರಜಾಸತಾತ್ಮಕ ಹಕ್ಕುಗಳ ಸಂಸ್ಥೆ'ಯ (ಎಡಿಆರ್) ಡಾ. ತ್ರಿಲೋಚನ್ ಶಾಸ್ತ್ರಿ ಅವರು ಹೇಳುವ ಪ್ರಕಾರ, ಜನರಿಗೆ ಹಂಚಲು ಲಭ್ಯವಾಗುವ ಹಣದ ಮೇಲೆ ಇದು ಪರಿಣಾಮ ಬೀರುತ್ತದೆಯಾದರೂ, ಇದೇ ವೇಳೆ ಇದನ್ನು ಸರಿಪಡಿಸಲು ಸರ್ಕಾರದ ಬೊಕ್ಕಸದಿಂದಲೇ ಉಚಿತ ಕೊಡುಗೆಗಳನ್ನು ಘೋಷಿಸಲು ರಾಜಕೀಯ ಪಕ್ಷಗಳನ್ನು ಪ್ರೇರೇಪಿಸುತ್ತದೆ. "ಈ ಕುರಿತಾಗಿ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಆದರೆ, ಅದರ ಮೇಲೆ ಹತ್ತಿರದಿಂದ ನಿಗಾ ಇರಿಸಬೇಕು," ಎಂದು ಅವರು ಹೇಳಿದ್ದಾರೆ.

ನಗದು ಅಮಾನ್ಯೀಕರಣ ಮತ್ತು ತದನಂತರದ ಬೆಳವಣಿಗೆಗಳು, ಉದ್ದೇಶಪೂರ್ವಕವಾಗಿ ಅಲ್ಲದಿದ್ದರೂ, ಚುನಾವಣೆ ಸುಧಾರಣೆಯ ಮೇಲೆ ಪ್ರಭಾವ ಬೀರುತ್ತಿವೆ. ನಗದು ಅಮಾನ್ಯೀಕರಣದ ಬಳಿಕ ಎದುರಾದ ಸಾಗಣೆ ಸವಾಲುಗಳು, ಇ–ಬ್ಯಾಂಕಿಂಗ್, ಇ–ವಾಲೆಟ್ ಮುಂತಾದವುಗಳ ಬಗ್ಗೆ ಸರ್ಕಾರ ನಡೆಸಿದ ಆಂದೋಲನಗಳು ಜನಪ್ರಿಯವಾದವು. ಇದು ಕಾಳಧನ ಆರ್ಥಿಕತೆಯನ್ನು ಅಂತ್ಯಗೊಳಿಸುವ ನಿಟ್ಟಿನಲ್ಲಿ ಮತ್ತೊಂದು ಸಕಾರಾತ್ಮಕ ಬೆಳವಣಿಗೆಯಾಗಿದೆ. ರಿಕ್ಷಾ ಎಳೆಯುವವನು ಅಥವಾ ತರಕಾರಿ ಮಾರುವವರಿಗೂ ನಗದು ವ್ಯವಹಾರವನ್ನು ನಿಲ್ಲಿಸಿ ಎಂದು ಹೇಳಿದಾಗ, ಅದು ಬಲಿಷ್ಠ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಹೆಚ್ಚಿದ ಹಣಕಾಸು ಒಳಗೊಳ್ಳುವಿಕೆಗೆ ದಾರಿ ಮಾಡುತ್ತದೆ.

ಆದಾಗ್ಯೂ, ಇದು ರಾಜಕೀಯ ಪಕ್ಷಗಳಿಗೆ 20,000 ರೂ.ಗಿಂತಲೂ ಕಡಿಮೆ ಮೊತ್ತದ ನಗದು ರೂಪದ ದೇಣಿಗೆಯ ಮೇಲಿನ ವಿನಾಯಿತಿಯನ್ನು ಈ ಕೂಡಲೇ ರದ್ದುಪಡಿಸಬೇಕೆಂಬ ಬೇಡಿಕೆಗೆ ದಾರಿ ಮಾಡಿದೆ. ರಾಜಕೀಯ ಪಕ್ಷಗಳು ನಗದು ರೂಪದ ದೇಣಿಗೆ ಎಂದು ತೋರಿಸಿರುವ ಶೇ. 80ರಷ್ಟು ರಾಜಕೀಯ ದೇಣಿಗೆಯ ವಿಚಾರದಲ್ಲಿ ಪಾರದರ್ಶಕತೆ ಸಮಸ್ಯೆಯನ್ನು ಇದು ಬಗೆಹರಿಸುತ್ತದೆ. ಈ ಮೊತ್ತವು ವಾರ್ಷಿಕ ಸರಾಸರಿ 1,000 ಕೋಟಿ ರೂ.ನಷ್ಟಿರುತ್ತದೆ.




ಮತ್ತೊಂದು ಬೆಳವಣಿಗೆಯೆಂದರೆ, ಅದು ನ.8ರ ಬಳಿಕ ಎಲ್ಲಾ ಬ್ಯಾಂಕ್ ಖಾತೆಗಳ ವಿವರಗಳನ್ನು ಒದಗಿಸುವಂತೆ ಪ್ರಧಾನ ಮಂತ್ರಿ ಶ್ರೀ ಮೋದಿ ಅವರು ತಮ್ಮ ಪಕ್ಷದ ಶಾಸಕರು, ಸಂಸದರಿಗೆ ನಿರ್ದೇಶನ ನೀಡಿರುವುದು.

ಈ ವಿಚಾರವಾಗಿ ಪ್ರಶ್ನೆಗಳನ್ನು ಎತ್ತಲಾಯಿತು.ಅವುಗಳಿಗೆ ನನ್ನ ಪ್ರತಿಕ್ರಿಯೆ ಏನೆಂದರೆ, ನಾವು ಟೀಕೆ ಮಾಡುವ ಅಥವಾ ಪ್ರಧಾನಿ ಅವರು ಬೇರೆ ಹೇಗೆ ಇನ್ನೂ ಉತ್ತಮವಾಗಿ ಮಾಡಬಹುದಾಗಿತ್ತು ಎಂದು ಸಲಹೆ ನೀಡುವ ಬದಲು, ರಾಜಕಾರಣಿಗಳ ಹಣಕಾಸು ಪಾರದರ್ಶಕತೆ ಸಾಧಿಸುವ ನಿಟ್ಟಿನಲ್ಲಿ ಇದು ಮೊದಲ ಹೆಜ್ಜೆಯೆಂದು ತಿಳಿದು ಏಕೆ ಇದನ್ನು ಸ್ವಾಗತಿಸಬಾರದು? ಸರ್ಕಾರದ ಮತ್ತೊಂದು ಮಹತ್ವದ ನಡೆಯೆಂದರೆ, ಅದು ಬೇನಾಮಿ ಆಸ್ತಿ ವ್ಯವಹಾರಗಳ ನಿಯಂತ್ರಣಕ್ಕೆ ಸಂಬಂಧಿಸಿದ ಉದ್ದೇಶಿತ ಇತರ ಮುಂದಿನ ಕ್ರಮಗಳು. ಬೇನಾಮಿ ಆಸ್ತಿಯು ಅಕ್ರಮ ಚುನಾವಣಾ ನಿಧಿಯ ಬಹುದೊಡ್ಡ ಮೂಲವಾಗಿರುವುದರಿಂದ, ಇದು ಸಹ ಚುನಾವಣೆ ವೇಳೆ ಕಪ್ಪುಹಣ ಬಳಕೆಯ ಮೇಲೆ ಸತ್ಪರಿಣಾಮಕಾರಿ ಪ್ರಭಾವ ಬೀರುತ್ತದೆ.

ಅಭೂತಪೂರ್ವ ಅಮಾನ್ಯೀಕರಣ ಕ್ರಮವು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಲು ವರದಾನವಾಗುವ ವಿಶ್ವಾಸ ಮೂಡಿಸಿದೆ. ಇದೇ ವೇಳೆ ನಗದುರಹಿತ ವ್ಯವಹಾರಗಳು ಹೆಚ್ಚಿನ ಪಾರದರ್ಶಕತೆ ಮತ್ತು ಪರಿಶೀಲನೆಗೆ ಅವಕಾಶ ಒದಗಿಸುತ್ತವೆ. ಬಹುಕಾಲದಿಂದ ಬಾಕಿ ಉಳಿದಿದ್ದ ಚುನಾವಣಾ ಸುಧಾರಣೆಗೆ ಕೊನೆಗೂ ಈಗ ಕಾಲ ಕೂಡಿಬಂದಿದೆ ಎಂದು ನಾನು ಭಾವಿಸುತ್ತೇನೆ. ❑

# ಕಡಿಮೆ ನಗದು; ಅಂತಾರಾಷ್ಟ್ರೀಯ – ಭಾರತ ಚಿತ್ರಣ



* ಅರ್ಪಿತಾ ಮುಖರ್ಜಿ
** ತನು ಎಂ. ಗೋಯಲ್

**ಭಾರತ ಮತ್ತು ಇತರೆ ರಾಷ್ಟ್ರಗಳ ನಡುವೆ ಕರೆನ್ಸಿ ಚಲಾವಣೆ ಪ್ರಮಾಣ ಹೋಲಿಸಿದರೆ, ಹಲವು ಅಭಿವೃದ್ಧಿ ಹೊಂದುತ್ತಿರುವ ಮತ್ತು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಂತ ಹೆಚ್ಚು ನಗದು ಚಲಾವಣೆ ಭಾರತದಲ್ಲಿದೆ. 2015ರಲ್ಲಿ, ಚಲಾವಣೆಯಲ್ಲಿರುವ ನಗದು ಪ್ರಮಾಣ, ಒಟ್ಟು ದೇಶೀಯ ಉತ್ಪನ್ನದ ಶೇ.12.3ರಷ್ಟು ಇತ್ತು.**

ಕಳೆದ 2016ರ ಜೂನ್ ತಿಂಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) 'ಭಾರತದಲ್ಲಿ ಪಾವತಿ ಮತ್ತು ಇತ್ಯರ್ಥ ವ್ಯವಸ್ಥೆಗಳು; ಮುನ್ನೋಟ 2018' ಶೀರ್ಷಿಕೆಯಡಿ ವರದಿಯನ್ನು ಬಿಡುಗಡೆ ಮಾಡಿತ್ತು. ಅದರಲ್ಲಿ ಉತ್ತಮ ಪಾವತಿ ಹಾಗೂ ಇತ್ಯರ್ಥ ವ್ಯವಸ್ಥೆಯನ್ನು ಹೊಂದುವ ಮೂಲಕ ಭಾರತವನ್ನು ಹೇಗೆ ಕಡಿಮೆ ನಗದು ಆರ್ಥಿಕತೆ ರಾಷ್ಟ್ರ ಮಾಡಬಹುದು ಎಂಬ ಬಗ್ಗೆ ಗ್ರಹಿಸಲಾಗಿತ್ತು. ಸಮಾಜದ ಎಲ್ಲ ವಲಯಗಳಲ್ಲಿ ವಿದ್ಯುನ್ಮಾನ ಪಾವತಿಗಳನ್ನು ಹೆಚ್ಚಿಸುವುದು, ಆ ಮೂಲಕ ದೊಡ್ಡ ಅನಧಿಕೃತ ವಹಿವಾಟುಗಳನ್ನು ಅಧಿಕೃತ ಆರ್ಥಿಕ ಜಾಲಕ್ಕೆ ಒಳಪಡಿಸುವುದು, ತೆರಿಗೆ ವ್ಯಾಪ್ತಿ ಹೆಚ್ಚಿಸುವುದು, ಕಪ್ಪು ಹಣ ತಗ್ಗಿಸುವುದು ಮತ್ತು ಚುನಾವಣೆ ಹಾಗೂ ಭಯೋತ್ಪಾದಕರಿಗೆ ನಗದು ಪೂರೈಕೆ ನಿಲ್ಲಿಸುವ ಉದ್ದೇಶವಿತ್ತು. ಭಾರತದ ಪ್ರಧಾನಮಂತ್ರಿಗಳು, ದೇಶವನ್ನು ಕಡಿಮೆ ನಗದು ಸಮಾಜದತ್ತ ಕೊಂಡೊಯ್ಯಬೇಕು ಎಂದು ಪ್ರತಿಪಾದಿಸಿದ್ದಾರೆ. ಕಡಿಮೆ ನಗದು ಆರ್ಥಿಕ ರಾಷ್ಟ್ರ ನಿರ್ಮಾಣಕ್ಕೆ ಇದು ದೊಡ್ಡ ಹೆಜ್ಜೆಯಾಗಿದೆ. ಸ್ವೀಡನ್, ಕೀನ್ಯಾ ಮತ್ತು ಬ್ರೆಜಿಲ್ ಸೇರಿದಂತೆ ಹಲವು ರಾಷ್ಟ್ರಗಳು ಯಶಸ್ವಿಯಾಗಿ ಕಡಿಮೆ ನಗದು ಆರ್ಥಿಕತೆಯತ್ತ ಸಾಗಿವೆ. ಆ ರಾಷ್ಟ್ರಗಳ ಅನುಭವದಿಂದ ವೇದ್ಯವಾಗುವ ಅಂಶ ಎಂದರೆ, ಕಡಿಮೆ ನಗದು ಆರ್ಥಿಕತೆಗೆ ಆನ್‌ಲೈನ್ ವಹಿವಾಟಿಗೆ ಭದ್ರತೆ, ಮೂಲಸೌಕರ್ಯ ವೃದ್ಧಿ ಮತ್ತು ಗ್ರಾಹಕ ಕೇಂದ್ರಿತ ಪೂರಕ ನಿಯಂತ್ರಣ ಕ್ರಮಗಳು ಅತ್ಯಗತ್ಯವಾಗಿವೆ.

### ಭಾರತ ಮತ್ತು ಇತರೆ ರಾಷ್ಟ್ರಗಳು

ಭಾರತ ಮತ್ತು ಇತರೆ ರಾಷ್ಟ್ರಗಳ ನಡುವೆ ಕರೆನ್ಸಿ ಚಲಾವಣೆಯನ್ನು ಗಮನಿಸಿದರೆ, ಹಲವು ಅಭಿವೃದ್ಧಿ ಹೊಂದುತ್ತಿರುವ ಮತ್ತು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಂತ ಹೆಚ್ಚು ನಗದು ಚಲಾವಣೆ ಭಾರತದಲ್ಲಿದೆ. 2015ರಲ್ಲಿ, ಚಲಾವಣೆಯಲ್ಲಿರುವ ನಗದು ಪ್ರಮಾಣ, ಒಟ್ಟಾರೆ ಆರ್ಥಿಕತೆಯ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ)ಯ ಶೇ.12.3ರಷ್ಟು ಇತ್ತು. ಬ್ರೆಜಿಲ್‌ನಲ್ಲಿ ಆ ಪ್ರಮಾಣ ಶೇ. 3.8ರಷ್ಟು,

**ಚಿತ್ರ –1 : ನಗದು ಚಲಾವಣೆ (ಜಿಡಿಪಿ ಶೇಕಡಾವಾರಿನಲ್ಲಿ)**




* ಪ್ರಾಧ್ಯಾಪಕರು. ** ಸಲಹಾಕಾರರು, ಐಸಿಆರ್‌ಐಇಆರ್. E-mail : * arpita@icrier.res.in ** tgoyal@icrier.res.in

ದಕ್ಷಿಣ ಕೊರಿಯಾದಲ್ಲಿ ಶೇ.5.6 ಹಾಗೂ ಸ್ವೀಡನ್‌ನಲ್ಲಿ ಶೇ.1.17ರಷ್ಟು ಇತ್ತು. (ಚಿತ್ರ–1 ನೋಡಿ)

ಮತ್ತೆ 2016ರಲ್ಲಿ, ಭಾರತದಲ್ಲಿ ಶೇ.68ಕ್ಕೂ ಅಧಿಕ ವಹಿವಾಟುಗಳು ನಗದು ರೂಪದಲ್ಲೇ ಇತ್ಯರ್ಥವಾಗಿವೆ. ಇದು ಇಂಡೋನೇಷ್ಯಾ ಮತ್ತು ರಷ್ಯಾ ನಂತರ ಅತಿ ಹೆಚ್ಚು ನಗದು ವಹಿವಾಟು ನಡೆಸಿರುವ ರಾಷ್ಟ್ರ ಭಾರತವಾಗಿದೆ. ಭಾರತಕ್ಕೆ ಹೋಲಿಸಿದರೆ ಥೈಲ್ಯಾಂಡ್, ಬ್ರೆಜಿಲ್ ಮತ್ತು ಚೀನಾ ಮತ್ತಿತರ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಕಡಿಮೆ ನಗದು ಪಾವತಿ ಇತ್ಯರ್ಥ ವ್ಯವಸ್ಥೆ ಹೊಂದಿವೆ. ಹಲವು ಅಭಿವೃದ್ಧಿ ಹೊಂದುತ್ತಿರುವ ಮತ್ತು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಗೆ ಹೋಲಿಸಿದರೆ ಕ್ರೆಡಿಟ್ ಕಾರ್ಡ್‌ಗಳ ಬಳಕೆ ಭಾರತದಲ್ಲಿ ಅತಿ ಕಡಿಮೆ ಇದೆ.

ಸ್ವೀಡನ್, ವಿಶ್ವದಲ್ಲೇ ಅತಿ ಕಡಿಮೆ ನಗದು ಬಳಕೆ ರಾಷ್ಟ್ರವಾಗಿದೆ. ಆ ದೇಶದಲ್ಲಿ ದೇಣಿಗೆ, ಬಸ್ ಟಿಕೆಟ್ ಖರೀದಿ ಸೇರಿದಂತೆ ಬಹುತೇಕ ಎಲ್ಲ ವಹಿವಾಟಿಗೆ ವಿದ್ಯುನ್ಮಾನದ ಮೂಲಕ ಪಾವತಿಸಲಾಗುತ್ತದೆ. ಬಹುತೇಕ ಸಗಟು ಮಾರಾಟದಾರರು ನಾಣ್ಯ ಮತ್ತು ನೋಟುಗಳನ್ನು ಸ್ವೀಕರಿಸುವುದಿಲ್ಲ, ಅವರಿಗೆ ನಗದು ಸ್ವೀಕರಿಸದಿರಲು ಕಾನೂನು ಬೆಂಬಲವೂ ಇದೆ. ಯುರೋಪಿಯನ್ನರು ಬಳಸುವ ಸರಾಸರಿಗಿಂತ ಮೂರುಪಟ್ಟು ಹೆಚ್ಚು ಸ್ವೀಡನ್ ಜನರು ಡೆಬಿಟ್ ಕಾರ್ಡ್‌ಗಳನ್ನು ಬಳಕೆ ಮಾಡುತ್ತಾರೆ. ಕಾಕತಾಳೀಯವೆಂದರೆ ಸ್ವೀಡನ್ ಕೂಡ ಈ ವರ್ಷ (20, 50 ಮತ್ತು ಒಂದು ಸಾವಿರ ಕರೋನ) ಕೆಲವು ಕರೆನ್ಸಿ ನೋಟುಗಳನ್ನು ಅಮಾನ್ಯಗೊಳಿಸಿದೆ. ಅಲ್ಲದೆ 2017ರ ಜುಲೈ ವೇಳೆಗೆ ಇನ್ನೂ ಕೆಲವು ಅಧಿಕ ಮೌಲ್ಯದ ನೋಟುಗಳನ್ನು ಅಮಾನ್ಯಗೊಳಿಸುವುದಾಗಿ ಈಗಾಗಲೇ ಪ್ರಕಟಿಸಿದೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕೀನ್ಯಾ ಸರ್ಕಾರ ಆನ್‌ಲೈನ್ ಪಾವತಿ ಉತ್ತೇಜಿಸಲು ಹಲವು ಕ್ರಮಗಳನ್ನು ಕೈಗೊಂಡಿದೆ. ವಾಹನ ನಿಲುಗಡೆ ಶುಲ್ಕ, ಕಟ್ಟಡ ನಿರ್ಮಾಣ, ಲೈಸೆನ್ಸ್, ಭೂ ಖರೀದಿ ದರ, ಪಾಸ್‌ಪೋರ್ಟ್ ಶುಲ್ಕ, ವಾಹನ ಪರವಾನಗಿ ನವೀಕರಣ ಶುಲ್ಕ ಸೇರಿದಂತೆ ಹಲವು ಸರ್ಕಾರಿ ಸೇವೆಗಳಿಗೆ ಆನ್‌ಲೈನ್ ಮೂಲಕವೇ ಪಾವತಿಸುವ ವ್ಯವಸ್ಥೆ ಜಾರಿಗೆ ಬಂದಿದೆ. ವಿಶ್ವಸಂಸ್ಥೆಯ ಗ್ಲೋಬಲ್ ಫಿಂಡೆಕ್ಸ್ ವರದಿಯ ಪ್ರಕಾರ ಕೀನ್ಯಾದ ಶೇಕಡ 58ರಷ್ಟು ಯುವಜನತೆ ಮೊಬೈಲ್‌ನಲ್ಲಿ ಬ್ಯಾಂಕ್ ಖಾತೆಗಳನ್ನು ಆಕ್ಟಿವೇಟ್ ಮಾಡಿಕೊಂಡಿದ್ದಾರೆ. ಈ ಪ್ರಮಾಣ ವಿಶ್ವದಲ್ಲೇ ಅತಿ ಹೆಚ್ಚು. ಕೀನ್ಯಾದ ಸೆಂಟ್ರಲ್ ಬ್ಯಾಂಕ್ ವರದಿಯಂತೆ 31 ದಶಲಕ್ಷಕ್ಕೂ ಅಧಿಕ ಮಂದಿ ಮೊಬೈಲ್ ಮೂಲಕವೇ ಗ್ರಾಹಕರಿಗೆ ಪಾವತಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದಾರೆ. 2015ರಲ್ಲಿ ಒಂದು ಲಕ್ಷ 44 ಸಾವಿರ ಏಜೆಂಟ್‌ಗಳು ಅದನ್ನು ಬೆಂಬಲಿಸಿದ್ದಾರೆ. ಕೀನ್ಯಾ ಮೊಬೈಲ್ ತಂತ್ರಜ್ಞಾನ ಬಳಕೆ ಮತ್ತು ಸ್ಮಾರ್ಟ್‌ಫೋನ್ ಮಾಲಿಕತ್ವದಲ್ಲಿ ಮಾದರಿ ಉದಾಹರಣೆಯಾಗಿದ್ದು, ಅಲ್ಲಿ ಆನ್‌ಲೈನ್ ಮೂಲಕವೇ ಹೆಚ್ಚಿನ ಪಾವತಿಗಳನ್ನು ಮಾಡಲಾಗುತ್ತಿದೆ. ಕ್ರೆಡಿಟ್ ಕಾರ್ಡ್ ಬಳಕೆ ಕಡಿಮೆಯಿದ್ದರೂ, ಅಂತರ್ಜಾಲ ವ್ಯವಸ್ಥೆಯಿಂದಾಗಿ ಆನ್‌ಲೈನ್ ಪಾವತಿ ಅತ್ಯುತ್ತಮವಾಗಿದೆ.

### ಲಭ್ಯ ಮೂಲಸೌಕರ್ಯ

ವಿದ್ಯುನ್ಮಾನ ಪಾವತಿ ವ್ಯವಸ್ಥೆಯನ್ನು ಹೊಂದಲು ಸಮಾಜದಲ್ಲಿ ಮೂಲಸೌಕರ್ಯದ ಅಗತ್ಯತೆಯೂ ಅಷ್ಟೇ ಪ್ರಮುಖವಾಗಿ ಇರಬೇಕು. ಉದಾಹರಣೆಗೆ ಭಾರತದಲ್ಲಿ 2015ರಲ್ಲಿ ಒಟ್ಟಾರೆ ಜನಸಂಖ್ಯೆಯ ಅರ್ಧದಷ್ಟು ಮಂದಿ ಮಾತ್ರ ಕಾರ್ಡ್ ಹೊಂದಿದ್ದರು. ಇದಕ್ಕೆ ಹೋಲಿಸಿದರೆ ಸ್ವೀಡನ್‌ನಲ್ಲಿ ಒಬ್ಬ ವ್ಯಕ್ತಿ ಸರಾಸರಿ 2.5 ಕಾರ್ಡ್ ಹೊಂದಿದ್ದಾನೆ. ದಕ್ಷಿಣ ಕೊರಿಯಾದಲ್ಲಿ 5.5, ಬ್ರೆಜಿಲ್‌ನಲ್ಲಿ 4.1 ಹಾಗೂ ಚೀನಾದಲ್ಲಿ ಸರಾಸರಿ 4 ಕಾರ್ಡ್‌ಗಳನ್ನು ಅಲ್ಲಿನ ಜನರು ಹೊಂದಿದ್ದಾರೆ. ದಕ್ಷಿಣ ಕೊರಿಯಾದಲ್ಲಿ ಕಾರ್ಡ್‌ಗಳ ಲಭ್ಯತೆ ಹೆಚ್ಚಿದ್ದು, ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ಆ ದೇಶ ನಗದು ಪಾವತಿ ರಹಿತ ವ್ಯವಸ್ಥೆ ಅಳವಡಿಕೆಯತ್ತ ಅತ್ಯಂತ ವೇಗವಾಗಿ ಸಾಗುತ್ತಿದೆ. ಅಲ್ಲಿನ ಗ್ರಾಹಕರು ಕಾರ್ಡ್ ಮೂಲಕ ಪಾವತಿಸಿದರೆ ಅವರಿಗೆ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ ಜೊತೆಗೆ ಪ್ಲಾಸ್ಟಿಕ್ ಹಣ ಬಳಕೆಗೆ ಉತ್ತೇಜನ ನೀಡಲಾಗುತ್ತಿದೆ. ಭಾರತದಲ್ಲಿ ಕಾರ್ಡ್ ಮೂಲಕ ಮಾಡುವ ಪಾವತಿಗಳಿಗೆ ಬ್ಯಾಂಕ್ ಶುಲ್ಕ ಕಡಿತಗೊಳಿಸಲಾಗುತ್ತದೆ. ಆ ಮೂಲಕ ಗ್ರಾಹಕರು ನಗದು ಪಾವತಿಯನ್ನೇ ಅತ್ಯಂತ ಆಕರ್ಷಕ ಎಂದು ಭಾವಿಸುವ ಸ್ಥಿತಿಯಿದೆ.

ಭಾರತದ ಅತಿದೊಡ್ಡ ಜನಸಂಖ್ಯಾ ಗಾತ್ರಕ್ಕೆ ಹೋಲಿಸಿದರೆ, ದೇಶದಲ್ಲಿ ಅತಿ ಕಡಿಮೆ ಸಂಖ್ಯೆಯ ಪಿಒಎಸ್–ಪಾಯಿಂಟ್ ಆಫ್ ಸೇಲ್ ಅಂದರೆ ಕ್ರೆಡಿಟ್ ಕಾರ್ಡ್ ಅಥವಾ ಡೆಬಿಟ್ ಕಾರ್ಡ್ ಬಳಸಿ, ಹಲವು ಸೇವೆಗಳಿಗೆ ನಗದು ರಹಿತ ಪಾವತಿ ಮಾಡುವ ಯಂತ್ರಗಳಿಲ್ಲ. ಬ್ರೆಜಿಲ್, ಚೀನಾ ಮತ್ತಿತರ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಹೋಲಿಸಿದರೆ ದೇಶದಲ್ಲಿ ಒಂದು ಲಕ್ಷ ಜನವಸತಿಗೆ ಅತಿ ಕಡಿಮೆ ಪಿಒಎಸ್‌ಗಳಿವೆ.

ಇನ್ನು ಹಲವು ಕಡಿಮೆ ನಗದು ಬಳಕೆ ಮಾಡುವ ರಾಷ್ಟ್ರಗಳಲ್ಲಿ ಪಾವತಿ ಇತ್ಯರ್ಥಕ್ಕೆ ಹಲವು ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಅವುಗಳೆಂದರೆ ವಿದ್ಯುನ್ಮಾನ ಹಣ ಟರ್ಮಿನಲ್‌ಗಳು ಮತ್ತು ಮೊಬೈಲ್ ಮನಿ ಇತ್ಯರ್ಥ ವ್ಯವಸ್ಥೆ. ಭಾರತದಲ್ಲಿ ಈ ಪದ್ಧತಿಗಳಿಗೆ ಲಭ್ಯವಿರುವ ಮೂಲಸೌಕರ್ಯ ಅತ್ಯಂತ ಸೀಮಿತವಾದುದು. 120 ಕೋಟಿ ಜನಸಂಖ್ಯೆ ಇರುವ ಭಾರತದಲ್ಲಿ ಮೊಬೈಲ್ ದೂರವಾಣಿ ಗ್ರಾಹಕರ ಸಂಖ್ಯೆ 2016 ಜೂನ್ 30ಕ್ಕೆ ಲಭ್ಯವಿರುವಂತೆ ನೂರು ಕೋಟಿಗೂ ಅಧಿಕ. ಇಲ್ಲಿ ಮೊಬೈಲ್ ಫೋನ್ ಬಳಕೆ



**ಟೇಬಲ್ 1 : 2011–15ರ ನಡುವೆ ಆಯ್ದ ರಾಷ್ಟ್ರಗಳಲ್ಲಿ ಪಿಓಎಸ್‌ಗಳ ಸಂಖ್ಯೆ**

| ದೇಶ | 2011 | 2012 | 2013 | 2014 | 2015 |
|---|---|---|---|---|---|
| ಬ್ರೆಜಿಲ್ | 17,811 | 20,561 | 22,146 | 24,837 | 25,241 |
| ಚೀನಾ | 3,592 | 5,270 | 7,814 | 11,650 | 16,602 |
| ಭಾರತ | 550 | 695 | 865 | 889 | 1080 |
| ಸ್ವೀಡನ್ | 22,167 | 20,837 | 20,380 | 20,304 | 18,660 |
| ಯು ಕೆ | 21,499 | 25,732 | 25,800 | 26,346 | 30,078 |

ಮಾಡಿ, ನಗದು ರಹಿತ ವಹಿವಾಟುಗಳನ್ನು ನಡೆಸುತ್ತಿರುವವರ ಸಂಖ್ಯೆ ಕೇವಲ 0.05ರಷ್ಟು ಮಾತ್ರ ಇದಕ್ಕೆ ಪ್ರಮುಖ ಕಾರಣ ಎಂದರೆ ಭಾರತದಲ್ಲಿ ಸ್ಮಾರ್ಟ್‌ಫೋನ್ ಹೊಂದಿರುವವರ ಸಂಖ್ಯೆ ಕಡಿಮೆ ಹಾಗೂ ಅಂತರ್ಜಾಲ ಲಭ್ಯತೆಯ ಪ್ರಮಾಣವೂ ಕಡಿಮೆ.

ಭಾರತದಲ್ಲಿ 2016ರಲ್ಲಿ ವರದಿಯಾಗಿರುವಂತೆ ಶೇಕಡ 17ರಷ್ಟು ಯುವಕರು ಮಾತ್ರ ಸ್ಮಾರ್ಟ್‌ಫೋನ್ ಹೊಂದಿದ್ದಾರೆ. ಅದೇ ದಕ್ಷಿಣ ಕೊರಿಯಾದಲ್ಲಿ ಶೇಕಡ 88ರಷ್ಟು ಹಾಗೂ ಕೀನ್ಯಾದಲ್ಲಿ ಶೇಕಡ 26ರಷ್ಟು ಯುವಜನತೆ ಸ್ಮಾರ್ಟ್‌ಫೋನ್‌ಗಳನ್ನು ಹೊಂದಿದ್ದಾರೆ. 2015ರ ವರದಿಯಂತೆ ಭಾರತದಲ್ಲಿ ಅಂತರ್ಜಾಲ ಬಳಕೆ ಮಾಡುವವರ ಸಂಖ್ಯೆ ಶೇಕಡ 26ರಷ್ಟಿದೆ. ಆ ಪ್ರಮಾಣ ಬ್ರೆಜಿಲ್‌ನಲ್ಲಿ ಶೇಕಡ 59.08, ಚೀನಾದಲ್ಲಿ ಶೇಕಡ 50, ದಕ್ಷಿಣ ಕೊರಿಯಾ ಮತ್ತು ಚೀನಾದಲ್ಲಿ ಶೇಕಡ 90ರಷ್ಟಿದೆ. ನಿಗದಿತ ಬ್ರಾಡ್‌ಬ್ಯಾಂಡ್ ಸಂಪರ್ಕ ಹೊಂದಿರುವವರ ಪ್ರಮಾಣ ಭಾರತದಲ್ಲಿ ನೂರು ಜನವಸತಿ ಪ್ರದೇಶಗಳಿಗೆ ಕೇವಲ 1.34ರಷ್ಟು ಸಂಪರ್ಕ ಹೊಂದಿದ್ದಾರೆ. ಆ ಪ್ರಮಾಣ ಸ್ವೀಡನ್‌ನಲ್ಲಿ ಶೇಕಡ 36.7, ಕೊರಿಯಾದಲ್ಲಿ 40.25ರಷ್ಟಿದೆ.

ಪ್ರಸ್ತುತ ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ತಾಂತ್ರಿಕ ಮೂಲಸೌಕರ್ಯ ತೀರಾ ಕಡಿಮೆ ಇದ್ದು, ಭಾರತ ಸರ್ಕಾರದ ಆಶಯದಂತೆ ಕಡಿಮೆ ನಗದು ವಹಿವಾಟು ಬೆಂಬಲಿಸಬೇಕಾದರೆ ಅಗತ್ಯ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಬೇಕಾಗಿದೆ. ಅಲ್ಲದೆ ಅದಕ್ಕೆ ಪೂರಕ ನೀತಿ ನಿರೂಪಣೆಗಳನ್ನು ಮಾಡಿ, ಆನ್‌ಲೈನ್ ವಹಿವಾಟುಗಳಿಗೆ ಭದ್ರತೆಯನ್ನು ಒದಗಿಸಬೇಕಾಗಿದೆ.

**ಜಾಗತಿಕ ಅನುಭವಗಳ ಕಲಿಕೆ ಮತ್ತು ಮುನ್ನೋಟ**

ಕೀನ್ಯಾ ಮತ್ತು ನೈರೋಬಿಯಂತಹ ಸಣ್ಣ ಪುಟ್ಟ ರಾಷ್ಟ್ರಗಳು ಕಡಿಮೆ ನಗದು ಆರ್ಥಿಕ ವ್ಯವಸ್ಥೆಯತ್ತ ಸಾಗುತ್ತಿರುವಂತೆಯೇ ಭಾರತ ಕೂಡ ಆ ನಿಟ್ಟಿನಲ್ಲಿ ಸಾಗಬಹುದು. ಅದಕ್ಕೆ ತಂತ್ರಜ್ಞಾನ ಆಧರಿತ ನಾವಿನ್ಯ ಪಾವತಿ ವ್ಯವಸ್ಥೆಯ ಬಳಕೆಗೆ ಉತ್ತೇಜನ ನೀಡಬೇಕಾಗಿದೆ. ಆ ನಿಟ್ಟಿನಲ್ಲಿ ಆನ್‌ಲೈನ್ ಹಣ ವರ್ಗಾವಣೆಗೆ ಮೊಬೈಲ್ ಪೇಮೆಂಟ್ ವಾಲೆಟ್‌ಗಳು ಮತ್ತು ಮೊಬೈಲ್ ಅಪ್ಲಿಕೇಷನ್‌ಗಳು ಪ್ರಮುಖ ಪರ್ಯಾಯಗಳಾಗಿವೆ. ಇದು ಮುಖ್ಯವಾಗಿ ಕಾರ್ಡ್‌ಗಳನ್ನು ಸ್ವೀಕರಿಸದ ಅಥವಾ ಪಾವತಿ ಪಡೆಯಲು ಪಿಓಎಸ್‌ಗಳನ್ನು ಅವಲಂಬಿಸದ ಸಣ್ಣ ವ್ಯಾಪಾರಿಗಳು ಅಥವಾ ಕಾರ್ಪೊರೇಟ್ ವಲಯದವರಲ್ಲದವರಿಗೆ ಇದು ಅನುಕೂಲಕಾರಿ. ಉದಾಹರಣೆಗೆ ಸ್ವೀಡನ್‌ನಲ್ಲಿ ಬಹುತೇಕ ಬೀದಿ ಬದಿಯ ವ್ಯಾಪಾರಿಗಳು ಮತ್ತು ಸಣ್ಣ ವ್ಯಾಪಾರಿಗಳು ಪಾವತಿ ವ್ಯವಸ್ಥೆಯನ್ನು ಮತ್ತು ಐಜೆಟಲ್ ಕಂಪನಿ ಅಭಿವೃದ್ಧಿಪಡಿಸಿರುವ ಪಿಓಎಸ್ ಕಾರ್ಡ್ ರೀಡರ್‌ಗಳನ್ನು ಹೊಂದಿದ್ದಾರೆ. ಇದರಿಂದ ಮಾರಾಟದ ಮೇಲೆ ಸಕಾರಾತ್ಮಕ ಪರಿಣಾಮ ಉಂಟಾಗಿದೆ.

ಅದೇ ರೀತಿ ಕೀನ್ಯಾದಲ್ಲೂ ಸಹ, ಆಫ್ರಿಕಾದ ಅತಿದೊಡ್ಡ ಮೊಬೈಲ್ ನಗದು ಬಳಕೆದಾರರಾಗಿರುವ ಆ ರಾಷ್ಟ್ರದಲ್ಲಿ ವೇತನಗಳನ್ನು ಸ್ವೀಕರಿಸಲು ಶುಲ್ಕ ಹಾಗೂ ಮತ್ತಿತರ ಬಿಲ್‌ಗಳನ್ನು ಪಾವತಿಸಲು ಎಂ–ಪೇಸ ಬಳಕೆ ಮಾಡಲಾಗುತ್ತಿದೆ. ಭಾರತದಲ್ಲಿ ಪೇಟಿಎಂ, ಸಿಸಿ ಅವಿನ್ಯು, ಪೇ ಯು ಮತ್ತಿತರ ಮಾರ್ಗಗಳನ್ನು ಉತ್ತೇಜಿಸಿ, ನಗದುರಹಿತ ವಹಿವಾಟುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕಾಗುತ್ತದೆ.

ತಕ್ಷಣಕ್ಕೆ ಗಮನಹರಿಸಬೇಕಾದ ಕೆಲವು ಪ್ರಮುಖ ವಲಯವೆಂದರೆ ಚಿಲ್ಲರೆ ಹಾಗೂ ಸಗಟು ಮಾರುಕಟ್ಟೆಯ ವಹಿವಾಟುಗಳಲ್ಲಿ ನಗದು ತಗ್ಗಿಸಬೇಕು. ಅಸಂಘಟಿತ ವಲಯದ ಕಾರ್ಮಿಕರಿಗೆ ಮತ್ತು ಕೃಷಿ ಕೂಲಿಕಾರರಿಗೆ ವೇತನ ಪಾವತಿ ವ್ಯವಸ್ಥೆಯನ್ನು ಬದಲಾಯಿಸಬೇಕು. ಬಹುತೇಕ ಇ–ಅಸಂಘಟಿತ ವಲಯದವರಿಗೆ ತೆರಿಗೆ ಪಾವತಿ ತಪ್ಪಿಸಲು ನಗದು ರೂಪದಲ್ಲೇ ಕನಿಷ್ಠ ವೇತನ ನೀಡಲಾಗುವುದು. ಅದನ್ನು ತಪ್ಪಿಸಿ, ಅವರನ್ನೂ ಸಹ ನಗದುರಹಿತ ವಹಿವಾಟಿಗೆ ಉತ್ತೇಜಿಸುವುದು.

2016ರ ಆಗಸ್ಟ್‌ನಲ್ಲಿ ಭಾರತೀಯ ರಾಷ್ಟ್ರೀಯ ಪಾವತಿ ನಿಗಮ(ಎನ್‌ಪಿಸಿಐ) ಆರಂಭಿಸಿದ ಯುಪಿಐ – ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್ ಅಂದರೆ ಮೊಬೈಲ್ ಬಳಸಿ, ಎರಡು ಬ್ಯಾಂಕ್ ಖಾತೆಗಳ ನಡುವಿನ ಹಣವನ್ನು ವರ್ಗಾವಣೆ ಮಾಡಿಕೊಳ್ಳುವುದು. ಇದರಿಂದಾಗಿ ವರ್ತಕರಿಗೆ ಹಾಗೂ ಇನ್ನಿತರರಿಗೆ ಕಾರ್ಡ್‌ಗಳ ಮೂಲಕ ತಮ್ಮ ರಹಸ್ಯ ಸಂಕೇತ ಬಳಸಿ, ಪಾವತಿಗಳನ್ನು ಮಾಡಬಹುದಾಗಿದೆ. ಈ ಕುರಿತಂತೆ ಕೇಂದ್ರ ಸರ್ಕಾರ ವೇತನ ಪಾವತಿ ಕಾಯ್ದೆ, ಸೆಕ್ಷನ್ 6ಕ್ಕೆ ತಿದ್ದುಪಡಿ ತಂದು ಕಳೆದ ಡಿಸೆಂಬರ್ 2016ರಲ್ಲಿ ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ನಗದು ಚಲಾವಣೆ ತಪ್ಪಿಸಲು ಈ ತಿದ್ದುಪಡಿ ಅನ್ವಯ ಎಲ್ಲಾ ಬಗೆಯ ವೇತನದಾರರಿಗೆ ಬ್ಯಾಂಕ್ ಖಾತೆಗೆ ತಮ್ಮ ವೇತನವನ್ನು ವರ್ಗಾಯಿಸಬೇಕು ಇಲ್ಲವೆ ಚೆಕ್ ಮೂಲಕ ನೀಡಬೇಕಾಗಿದೆ. ಸ್ವೀಡನ್‌ನಲ್ಲೂ ಡಿಜಿಟಲ್ ವರ್ಗಾವಣೆ ಬಳಸಿ, ವೇತನವನ್ನು ಪಾವತಿಸುವುದು 1960ರಲ್ಲೆ ಆರಂಭವಾಗಿತ್ತು ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಅತ್ಯಂತ ಸಮಂಜಸವಾಗಿದೆ.

ತೆಲಂಗಾಣ ರಾಜ್ಯದ ಇಬ್ರಾಹಿಂಪುರ್ ಎಂಬ ಒಂದು ಪುಟ್ಟ ಗ್ರಾಮ ಸಂಪೂರ್ಣ ನಗದು ರಹಿತವಾಗಿದೆ. ಅಲ್ಲಿನ



ಪ್ರತಿಯೊಬ್ಬರೂ ಬ್ಯಾಂಕ್ ಖಾತೆಗಳನ್ನು ಹೊಂದಿದ್ದು, ಎಲ್ಲರೂ ಪಾವತಿಗೆ ಕ್ರೆಡಿಟ್ ಕಾರ್ಡ್‌ಗಳನ್ನು ಬಳಕೆ ಮಾಡುತ್ತಿದ್ದಾರೆ. ಈ ಗ್ರಾಮದ ಯಶಸ್ವಿ ಕತೆ ಇತರ ಗ್ರಾಮಗಳಲ್ಲೂ ಪುನರಾವರ್ತಿತಗೊಳ್ಳಬೇಕು. ಕೆಲವು ಬ್ಯಾಂಕ್‌ಗಳೂ ಸಹ ಡಿಜಿಟಲೀಕರಣದ ಯುಗದಲ್ಲಿ ಹಲವು ಕ್ರಮಗಳನ್ನು ಕೈಗೊಂಡಿವೆ. ಉದಾಹರಣೆಗೆ ಗುಜರಾತ್‌ನ ಅಕೋದರದಲ್ಲಿ ಭಾರತೀಯ ಖಾಸಗಿ ಬ್ಯಾಂಕ್‌ವೊಂದು 2015ರಲ್ಲಿ ವಹಿವಾಟನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸಿದೆ. ಬ್ಯಾಂಕ್ ವೈರ್‌ಲೆಸ್ ಅಂತರ್ಜಾಲ, ಪಾವತಿ ಟರ್ಮಿನಲ್‌ಗಳನ್ನು ತೆರೆಯಲು ಮೂಲಸೌಕರ್ಯಕ್ಕಾಗಿ ಬಂಡವಾಳ ಹೂಡಿದೆ. ಅಲ್ಲದೆ ಗ್ರಾಮದವರಿಗೆಲ್ಲ ಆಧುನಿಕ ಬ್ಯಾಂಕಿಂಗ್ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ.

ಇತ್ತೀಚಿನ ದಿನಗಳಲ್ಲಿ ಮೆಟ್ರೊ ರೈಲು ಸೇರಿದಂತೆ ಸಾರ್ವಜನಿಕ ಸಾರಿಗೆ ವಲಯದಲ್ಲೂ ಸಹ ವಿದ್ಯುನ್ಮಾನ ಪಾವತಿ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಆ ನಿಟ್ಟಿನಲ್ಲಿ ಹಲವು ಕ್ರಮ ಕೈಗೊಳ್ಳಲಾಗಿದೆ. ಈ ವರ್ಷದಿಂದ ದೆಹಲಿ ಮೆಟ್ರೊ ರೈಲಿನ ಕೆಲವು ಸ್ಟೇಷನ್‌ಗಳು ನಗದು ರಹಿತವಾಗುತ್ತಿವೆ. ಕಡಿಮೆ ನಗದು ಆರ್ಥಿಕ ವ್ಯವಸ್ಥೆಯತ್ತ ಸಾಗಲು ಸರ್ಕಾರ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

* **ತಟಸ್ಥ ಪಾವತಿ ವ್ಯವಸ್ಥೆ** : ನಗದು ಪಾವತಿ ಬಳಕೆ ವ್ಯವಸ್ಥೆಗೆ ಹೋಲಿಸಿದರೆ ಕಾರ್ಡ್ ಅಥವಾ ಡಿಜಿಟಲ್ ಪದ್ಧತಿಗಳ ಮೂಲಕ ಪಾವತಿ ಮಾಡಿದರೆ ಅದು ದುಬಾರಿ ಎನಿಸಬಾರದು. ಬ್ಯಾಂಕ್‌ಗಳು ಆಗಿದ್ದಾಂಗೆ ಬ್ಯಾಂಕ್ ಶುಲ್ಕ, ಆನ್‌ಲೈನ್ ಪೇಮೆಂಟ್ ಸಂಸ್ಕರಣೆ ಶುಲ್ಕ ಅಥವಾ ಇ ಟ್ರಾನ್ಸ್‌ಫರ್ ಶುಲ್ಕ ಎಂದು ಶುಲ್ಕಗಳನ್ನು ಕಡಿತಗೊಳಿಸಬಾರದು. ಇದರಿಂದಾಗಿ ಆನ್‌ಲೈನ್ ಪದ್ಧತಿ ಬಳಕೆದಾರರನ್ನು ನಿರುತ್ತೇಜನ ಮಾಡಿದಂತಾಗುತ್ತದೆ ಹಾಗಾಗಿ ಯಾವುದೇ ಹೆಚ್ಚುವರಿ ಶುಲ್ಕಗಳನ್ನು ವಿಧಿಸಬಾರದು.

* **ಮಾಹಿತಿಗೆ ಭದ್ರತೆ** : ವಿದ್ಯುನ್ಮಾನ ಪದ್ಧತಿಗಳ ಮೂಲಕ ಪಾವತಿ ಮಾಡಿದ ಗ್ರಾಹಕರ ಹಾಗೂ ಅವರ ವಹಿವಾಟಿನ ಮಾಹಿತಿಯನ್ನು ದಾಖಲು ಮಾಡಿಕೊಳ್ಳಬೇಕು. ಇದರಲ್ಲಿ ಗ್ರಾಹಕರ ಮಾಹಿತಿ ಸೋರಿಕೆಯಾಗದಂತೆ ಕ್ರಮ



ಕೈಗೊಳ್ಳಬೇಕು. ಮಾಹಿತಿ ಸೋರಿಕೆಯ ಅಪಾಯ ದೂರವಾಗಬೇಕು. ಉದಾಹಾರಣೆಗೆ ಸ್ವೀಡನ್‌ನಲ್ಲಿ ಪಾವತಿ ವ್ಯವಸ್ಥೆ ಡಿಜಿಟಲೀಕರಣದ ನಂತರ ಬ್ಯಾಂಕ್ ದರೋಡೆಗಳು ಗಣನೀಯವಾಗಿ ತಗ್ಗಿವೆ. ಆದರೆ ಆನ್‌ಲೈನ್ ಪಾವತಿ ವಂಚನೆ ಪ್ರಕರಣಗಳು ಸ್ವಲ್ಪ ಮಟ್ಟಿಗೆ ಹೆಚ್ಚಾಗಿವೆ. ಆದ್ದರಿಂದ ಗ್ರಾಹಕರ ಖಾಸಗಿ ಹಾಗು ಮಾಹಿತಿಯ ಭದ್ರತೆಯನ್ನು ಕಾಪಾಡಿಕೊಳ್ಳುವುದು ಅತ್ಯಂತ ಪ್ರಮುಖ ಅಂಶವಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಈಗಾಗಲೇ ಸ್ಮಾರ್ಟ್ ಕಾರ್ಡ್ ಸೇರಿದಂತೆ ಪೂರ್ವ ಪಾವತಿ ವ್ಯವಸ್ಥೆಯ ಮಾಹಿತಿ ಸಂಗ್ರಹ ಸಂಬಂಧದ ನೀತಿಗಳನ್ನು ಪರಾಮರ್ಶಿಸುವ ಕಾರ್ಯವನ್ನು ಕೈಗೊಂಡಿದೆ. ತ್ವರಿತ ದೂರು ಇತ್ಯರ್ಥ ವ್ಯವಸ್ಥೆ ಹಾಗೂ ಅಪಾಯಗಳನ್ನು ತಪ್ಪಿಸುವ ಬಲಿಷ್ಠ ವ್ಯವಸ್ಥೆಯನ್ನು ರೂಪಿಸುವ ಅಗತ್ಯವಿದೆ.

* **ಭೌತಿಕ ಹಾಗೂ ತಾಂತ್ರಿಕ ಮೂಲಸೌಕರ್ಯ ಅಭಿವೃದ್ಧಿ** : ಪಾವತಿ ಪದ್ದತಿ ವ್ಯವಸ್ಥೆಯ ನಾನಾ ಪಾವತಿ ಟರ್ಮಿನಲ್‌ಗಳ ಲಭ್ಯತೆ, ಸ್ವೀಕೃತಿ ಮೇಲೆ ನಿಂತಿದೆ. ಈಗಾಗಲೇ ಉಲ್ಲೇಖಿಸಿರುವಂತೆ ಭಾರತದಲ್ಲಿ, ಪ್ರಸ್ತುತ ನಗದುರಹಿತ ವಹಿವಾಟುಗಳನ್ನು ನಿರ್ವಹಿಸಲು ಮೂಲಸೌಕರ್ಯ ಸಾಕಷ್ಟಿಲ್ಲ. ದೇಶದಲ್ಲಿ ನಗದುರಹಿತ ವಹಿವಾಟು ಉತ್ತೇಜನಕ್ಕೆ ಅಗತ್ಯ ಮೂಲಸೌಕರ್ಯ ಮತ್ತು ಸಾಮರ್ಥ್ಯವನ್ನು ವೃದ್ಧಿಗೊಳಿಸಬೇಕು. ಅದರಲ್ಲಿ ಸ್ಮಾರ್ಟ್‌ಫೋನ್‌ಗಳ ಲಭ್ಯತೆ, ಅಂತರ್ಜಾಲ ಮತ್ತು ಬ್ರಾಡ್ ಬ್ಯಾಂಡ್ ಸಂಪರ್ಕ ಮತ್ತಿತರ ಪ್ರಮುಖ ಅಂಶಗಳೂ ಸೇರಿವೆ. ಬಹುತೇಕ ನಗದುರಹಿತ ವಹಿವಾಟು, ಪಾವತಿ ವ್ಯವಸ್ಥೆಗೆ ತಂತ್ರಜ್ಞಾನವೇ ಆಧಾರ ಹಾಗಾಗಿ ಅಂತರ್ಜಾಲ ಸಂಪರ್ಕ ಅತ್ಯಂತ ಅಗತ್ಯ ಸಾಧನವಾಗಿದೆ.

* **ಕಡಿಮೆ ತೆರಿಗೆ** : ಸ್ಮಾರ್ಟ್ ಫೋನ್ ಮತ್ತು ಟ್ಯಾಬ್ಲೆಟ್ ಮತ್ತಿತರ ತಂತ್ರಜ್ಞಾನ ಆಧಾರಿತ ಉಪಕರಣಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಬೇಕಾಗಿದೆ. ಇದರಿಂದ ಜನರು ಡಿಜಿಟಲ್ ಪಾವತಿಗೆ ಮುಂದಾಗುತ್ತಾರೆ. ಹಣಕಾಸು ಸಚಿವಾಲಯ ಬಿಡುಗಡೆ ಮಾಡಿರುವ ವ್ಯವಸ್ಥೆಯಂತೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಡಿ ವಿದ್ಯುನ್ಮಾನ ವಸ್ತುಗಳಿಗೆ ಶೇ.28ರಷ್ಟು ತೆರಿಗೆ ವಿಧಿಸಲಾಗುತ್ತದೆ. ಇದು ಅತಿ ಹೆಚ್ಚು. ಸ್ಮಾರ್ಟ್‌ಫೋನ್‌ಗಳು ಕಡಿಮೆಬೆಲೆಗೆ ಜನಸಾಮಾನ್ಯರಿಗೆ ದೊರಕುವಂತಿರಬೇಕು. ವಿಶ್ವದ ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲೇ ಅತಿ ಹೆಚ್ಚು ಕಾರ್ಪೋರೇಟ್ ತೆರಿಗೆ ವಿಧಿಸಲಾಗುತ್ತಿದೆ.

2016ರಲ್ಲಿ ಭಾರತದಲ್ಲಿ ದೇಶಿಯ ಕಂಪನಿಗೆ ಶೇ.30ರಷ್ಟು ಕಾರ್ಪೋರೇಟ್ ತೆರಿಗೆ ಇದೆ, ವಿದೇಶಿ ಕಂಪನಿಗಳಿಗೆ ಶೇ.40ರಷ್ಟಿದೆ. ಜೊತೆಗೆ ಹೆಚ್ಚುವರಿ ಶುಲ್ಕ ಬೇರೆ ವಿಧಿಸಲಾಗುತ್ತದೆ. ಸ್ವೀಡನ್‌ನಲ್ಲಿ ಕಾರ್ಪೋರೇಟ್ ತೆರಿಗೆ ಪ್ರಮಾಣ ಶೇ.22 ಹಾಗೂ ಚೀನಾದಲ್ಲಿ ಶೇ.25ರಷ್ಟು ಇದೆ. ಅಲ್ಲಿ ದೇಶಿಯ ಹಾಗೂ ವಿದೇಶಿ ಕಂಪನಿಗಳಿಗೆ ಎರಡಕ್ಕೂ ಒಂದೇ ದರ ಇದೆ. ದುಬಾರಿ ತೆರಿಗೆ ದರ ಯಾವಾಗಲೂ ತೆರಿಗೆ ವಂಚನೆಗೆ ಉತ್ತೇಜನ ನೀಡುತ್ತದೆ.

* **ಸದೃಢ ಇ–ವಾಣಿಜ್ಯ ನೀತಿ:** ನಗದುರಹಿತ ಪಾವತಿಗೆ ಗ್ರಾಹಕರನ್ನು ಉತ್ತೇಜಿಸಲು ದೇಶದಲ್ಲಿ ಬಲಿಷ್ಠ ಇ–ವಾಣಿಜ್ಯ ನೀತಿ ಹೊಂದುವುದು ದೇಶಕ್ಕೆ ಅತ್ಯಗತ್ಯವಾಗಿದೆ.

ಒಟ್ಟಾರೆ, ಭಾರತ ಸರ್ಕಾರ 'ಕಡಿಮೆ ನಗದು ಆರ್ಥಿಕತೆ' ನಿಟ್ಟಿನಲ್ಲಿ ಸರಿಯಾದ ಕ್ರಮ ಕೈಗೊಂಡಿದೆ. ಆದರೆ, ಕಡಿಮೆ ನಗದು ಆರ್ಥಿಕತೆ ಹೊಂದುತ್ತಿರುವ ಇತರೆ ರಾಷ್ಟ್ರಗಳ ಅನುಭವಗಳನ್ನು ಗಮನಿಸಿದರೆ, ಮೂಲಸೌಕರ್ಯ ಮತ್ತು ಪೂರಕ ಶಾಸನಗಳನ್ನು ರೂಪಿಸುವುದು ಅತ್ಯಗತ್ಯವಾಗಿದೆ. ಕಡಿಮೆ ನಗದು ಅರ್ಥ ವ್ಯವಸ್ಥೆಯತ್ತ ಸಾಗುವ ಹೊತ್ತಿನಲ್ಲಿ ಹಣಕಾಸು ಸಂಸ್ಥೆಗಳು ಮತ್ತು ವಾಣಿಜ್ಯೋದ್ಯಮ ಒಟ್ಟಿಗೆ ಸೇರಿ ಕೆಲಸ ಮಾಡಬೇಕಿದೆ. ಅದಕ್ಕೂ ಮುನ್ನ, ದೇಶ ಅತಿ ಕಡಿಮೆ ಮತ್ತು ಸರಳ ತೆರಿಗೆ ಪದ್ಧತಿಯನ್ನು ಹೊಂದಬೇಕಾಗುತ್ತದೆ. ಅಲ್ಪ ನಗದು ಆರ್ಥಿಕತೆ ಹೊಂದುವ ನಿಟ್ಟಿನಲ್ಲಿ 2017–18ನೇ ಸಾಲಿನ ಕೇಂದ್ರ ಬಜೆಟ್ ಜಾರಿಯಲ್ಲಿ ವಿವಿಧ ಕ್ರಮಗಳನ್ನು ನಿರೀಕ್ಷಿಸಲಾಗಿದೆ. ❑

# ಪಾವತಿಯ ವ್ಯವಸ್ಥೆ – ಕನಿಷ್ಠ ನಗದಿನ ಆರ್ಥಿಕತೆ

* ಜಿ. ರಘುರಾಜ್



**ಮೊಬೈಲ್ ಫೋನ್‌ಗಳ ಸಮೃದ್ಧತೆಯು ಈಗ ನಗದುರಹಿತ ವಹಿವಾಟುಗಳು ಎಲ್ಲರಿಗೂ ಸಾಧ್ಯವಾಗುವಂತೆ ಮಾಡಿವೆ. ಇವುಗಳ ಪರಿಣಾಮವೆಂದರೆ, ಒಂದು ಖಾತೆಯಿಂದ ಅಥವಾ ವಾಲೆಟ್‌ನಿಂದ ಮತ್ತೊಂದಕ್ಕೆ ಹಣವನ್ನು ಪಾವತಿಮಾಡುವುದು ಬಳಕೆದಾರರಿಗೆ ದಿನದಿಂದ ದಿನಕ್ಕೆ ಸರಳವಾಗುತ್ತಿದೆ.**

ಪಾವತಿಯ ವ್ಯವಸ್ಥೆಯೆಂದರೆ, ಅದರ ಹೆಸರೇ ಹೇಳುವಂತೆ ಕೊಡಬೇಕಾಗಿರುವ ಹಣವನ್ನು ಪಾವತಿಮಾಡುವ ವ್ಯವಸ್ಥೆ, ಅದರಲ್ಲಿಯೂ ನಗದು ಅಥವಾ ಬೇರಾವ ಅಧಿಕೃತ ರೂಪದ ಹಣದ ವರ್ಗಾವಣೆಯಿಲ್ಲದೆ ಪಾವತಿಯನ್ನು ಮಾಡುವ ವ್ಯವಸ್ಥೆ. ನಗದಿನ ರೂಪದಲ್ಲಿ ಪಾವತಿಯನ್ನು ಮಾಡಬೇಕಾದಾಗ ಅದಕ್ಕೆ ಯಾವುದೇ ಮಧ್ಯವರ್ತಿ ವ್ಯವಸ್ಥೆಯ ಅಗತ್ಯವಿಲ್ಲ. ನಗದಿನ ವರ್ಗಾವಣೆಯಿಲ್ಲದೆ ಪಾವತಿಯನ್ನು ಮಾಡಬೇಕಾದ ಸಂದರ್ಭದಲ್ಲಿ, ಪಾವತಿಯನ್ನು ಮಾಡುವ ವ್ಯಕ್ತಿ ಹಾಗೂ ಅದನ್ನು ಸ್ವೀಕರಿಸುವ ವ್ಯಕ್ತಿ ಇಬ್ಬರೂ ತಮ್ಮ ನಡುವೆ ಇರುವ ಒಂದು 'ವ್ಯವಸ್ಥೆ'ಯ ವ್ಯಾಪ್ತಿಯೊಳಗೆ ಇರಬೇಕಾಗುತ್ತದೆ.

ಸಾಂಪ್ರದಾಯಿಕವಾಗಿ ಬ್ಯಾಂಕ್‌ಗಳ ನಡುವಿನ ವ್ಯವಹಾರದಲ್ಲಿ ನಡೆದುಕೊಂಡು ಬಂದಿರುವ ಕಾಗದದ ಹಣದ ವ್ಯವಸ್ಥೆಯಲ್ಲಿ, ಖಾತೆದಾರನ ಚೆಕ್, ಡಿಮ್ಯಾಂಡ್ ಡ್ರಾಫ್ಟ್, ಪೇಮೆಂಟ್ ಆರ್ಡರ್, ಬ್ಯಾಂಕರ್ ಚೆಕ್, ಲಾಭಾಂಶ ವಾರೆಂಟ್, ಬಡ್ಡಿಯ ವಾರೆಂಟ್, ಪ್ರವಾಸಿಗರ ಚೆಕ್, ಕೊಡುಗೆ ಚೆಕ್, ಡೆಬಿಟ್ ನೋಟ್, ಮರುಪಾವತಿ ಆದೇಶ ಇತ್ಯಾದಿ ವಿವಿಧ ರೂಪಗಳಲ್ಲಿರುವ ಚೆಕ್‌ಗಳು ನಗದಿನ ಬದಲಾಗಿ ಉಪಯೋಗಿಸಲ್ಪಡುತ್ತಿದ್ದವು. ಬ್ಯಾಂಕ್‌ಗಳ 'ಕ್ಲಿಯರಿಂಗ್ ಹೌಸ್' ವ್ಯವಸ್ಥೆಯ ಮೂಲಕ ಚೆಕ್‌ಗಳು ಒಬ್ಬರ ಖಾತೆಯಿಂದ ಮತ್ತೊಬ್ಬರ ಖಾತೆಗೆ ಹಣವನ್ನು ವರ್ಗಾಯಿಸುತ್ತವೆ. ಹುಟ್ಟಿ ಎರಡು ಶತಮಾನಗಳು ಕಳೆದರೂ ನಗದಿನ ಅವಶ್ಯಕತೆಯಿಲ್ಲದೆ ಹಣದ ವರ್ಗಾವಣೆ ಮಾಡಬಹುದಾದ ಈ ಚೆಕ್‌ವ್ಯವಸ್ಥೆಯು ಇಂದಿಗೂ ಚಾಲ್ತಿಯಲ್ಲಿದೆ.

ಎಲೆಕ್ಟ್ರಾನಿಕ್ ಹಾಗೂ ಸಂಪರ್ಕ ತಂತ್ರಜ್ಞಾನದಲ್ಲಿನ ಆವಿಷ್ಕಾರಗಳು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ನಡೆಯುವ ಹಣದ ವರ್ಗಾವಣೆಯ ಹೊಸ ಹೊಸ ಮಾರ್ಗಗಳಿಗೆ ಹಾಗೂ ಬ್ಯಾಂಕ್‌ಗಳಿಗಿಂತ ವಿಭಿನ್ನವಾದ ಟೆಲಿಕಾಮ್‌ನಂತಹ ವ್ಯವಸ್ಥೆಗಳಿಗೆ ಬಾಗಿಲನ್ನು ತೆರೆಯಿತು. ಇವುಗಳಲ್ಲಿ ಮೊದಲನೆಯದು ಎಂದರೆ 1986ರಲ್ಲಿ ಬಂದ ಎಮ್‌ಸಿಐಆರ್ ತಂತ್ರಜ್ಞಾನ (ಮ್ಯಾಗ್ನೆಟಿಕ್ ಇಂಕ್ ಕ್ಯಾರೆಕ್ಟರ್ ರೆಕಗ್ನಿಷನ್ – ಮುದ್ರಿತ ಸಂಕೇತಗಳನ್ನು ಆಯಸ್ಕಾಂತಿಕ ತಂತ್ರಜ್ಞಾನದಿಂದ ಗುರುತಿಸುವುದು). ಈ ವಿಧಾನವು ಬ್ಯಾಂಕ್‌ಗಳಲ್ಲಿ ಗಣಕಗಳನ್ನು ಹಾಗೂ ಇತರ ಯಾಂತ್ರಿಕ ಸೌಲಭ್ಯಗಳನ್ನು ಬಳಸಿಕೊಳ್ಳುವುದಕ್ಕೆ ಅಡಿಗಲ್ಲನ್ನು ಹಾಕಿತು ಮತ್ತು ಇದರಿಂದಾಗಿ ಇತರ ವಿಧಾನಗಳು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಮೂಡಿಬರಲು ಪ್ರಾರಂಭವಾದವು ಹಾಗೂ ಇದಕ್ಕೆ ಭಾರತದ ರಿಸರ್ವ್ ಬ್ಯಾಂಕ್ ಹೆಚ್ಚಿನ ಪ್ರಾಮುಖ್ಯವನ್ನು ನೀಡಲಾರಂಭಿಸಿತು.

1990ರ ದಶಕದಲ್ಲಿ ರಿಸರ್ವ್ ಬ್ಯಾಂಕ್ ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸೇವೆಗಳನ್ನು ಜಾರಿಗೆ ತಂದಿತು. ಪ್ರಾರಂಭದಲ್ಲಿ ಇದು ಹಣವನ್ನು ವರ್ಗಾಯಿಸುವವರ ಬ್ಯಾಂಕಿನ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಹಣದ ವರ್ಗಾವಣೆಯನ್ನು ಮಾಡುವುದಕ್ಕೆ ಉಪಯೋಗಿಸಲ್ಪಡುತ್ತಿತ್ತು. ಇದರ ಮುಂದಿನ ಹೆಜ್ಜೆಯೆಂದರೆ, ಹಣವನ್ನು

* ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ. E-mail : graghuraj@idrbt.ac.in



ವರ್ಗಾಯಿಸುವವರು ಇಂತಹವರಿಗೆ ಹಣವನ್ನು ವರ್ಗಾಯಿಸಬೇಕೆಂದು ತಮ್ಮ ಬ್ಯಾಂಕಿಗೆ ಆದೇಶವನ್ನು ನೀಡುವಂತಹ ವ್ಯವಸ್ಥೆ, ಇಸಿಎಸ್–ಡಿಆರ್ (ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸೇವೆಗಳು). ಇದನ್ನು ಮುಖ್ಯವಾಗಿ ದೂರವಾಣಿ, ವಿದ್ಯುತ್ತು, ನೀರು, ಪ್ರೀಮಿಯಮ್‌ಗಳು ಇತ್ಯಾದಿ ಸೇವೆಗಳಿಗಾಗಿ ಪಾವತಿ ಮಾಡಲು ಉಪಯೋಗಿಸಲಾಗುತ್ತಿದೆ. ಇದರ ನಂತರ ಒಂದು ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುವವರು ಬೇರೆ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುವ ವ್ಯಕ್ತಿಗೆ ಎಲೆಕ್ಟ್ರಾನಿಕ್ ಆದೇಶದ ಮೂಲಕ ಹಣವನ್ನು ವರ್ಗಾಯಿಸುವ ಹಣದ ಎಲೆಕ್ಟ್ರಾನಿಕ್ ವರ್ಗಾವಣೆಯ ಪದ್ಧತಿಯ ಆವಿಷ್ಕಾರವಾಯಿತು. ಪ್ರಾರಂಭದಲ್ಲಿ ಈ ವ್ಯವಸ್ಥೆಯು ದೇಶದಲ್ಲಿನ ಹದಿನೈದು ನಗರಗಳಿಗೆ ಸೀಮಿತವಾಗಿದ್ದರೂ, 2004ರ ನಂತರ, ಎನ್‌ಇಎಫ್‌ಟಿ (ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ಸ್ ಟ್ರಾನ್ಸ್‌ಫರ್ – ಹಣದ ರಾಷ್ಟ್ರೀಯ ಎಲೆಕ್ಟ್ರಾನಿಕ್ ವರ್ಗಾವಣೆ) ದೇಶಾದ್ಯಂತ ಜಾರಿಗೆ ಬಂದಿತು.

**2015–16ರಲ್ಲಿನ ಪಾವತಿಯ ಮೌಲ್ಯ**




ಬ್ಯಾಂಕ್‌ಗಳು ತಮ್ಮ ಎಲ್ಲಾ ಶಾಖೆಗಳ ವ್ಯವಹಾರಗಳನ್ನೂ ಕೇಂದ್ರೀಕರಿಸಿದ ನಂತರ ತಮ್ಮ ಬಳಕೆದಾರರಿಗೆ ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ವಿವಿಧ ರೀತಿಯ ಸೇವೆಯನ್ನು ವಿಳಂಬವಿಲ್ಲದೆ ಒದಗಿಸುವುದಕ್ಕೆ ಮುಂದಾದವು. ಕಾರ್ಡ್‌ಗಳ ಬಳಕೆಯು ಹಣದ ಪಾವತಿಗೆ ಭೌಗೋಳಿಕ ಎಲ್ಲೆಗಳ ಮಿತಿಯನ್ನು ಮೀರಿದ ಅವಕಾಶಗಳನ್ನು ಒದಗಿಸಿತು.

ಬೇರೆ ಬೇರೆ ಬ್ಯಾಂಕುಗಳ ಎಟಿಎಮ್‌ಗಳನ್ನು ಒಂದೇ ಜಾಲಕ್ಕೆ ತಂದು, ಒಂದು ಬ್ಯಾಂಕಿನ ಬಳಕೆದಾರರು ಮತ್ತೊಂದು ಬ್ಯಾಂಕಿನ ಎಟಿಎಮ್‌ನಲ್ಲಿ ಹಣಪಡೆಯಬಹುದಾದ ಅವಕಾಶವನ್ನು ನೀಡಿದುದು ಒಂದು ಹೊಸ ಪಥನಿರ್ಮಾಣಕ್ಕೆ ಕಾರಣವಾಗಿ, ಬಳಕೆದಾರರು ಬ್ಯಾಂಕುಗಳಿಗೆ ಅಲೆದಾಡುವುದು ಬಹಳಷ್ಟು ಮಟ್ಟಿಗೆ ತಪ್ಪಿತು. ನಂತರ, ಎಟಿಎಮ್ ಕಾರ್ಡ್‌ಗಳು ಬಹೂಪಯೋಗಿ ಡೆಬಿಟ್ ಕಾರ್ಡ್‌ಗಳಾಗಿ ರೂಪಾಂತರಗೊಂಡವು. ಅವುಗಳು, ನಗದನ್ನು ಪಡೆಯುವುದರ ಜೊತೆಗೆ ವಸ್ತುಗಳನ್ನು ಖರೀದಿಮಾಡುವ ಸ್ಥಳಗಳಲ್ಲಿಯೇ ಖರೀದಿಮಾಡಿದ ವಸ್ತುಗಳ ಖರೀದಿ ಮೌಲ್ಯವನ್ನು ನಗದಿಲ್ಲದೆಯೇ ಪಾವತಿಮಾಡುವ ಹಾಗೂ ಅಂತರ್ಜಾಲದಲ್ಲಿ ಎಲ್ಲ 'ಆನ್–ಲೈನ್' ಪಾವತಿಗಳನ್ನು ಮಾಡುವ ಸಾಧನವೂ ಆಯಿತು.

**2015–16ರಲ್ಲಿ ನಡೆದ ಹಣದ ವರ್ಗಾವಣೆಯ ಪ್ರಕರಣಗಳ ಪ್ರಮಾಣ** (ಮಿಲಿಯನ್‌ಗಳಲ್ಲಿ)

| | | |
|---|---|---|
| 1–4. | ಎಸ್‌ಐಎಫ್‌ಎಮ್‌ಐಗಳು – ಆರ್‌ಟಿಜಿಎಸ್ ಮತ್ತು ಸಿಬಿಎಲ್‌ಒ, ಜಿ–ಸೆಕ್, ಫಾರೆಕ್ಸ್ | 101.4 |
| 5–7. | ಕಾಗದ – ಸಿಟಿಎಸ್, ಎಮ್‌ಐಸಿಆರ್ | 1096.4 |
| 8. | ಇಸಿಎಸ್–ಡಿಆರ್. | 224.8 |
| 9. | ಇಸಿಎಸ್–ಸಿಆರ್. | 39.0 |
| 10. | ಎನ್‌ಇಎಫ್‌ಟಿ | 1252.9 |
| 11. | ಇಮ್ಮೀಡಿಯೆಟ್ ಪೇಮೆಂಟ್ ಸರ್ವೀಸ್ (ಐಎಮ್‌ಪಿಎಸ್) | 220.8 |
| 12. | ನ್ಯಾಷನಲ್ ಆಟೊಮೇಟೆಡ್ ಕ್ಲಿಯರಿಂಗ್ ಹೌಸ್ (ಎನ್‌ಎಸಿಎಚ್) | 1404.1 |
| 13. | ಕ್ರೆಡಿಟ್ ಕಾರ್ಡ್‌ಗಳು | 785.7 |
| 14. | ಡೆಬಿಟ್ ಕಾರ್ಡ್‌ಗಳು | 1173.5 |
| 15. | ಪ್ರಿಪೇಯ್ಡ್ ಪೇಯ್‌ಮೆಂಟ್ ಇನ್ಸ್ಟ್ರುಮೆಂಟ್ಸ್ (ಪಿಪಿಐಗಳು) | 748.0 |
| ಒಟ್ಟು (1ರಿಂದ 15) | | 7046.6 |

**ಎದುರಿಸಬೇಕಾದ ಅಪಾಯಗಳು**

| ಬ್ಯಾಂಕ್‌ಗಳ ನಡುವಿನ ಪಾವತಿಯು ಏಕೆಬೇಕು?: | ನಗದಿನ ಪಾವತಿಯಲ್ಲಿರುವ ಅಪಾಯಗಳು: |
|---|---|
| * ಅನುಕೂಲಕ್ಕಾಗಿ? | * ಸಾಲವನ್ನು ಪಡೆಯುವಲ್ಲಿನ ತೊಂದರೆಗಳು |
| * ಸುರಕ್ಷಿತತೆ? | * ಬೇಕಾದಾಗ ಹಣ ದೊರೆಯದ ತೊಂದರೆ |
| * ವ್ಯವಹಾರದ ದಾಖಲೆಗಳನ್ನು ಇಡಬೇಕು? | * ಕಾನೂನಿನ ತೊಂದರೆ |
| * ಬಡ್ಡಿಯ ಮೂಲಕ ಬರುವ ಆದಾಯ? | * ವ್ಯಾವಹಾರಿಕ ತೊಂದರೆಗಳು |
| * ಸಾಲವನ್ನು ಪಡೆಯುವ ಅರ್ಹತೆ? | * ಇಡೀ ವ್ಯವಸ್ಥೆಗೆ ಸಂಬಂಧಿಸಿದ ತೊಂದರೆಗಳು |
| * ಭವಿಷ್ಯದ ವ್ಯವಹಾರಗಳು? | |

### ವಹಿವಾಟಿನ ಮೌಲ್ಯದ ವಿತರಣೆ – ಮಾರ್ಚ್, 2016
### ಪಾವತಿ ವ್ಯವಸ್ಥೆಯಲ್ಲಿನ ಮೌಲ್ಯದ ಪ್ರಮಾಣ




### 2015–16ರಲ್ಲಿ ನಡೆದ ಹಣದ ವರ್ಗಾವಣೆಯ ಹಣದ ಪ್ರಮಾಣ
(ಬಿಲಿಯನ್ ರೂ.ಗಳಲ್ಲಿ)

| | | |
|---|---|---|
| 1–4. | ಎಸ್ಐಎಫ್ಎಮ್ಐಗಳು – ಆರ್‌ಟಿಜಿಎಸ್ ಮತ್ತು ಸಿಬಿಎಲ್ಒ, ಜಿ–ಸೆಕ್, ಫಾರೆಕ್ಸ್ | 1545672 |
| 5–7. | ಕಾಗದ – ಸಿಟಿಎಸ್, ಎಮ್ಐಸಿಆರ್ | 81861 |
| 8. | ಇಸಿಎಸ್–ಡಿಆರ್. | 1652 |
| 9. | ಇಸಿಎಸ್–ಸಿಆರ್. | 1059 |
| 10. | ಎನ್ಇಎಫ್‌ಟಿ | 83273 |
| 11. | ಇಮ್ಮೀಡಿಯೆಟ್ ಪೇಮೆಂಟ್ ಸರ್ವೀಸ್ (ಐಎಮ್‌ಪಿಎಸ್) | 1622 |
| 12. | ನ್ಯಾಷನಲ್ ಆಟೋಮೇಟೆಡ್ ಕ್ಲಿಯರಿಂಗ್ ಹೌಸ್ (ಎನ್ಎಸಿಎಚ್) | 3802 |
| 13. | ಕ್ರೆಡಿಟ್ ಕಾರ್ಡ್‌ಗಳು | 2407 |
| 14. | ಡೆಬಿಟ್ ಕಾರ್ಡ್‌ಗಳು | 1589 |
| 15. | ಪ್ರಿಪೇಯ್ಡ್ ಪೇಯ್‌ಮೆಂಟ್ ಇನ್ಸ್ಟ್ರುಮೆಂಟ್ಸ್ (ಪಿಪಿಐಗಳು) | 488 |
| | ಒಟ್ಟು (1ರಿಂದ 15) | 1723425 |

### ಉದಾಹರಣೆಗೆ, ಎನ್ಇಎಫ್‌ಟಿ ವಹಿವಾಟಿನ ಸಂಖ್ಯೆಯಲ್ಲಿ ವರ್ಷದಿಂದ ವರ್ಷಕ್ಕೆ ಆಗಿರುವ ಮೇಲ್ಮುಖ ಪ್ರಗತಿ




ಎನ್ಇಎಫ್‌ಟಿಯು ಚಿಲ್ಲರೆ ಪಾವತಿಗಳ ಆವಶ್ಯಕತೆಗಳನ್ನು ಪೂರೈಸುತ್ತಿರುವಾಗಲೇ, ಭಾರತದ ರಿಸರ್ವ್ ಬ್ಯಾಂಕ್ ಆರ್‌ಟಿಜಿಎಸ್ (ರಿಯಲ್ ಟೈಮ್ ಗ್ರಾಸ್ ಸೆಟ್ಲ್‌ಮೆಂಟ್) ವ್ಯವಸ್ಥೆಯನ್ನು 2004ರ ಮಾರ್ಚ್‌ನಲ್ಲಿ ದೊಡ್ಡ ದೊಡ್ಡ ಮೊತ್ತದ ಹಣವನ್ನು ವರ್ಗಾವಣೆಯ ಸಲುವಾಗಿ ಜಾರಿಗೆ ತಂದಿತು. ಇದನ್ನು ಬ್ಯಾಂಕ್‌ಗಳ ಫಂಡ್ಸ್ ಮೇನೇಜರ್‌ಗಳು ಮತ್ತು ಹಣಕಾಸಿನ ಸಂಸ್ಥೆಗಳಷ್ಟೇ ಅಲ್ಲದೆ, ಹೆಚ್ಚು ಮೊತ್ತದ ವರ್ಗಾವಣೆಯನ್ನು ಮಾಡುವವರೂ ಬಳಸಿಕೊಳ್ಳುತ್ತಿದ್ದಾರೆ. ಅದರ ಹೆಸರಿನಲ್ಲಿಯೇ ಸೂಚಿತವಾಗಿರುವಂತೆ, ಅನಗತ್ಯವಾಗಿ ಹೆಚ್ಚು ಸಮಯವನ್ನು ತೆಗೆದುಗೊಳ್ಳದೆ ಬ್ಯಾಂಕುಗಳ ನಡುವೆ ಪರಸ್ಪರ ವರ್ಗಾವಣೆಯನ್ನು ಶೀಘ್ರವಾಗಿ ಮಾಡಬಹುದಾದ ವ್ಯವಸ್ಥೆಯೆಂದರೆ ಇದೊಂದೇ.

ಬೇರೆ ಬೇರೆ ಬ್ಯಾಂಕುಗಳ ಬಳಕೆದಾರರ ನಡುವೆ ಇಂತಹ ಶೀಘ್ರ ವರ್ಗಾವಣೆಗಳು ಆಗಬೇಕಾದರೆ, ಅಂತಹ ಬ್ಯಾಂಕುಗಳ ನಡುವೆ ಒಂದು ಕೇಂದ್ರ ಪಕ್ಷ ಅಥವಾ ಬ್ಯಾಂಕಿನ ವ್ಯವಸ್ಥೆ ಇರಬೇಕಾಗುತ್ತದೆ. ಇಲ್ಲಿಯವರೆಗೆ ನಡೆದುಕೊಂಡು ಬಂದಿರುವಂತೆ, ದೇಶದ ಕೇಂದ್ರ ಬ್ಯಾಂಕ್ ಆದ, ಭಾರತದ ರಿಸರ್ವ್ ಬ್ಯಾಂಕ್ ಇಂತಹ ಕೇಂದ್ರ ಬ್ಯಾಂಕ್ ಆಗಿ ಕಾರ್ಯವನ್ನು ನಿರ್ವಹಿಸುತ್ತಿದೆ. 2007ರ ಪೇಮೆಂಟ್ ಅಂಡ್ ಸೆಟ್ಲ್‌ಮೆಂಟ್ (2007ರ ಪಾವತಿ ಮತ್ತು ಫೈಸಲ್/ತೀರಿಕೆ) ಕಾನೂನು ಜಾರಿಗೆ ಬಂದು ಪಾಲುದಾರ ಬ್ಯಾಂಕ್‌ಗಳ ನಡುವೆ ಪಾವತಿ ಹಾಗೂ ತೀರಿಕೆಯ ಕ್ಷೇತ್ರದಲ್ಲಿ ರಿಸರ್ವ್ ಬ್ಯಾಂಕ್‌ಗೆ ಪಾತ್ರವಹಿಸುವ ಹಾದಿಯನ್ನು ತೆರೆಯಿತು.

ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ – ಭಾರತದ ರಾಷ್ಟ್ರೀಯ ಪಾವತಿ ಸಂಸ್ಥೆ) ಮತ್ತು ಕ್ಲಿಯರಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಸಿಸಿಐಎಲ್) – ಈ ಎರಡು ಪಾವತಿ ಸೌಲಭ್ಯವನ್ನು ನೀಡಲು ರಿಸರ್ವ್ ಬ್ಯಾಂಕ್‌ನಿಂದ ಅಧಿಕೃತತೆಯನ್ನು ಪಡೆದ ಪ್ರಮುಖವಾದ ಸಂಸ್ಥೆಗಳಾಗಿವೆ. ಚಿಲ್ಲರೆ ಪಾವತಿಗಳನ್ನು ಗರಿಷ್ಠಪ್ರಮಾಣದಲ್ಲಿ ನಿಭಾಯಿಸುತ್ತಿರುವ ಎನ್‌ಪಿಸಿಐ ಎಲ್ಲಾ ಬ್ಯಾಂಕ್‌ಗಳ ಎಲ್ಲಾ ಎಟಿಎಮ್‌ಗಳನ್ನು ಪರಸ್ಪರ ಸಂಪರ್ಕಕ್ಕೆ ತಂದು, ನ್ಯಾಷನಲ್ ಫೈನಾನ್ಷಿಯಲ್ ಸ್ವಿಚ್‌ನ್ನು



ನಿರ್ವಹಿಸುತ್ತದೆ. ಎನ್‌ಪಿಸಿಐ ಹಲವು ಸೇವೆಗಳನ್ನು ಒದಗಿಸುತ್ತಿದೆ:

* ಐಎಮ್‌ಪಿಎಸ್ – ಇಮ್ಮೀಡಿಯೆಟ್ ಪೇಮೆಂಟ್ ಸಿಸ್ಟಮ್ (ತಕ್ಷಣ ಪಾವತಿ ವ್ಯವಸ್ಥೆ),
* ಎನ್‌ಎಸಿಎಚ್ – ನ್ಯಾಷನಲ್ ಆಟೊಮೇಟೆಡ್ ಕ್ಲಿಯರಿಂಗ್ ಹೌಸ್ (ರಾಷ್ಟ್ರೀಯ ಸ್ವಯಂಚಾಲಿತ ಕ್ಲಿಯರಿಂಗ್ ಸದನ),
* ಸಿಟಿಎಸ್ – ಚೆಕ್ ಟ್ರಂಕೇಷನ್ ಸಿಸ್ಟಮ್ (ಛಾಯಾಚಿತ್ರದ ಮೂಲಕ ಚೆಕ್‌ಗಳಿಗೆ ಪಾವತಿಯನ್ನು ಮಾಡುವ ವ್ಯವಸ್ಥೆ),
* ಎಇಪಿಎಸ್ – ಆಧಾರ್ ಎನೇಬಲ್ಡ್ ಪೇಮೆಂಟ್ ಸಿಸ್ಟಮ್ (ಆಧಾರ್ ಅವಲಂಬಿತ ಪಾವತಿ ವ್ಯವಸ್ಥೆ),
* ಯುಪಿಐ – ಯೂನಿಫೈಡ್ ಪೇಮೆಂಟ್ ಇಂಟರ್‌ಫೇಸ್,
* *99#–ಬೇಸ್ಡ್ ಆನ್ ಯುಎಸ್‌ಎಸ್‌ಡಿ – ಅನ್‌ಸ್ಟ್ರಕ್ಚರ್ಡ್ ಸಪ್ಲಿಮೆಂಟರಿ ಸರ್ವೀಸ್ ಡೇಟಾ,
* ರೂಪೇ ಡೆಬಿಟ್ ಕಾರ್ಡ್,
* ಯುಪಿಐ – ಯೂನಿಫೈಡ್ ಪೇಮೆಂಟ್ ಇಂಟರ್‌ಫೇಸ್ – ಒಂದೇ ವ್ಯವಸ್ಥೆಯ ಮೂಲಕ ಎಲ್ಲಾ ಬ್ಯಾಂಕ್ ಖಾತೆಗಳ ಪಾವತಿಗಳನ್ನೂ ಮಾಡುವುದು.



ಎನ್‌ಪಿಸಿಐ "ಬಿಬಿಪಿಎಸ್ – ಭಾರತ್ ಬಿಲ್ ಪೇಮೆಂಟ್ ಸಿಸ್ಟಮ್"ನ್ನು ರೂಪಿಸುತ್ತಿದೆ. ಇದು ಬಳಕೆದಾರರು ಸರಕಾರಕ್ಕೆ ಸಲ್ಲಿಸಬೇಕಾದ ತೆರಿಗೆಗಳು, ಮಾಡಬೇಕಾದ ಇತರ ಪಾವತಿಗಳೂ ಸೇರಿದಂತೆ ಎಲ್ಲಾ ಬಗೆಯ ಪಾವತಿಗಳನ್ನು ದೇಶದ ಯಾವುದೇ ಮೂಲೆಯಿಂದ ಬೇಕಾದರೂ ಮಾಡುವ ಸೌಲಭ್ಯವನ್ನು ಒದಗಿಸುತ್ತದೆ. ಇವುಗಳಲ್ಲದೆ, ಪಾವತಿ ಸೇವೆಯನ್ನು ಒದಗಿಸುವ ಹಲವಾರು ಸಂಸ್ಥೆಗಳು ಇವೆ.

**ಭಾರತದಲ್ಲಿ ಪಾವತಿ ವ್ಯವಸ್ಥೆ**




**2015–18ರ ಅವಧಿಯಲ್ಲಿ ಪಾವತಿ ವ್ಯವಸ್ಥೆಯ ಬಗೆಗೆ ರಿಸರ್ವ್ ಬ್ಯಾಂಕ್‌ನ ಮುನ್ನೋಟ:**

**ಪ್ರತಿಕ್ರಿಯಾತ್ಮಕವಾದ ನಿಬಂಧನೆಗಳನ್ನು, ಪರಸ್ಪರ ವರ್ತಿಸುವ, ಪರಿಣಾಮಕಾರಿಯಾಗಿರುವ ನಿಬಂಧನೆಗಳ ಮೂಲಕ ಅತ್ಯುತ್ತಮ ವರ್ಗದ, ಸಮರ್ಥವಾದ ವ್ಯವಸ್ಥೆಯನ್ನು ರೂಪಿಸುವುದು.**

| ವರ್ಷ ಏಪ್ರಿಲ್–ಮಾರ್ಚ್ | ಎನ್‌ಇಎಫ್‌ಟಿ (ಸಂಖ್ಯಾ ಪ್ರಮಾಣ – ದಶಲಕ್ಷದಲ್ಲಿ) | ಎನ್‌ಇಎಫ್‌ಟಿ (ಮೌಲ್ಯ – ಬಿಲಿಯನ್ ರೂಗಳಲ್ಲಿ) |
|---|---|---|
| 2006–07 | 8 | 478 |
| 2007–08 | 14 | 1332 |
| 2008–09 | 25 | 3216 |
| 2009–10 | 41 | 6636 |
| 2010–11 | 132 | 9328 |
| 2011–12 | 226 | 17839 |
| 2012–13 | 392 | 28889 |
| 2013–14 | 658 | 43570 |
| 2014–15 | 924 | 59579 |
| 2015–16 | 1245 | 82806 |

ಅವುಗಳೆಂದರೆ: ಪೇಟಿಎಮ್, ಬಿಲ್‌ಡೆಸ್ಕ್, ಸಿಸಿಅವೆನ್ಯೂ, ಇನ್‌ಸ್ಟಾಮೊಜೊ, ಪೇಪಾಲ್, ಸೈಟ್ರಸ್‌ಪೇ, ಡೈರೆಕ್‌ಪೆ, ಪೇಯುಮನಿ, ಇ–ಪೇ, ಪೇನೆಟ್ಸ್, ಇತ್ಯಾದಿ. ಇವುಗಳ ಜೊತೆಗೆ, ಪರಿವೃತ ಪಾವತಿ ವ್ಯವಸ್ಥೆಗಳು (ಕ್ಲೋಸ್‌ಡ್ ಪೇಮೆಂಟ್ ಸಿಸ್ಟಮ್) ಕೂಡ ಕಾರ್ಯವನ್ನು ನಿರ್ವಹಿಸುತ್ತಿವೆ. ಅವುಗಳೆಂದರೆ, ಸಾರಿಗೆ ವ್ಯವಸ್ಥೆ, ಮಾರುಕಟ್ಟೆ ಒಕ್ಕೂಟಗಳು, ಡೆಲಿವರಿ ಸೇವೆ, ಇತ್ಯಾದಿಗಳು, ಇವುಗಳು ಸೀಮಿತ ಉದ್ದೇಶದ ಪೂರ್ವ–ಪಾವತಿ ಕಾರ್ಡ್‌ಗಳ ಸೌಲಭ್ಯವನ್ನೂ ಹೊಂದಿವೆ.

**2007ರ ಪಾವತಿ ಮತ್ತು ಫೈಸಲ್/ತೀರಿಕೆಯ ಕಾನೂನಿನ 2(1)ನೆಯ ಪರಿಚ್ಛೇದದ ಅಡಿಯಲ್ಲಿ ಪಾವತಿ ವ್ಯವಸ್ಥೆಯ ವಿವರಣೆ:**

**"ಪಾವತಿ ವ್ಯವಸ್ಥೆ"ಯೆಂದರೆ, ಪಾವತಿ ಮಾಡುವವನ ಮತ್ತು ಪಾವತಿಯನ್ನು ಸ್ವೀಕರಿಸುವವನ ನಡುವೆ ಕ್ಲಿಯರಿಂಗ್, ಪಾವತಿ ಅಥವಾ ತೀರಿಕೆಗಳಿಗೆ ಅಥವಾ ಅವೆಲ್ಲವುಗಳಿಗೆ ಅನುಕೂಲವನ್ನು ಒದಗಿಸುವ, ಆದರೆ ಸ್ಟಾಕ್ ಎಕ್ಸ್‌ಚೇಂಜ್‌ಗಳನ್ನು ಒಳಗೊಳ್ಳದ ಒಂದು ವ್ಯವಸ್ಥೆ:**

**ವಿವರಣೆ: ಈ ಖಂಡದ ಉದ್ದೇಶಕ್ಕಾಗಿ, "ಪಾವತಿ ವ್ಯವಸ್ಥೆ"ಯು ಕ್ರೆಡಿಟ್ ಕಾರ್ಡ್‌ಗಳ ಬಳಕೆ, ಡೆಬಿಟ್ ಕಾರ್ಡ್‌ಗಳ ಬಳಕೆ, ಸ್ಮಾರ್ಟ್‌ಕಾರ್ಡ್‌ಗಳ ಬಳಕೆ, ಹಣದ ವರ್ಗಾವಣೆ ಅಥವಾ ಅಂತಹ ಇತರ ಎಲ್ಲಾ ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ.**

ಯಾವುದೇ ಪಾವತಿ ವ್ಯವಸ್ಥೆಯು ರಿಸರ್ವ್ ಬ್ಯಾಂಕಿನ ಪಾವತಿ ಮತ್ತು ಫೈಸಲ್/ತೀರಿಕೆಯ ಇಲಾಖೆಯ ಅನುಮತಿಯನ್ನು ಹೊಂದಿರತಕ್ಕದ್ದು.

ಪಾವತಿ ವ್ಯವಸ್ಥೆಗೆ ಮತ್ತು ಅದರಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿ/ಸಂಸ್ಥೆಗಳಿಗೆ ನೀಡುವ ಅನುಮತಿಯು ಅಂತಹ ವ್ಯಕ್ತಿ/ಸಂಸ್ಥೆಗಳ ಸಾಮರ್ಥ್ಯದ ಮಾಪನಕ್ಕೆ ಮತ್ತು ವ್ಯವಸ್ಥೆಯ ಕಾರ್ಯಾಚರಣೆಯ ಪರಿಧಿಗೆ ಹೊಂದುವಂತೆ ಇರುವ ನಿಯಮಕ್ಕೆ ಒಳಪಟ್ಟಿರುತ್ತದೆ. ಬ್ಯಾಂಕಿನ ಮೂಲಕ ಪಾವತಿಯನ್ನು ಮಾಡಬಯಸಿದರೆ, ಹಾಗೆ ಮಾಡಬಯಸುವ ವ್ಯಕ್ತಿಯು ಮತ್ತು ಪಾವತಿಯನ್ನು ಪಡೆಯಲಿರುವ ವ್ಯಕ್ತಿಯು ಅಂತಹ ಸೇವೆಯನ್ನು ಪಡೆಯಲು ತಮ್ಮತಮ್ಮ ಬ್ಯಾಂಕುಗಳಲ್ಲಿ ರಿಜಿಸ್ಟರ್ ಮಾಡಿಸಿಕೊಂಡಿರಬೇಕು. ಉಳಿದ ಸಂಸ್ಥೆಗಳ ಮೂಲಕ ಪಾವತಿಯನ್ನು ಮಾಡಬಯಸಿದರೆ, ಸಂಬಂಧಪಟ್ಟ ಎಲ್ಲಾ ವ್ಯಕ್ತಿಗಳೂ ಆ ಸಂಸ್ಥೆಯಲ್ಲಿ ರಿಜಿಸ್ಟರ್ ಮಾಡಿಸಿಕೊಂಡಿರಬೇಕು. ಆರ್‌ಟಿಜಿಎಸ್, ಎನ್‌ಇಎಫ್‌ಟಿ ಮತ್ತು ಇಸಿಎಸ್ ವ್ಯವಸ್ಥೆಯನ್ನು ಭಾರತದ ರಿಸರ್ವ್ ಬ್ಯಾಂಕ್ ನೇರವಾಗಿ ತಾನೇ ನೋಡಿಕೊಳ್ಳುತ್ತದೆ. ಚೆಕ್ ಕ್ಲಿಯರಿಂಗ್ ಸೇರಿದಂತೆ ಉಳಿದ ಎಲ್ಲಾ ಪಾವತಿ ವ್ಯವಸ್ಥೆಗಳನ್ನೂ, ಆ ಸೇವೆಯನ್ನು ಒದಗಿಸುವ ಸಂಸ್ಥೆಗಳೇ ನೋಡಿಕೊಳ್ಳುತ್ತವೆ ಮತ್ತು ಅಂತಿಮವಾಗಿ ಈ ಎಲ್ಲಾ ವ್ಯವಹಾರಗಳೂ ರಿಸರ್ವ್ ಬ್ಯಾಂಕ್‌ನ ರಿಜಿಸ್ಟರ್‌ಗಳಲ್ಲಿ ದಾಖಲಾಗುತ್ತವೆ.

ಹೊಸ ಹೊಸ ಸೇವೆಗಳು ಮಾರುಕಟ್ಟೆಗೆ ಬಂದಹಾಗೆ, ಇಡೀ ಬ್ಯಾಂಕಿಂಗ್ ಮತ್ತು ಹಣಕಾಸಿನ ಸೇವೆಗಳ ಕಾರ್ಯಕ್ಷೇತ್ರಗಳು ದೇಶದಲ್ಲಿ ಇಲ್ಲಿಯವರೆಗೂ ತಮ್ಮ ಸೇವೆಗಳು ತಲುಪದಿದ್ದ ದೂರದೂರದ ಮೂಲೆಗಳನ್ನು ತಲುಪುವ ಉದ್ದೇಶದಿಂದ ಮಾಹಿತಿ ಮತ್ತು ಸಂಪರ್ಕಗಳ ತಂತ್ರಜ್ಞಾನದ ಸಹಾಯವನ್ನು ಹೆಚ್ಚುಹೆಚ್ಚಾಗಿ ಪಡೆದುಕೊಳ್ಳುತ್ತಿವೆ. ತಮ್ಮ ಪೂರ್ಣಪ್ರಮಾಣದ ಶಾಖೆಗಳನ್ನು ತೆರೆಯಲು ಸಾಧ್ಯವಿಲ್ಲದ ಸ್ಥಳಗಳಲ್ಲಿ ಹಣಕಾಸಿನ ಸೇವೆಗಳಲ್ಲಿ ಎಲ್ಲರನ್ನೂ ಒಳಗೊಳ್ಳುವ ನೀತಿಯನ್ನು ಪಾಲಿಸುವ ಉದ್ದೇಶದ ಅಡಿಯಲ್ಲಿ ಜನಗಳಿಗೆ ಕನಿಷ್ಠ ಪ್ರಮಾಣದ ಬ್ಯಾಂಕಿಂಗ್ ಸೇವೆಯನ್ನಾದರೂ ನೀಡಲು ಬ್ಯಾಂಕ್‌ಗಳು ಹಲವು ವಿಧಾನಗಳನ್ನು ಅನುಸರಿಸುತ್ತಿವೆ.



ಮೊಬೈಲ್ ಫೋನ್‌ಗಳ ಸಮೃದ್ಧತೆಯು ಈಗ ನಗದುರಹಿತ ವಹಿವಾಟುಗಳು ಎಲ್ಲರಿಗೂ ಸಾಧ್ಯವಾಗುವಂತೆ ಮಾಡಿವೆ. ಬ್ಯಾಂಕ್ ಖಾತೆಗಳ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ಮೊಬೈಲ್ ಫೋನ್‌ಗಳು ಈಗ ಜನರ ಬಳಿ ಇವೆ ಎಂಬಂತೆ ಕಾಣಿಸುತ್ತಿದೆ. ಇದು ಮೊಬೈಲ್ ಮತ್ತು ಇತರ ರೀತಿಯ ಕೈಯಲ್ಲಿ ಹಿಡಿದುಕೊಳ್ಳಬಹುದಾದ ಕಂಪ್ಯೂಟರ್‌ಗಳ ಮೂಲಕ ನಗದುರಹಿತ ವಹಿವಾಟನ್ನು ನಡೆಸಲು ಮತ್ತು ಮೊಬೈಲ್ ವಾಲೆಟ್‌ಗಳನ್ನು ಬಳಸಲು ಅನುಕೂಲವಾಗುವಂತಹ ಸಾಫ್ಟ್‌ವೇರ್‌ಗಳ ಬೆಳವಣಿಗೆಗೆ ಅವಕಾಶಗಳನ್ನು ಒದಗಿಸಿದೆ. ಇವುಗಳ ಪರಿಣಾಮವೆಂದರೆ, ಒಂದು ಖಾತೆಯಿಂದ ಅಥವಾ ವಾಲೆಟ್‌ನಿಂದ ಮತ್ತೊಂದಕ್ಕೆ ಹಣವನ್ನು ಪಾವತಿಮಾಡುವುದು ಬಳಕೆದಾರರಿಗೆ ದಿನದಿಂದ ದಿನಕ್ಕೆ ಸರಳವಾಗುತ್ತಿದೆ. ಆದರೆ, ಬಳಕೆದಾರರು, ಸುರಕ್ಷತೆಯ ದೃಷ್ಟಿಯಿಂದ, ತಮ್ಮ ಪಾಸ್‌ವರ್ಡ್‌ಗಳನ್ನು, ವೈಯಕ್ತಿಕ ಗುರುತಿನ ಸಂಖ್ಯೆಯನ್ನು ಇತರರೊಂದಿಗೆ ಹಂಚಿಕೊಳ್ಳದೆ ಗೌಪ್ಯವಾಗಿ ಇರಿಸಿಕೊಳ್ಳಬೇಕು ಮತ್ತು ಹೆಚ್ಚಿನ ಮೊತ್ತದ ವರ್ಗಾವಣೆಗಳನ್ನು ಆದಷ್ಟೂ ಕಡಿಮೆಮಾಡಬೇಕು.

ಮೇಲೆ ಹೇಳಿದ ವಿಧಾನಗಳು ನಗದು ವ್ಯವಹಾರವನ್ನು ಬಹಳಷ್ಟು ಕಡಿಮೆಮಾಡಿವೆ ಮತ್ತು ಚೆಕ್‌ಗಳ ಮೂಲಕ ಹಿಂದೆ ನಡೆಯುತ್ತಿದ್ದ ವರ್ಗಾವಣೆಯ ಪ್ರಮಾಣದಲ್ಲಿ ಕೂಡ ಸಾಕಷ್ಟು ಕಡಿಮೆಮಾಡಿವೆ. ಹಣದ ಪಾವತಿಯು ಈಗ ನಗದುರಹಿತ ಪಾವತಿಯ ದಿಕ್ಕಿನತ್ತ ಸಾಗುತ್ತಿದೆ.

ಕೆಲವು ನಿರ್ದಿಷ್ಟ ಮುಖ ಬೆಲೆಯ ನೋಟುಗಳನ್ನು ಅಮಾನ್ಯಗೊಳಿಸಿದ ಹಿನ್ನೆಲೆಯಲ್ಲಿ ಕಳೆದ ಒಂದೆರಡು ತಿಂಗಳಿನಲ್ಲಿ ನಗದು–ರಹಿತ ವಹಿವಾಟುಗಳು ಶೇ 35ರಿಂದ 40ರ ಪ್ರಮಾಣದಲ್ಲಿ ಬೆಳೆದಿವೆ. ❑

# ಪುನರ್‌ಮಾನ್ಯೀಕರಣ: ನಗದುರಹಿತ ಆರ್ಥಿಕತೆಯತ್ತ ಹೆಜ್ಜೆ



* ಡಿ.ಎಸ್. ಮಲ್ಲಿಕ್

ಡಿಜಿಟಲ್ ಆರ್ಥಿಕ ವ್ಯವಸ್ಥೆಯನ್ನು ವಿಸ್ತರಿಸುವ ಹಾಗೂ ನಗದು ರಹಿತ ವ್ಯವಹಾರದ ಕಡೆಗೆ ಮುನ್ನಡೆಯುವ ಯೋಜನೆಯ ಒಂದು ಅಂಗವಾಗಿ ಸರ್ಕಾರವು ಒಂದು ಲಕ್ಷ ಹೊಸ ಹೆಚ್ಚುವರಿ ಪಿಓಎಸ್ ಕೇಂದ್ರಗಳನ್ನು 31.3.2017ರೊಳಗೆ ಸ್ಥಾಪಿಸುವ ಗುರಿ ಹೊಂದಿದೆ.

ನವೆಂಬರ್ 8, 2016 ರ ಮಧ್ಯರಾತ್ರಿ ಕೇಂದ್ರ ಸರ್ಕಾರವು 500 ಹಾಗೂ 1000ರೂಗಳನ್ನು ಚಲಾವಣೆಯಿಂದ ಹಿಂತೆಗೆಯಲು ತಂದ ನಿರ್ಧಾರವು ಒಂದು ಐತಿಹಾಸಿಕ ಹೆಜ್ಜೆ ಆಗಿದ್ದು ಇದರ ಉದ್ದೇಶವು ಭ್ರಷ್ಟಾಚಾರ, ಕಪ್ಪುಹಣ, ಹಣದ ದುರ್ವ್ಯವಹಾರ (ಮನಿ ಲಾಂಡರಿಂಗ್) ಹಾಗೂ ಭಯೋತ್ಪಾದನೆಯ ವಿರುದ್ಧ ಹೋರಾಡಲು ಅಧಿಕ ಶಕ್ತಿಯನ್ನು ನೀಡಿತು. ಈ ನಿರ್ಧಾರವು ಖೋಟಾ ನೋಟುಗಳ ಮೂಲಕ ಭಯೋತ್ಪಾದನೆಯನ್ನು ಬೆಳೆಸುವ ಚಟುವಟಿಕೆಗಳನ್ನು ಹತ್ತಿಕ್ಕುವ ಈ ಹಣವನ್ನು ಗೂಢಾಚಾರಿಕೆ ಶಸ್ತ್ರಾಸ್ತ್ರ ಸಾಗಾಣಿಕೆ, ಮಾದಕ ವಸ್ತುಗಳ ಮತ್ತು ಇತರ ನಿಷಿದ್ಧ ವಸ್ತುಗಳ ಕಳ್ಳ ಸಾಗಾಣಿಕೆ ಮತ್ತು ಪರ್ಯಾಯ ಆರ್ಥಿಕ ವ್ಯವಸ್ಥೆಯನ್ನು ಹುಟ್ಟು ಹಾಕಿ ನಮ್ಮ ರಾಷ್ಟ್ರದ ನೈಜ/ಸಾಂಪ್ರದಾಯಿಕ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುವ ಕಪ್ಪು ಹಣವನ್ನು ನಿರ್ಮೂಲನಗೊಳಿಸುವುದಾಗಿತ್ತು.

ಹೊಸ 2000 ಮತ್ತು 500 ರೂಗಳ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುವ ಭಾರತೀಯ ರಿಸರ್ವ್ ಬ್ಯಾಂಕಿನ ಶಿಫಾರಸುಗಳನ್ನು ಭಾರತ ಸರ್ಕಾರವು ಒಪ್ಪಿಕೊಂಡಿತು. ಜೊತೆಯಲ್ಲಿ ಹಳೆಯ 100, 50 20, 10, 2 ಮತ್ತು ಒಂದು ರೂಗಳ ನೋಟುಗಳ ಮಾಮೂಲಿನಂತೆ ಚಲಾವಣೆಯಲ್ಲಿ ಅಬಾಧಿತವಾಗಿ ಮುಂದುವರೆದವು. ನಗದುರಹಿತ ಪಾವತಿಗಳಾದ ಚೆಕ್ಕುಗಳು, ಡಿಡಿಗಳು, ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡುಗಳು ವಿದ್ಯುನ್ಮಾನ ಹಣ ವರ್ಗಾವಣೆ ಇತ್ಯಾದಿಗಳು ಎಂದಿನಂತೆ ಮುಂದುವರೆಯಲು ಯಾವ ನಿರ್ಬಂಧಗಳೂ ಇರಲಿಲ್ಲ.

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು 8.11.2016ರ ಮಂಗಳವಾರ ರಾತ್ರಿ, ರಾಷ್ಟ್ರವನ್ನುದ್ದೇಶಿಸಿ ದೂರದರ್ಶನದ ಮೂಲಕ ಬಹು ಮುಖ್ಯವಾದ ಈ ಘೋಷಣೆಯನ್ನು ಮಾಡಿದರು. ಅವರು, ಈ ನಿರ್ಧಾರವು ಪ್ರಾಮಾಣಿಕ ಜನರ ಮತ್ತು ಶ್ರಮಪಟ್ಟು ದುಡಿಯುವ ಭಾರತೀಯ ಪ್ರಜೆಗಳ ಹಿತಾಸಕ್ತಿಗಳನ್ನು ರಕ್ಷಿಸುತ್ತದೆ ಹಾಗೂ ರಾಷ್ಟ್ರದ್ರೋಹಿಗಳು ಹಾಗೂ ಸಮಾಜ ವಿರೋಧಿಗಳು ಕಳ್ಳತನದಲ್ಲಿ ಸಂಗ್ರಹಿಸಿರುವ 500 ಮತ್ತು 1000 ರೂಗಳ ನೋಟುಗಳು ಇನ್ನು ಮುಂದೆ ಯಾವುದೇ ಬೆಲೆಯಿಲ್ಲದ ಕೇವಲ ಕಾಗದ ಚೂರುಗಳಾಗುತ್ತದೆ ಎಂದು ಹೇಳಿದರು.

ಸರ್ಕಾರದ ಈ ನಿರ್ಧಾರವು ಭ್ರಷ್ಟಾಚಾರ, ಕಪ್ಪುಹಣ ಹಾಗೂ ಖೋಟಾ ನೋಟುಗಳ ವಿರುದ್ಧ ಹೋರಾಡಲು ಭಾರತದ ಶ್ರೀಸಾಮಾನ್ಯರ ಕೈಗಳನ್ನು ಬಲಪಡಿಸುತ್ತವೆ ಎಂದು ಪ್ರಧಾನಿಯವರು ಹೇಳಿದರು. ಈ ನಿರ್ಧಾರದಿಂದ ಸಾಮಾನ್ಯ ಪ್ರಜೆಗಳಿಗೆ ಅಲ್ಪಸ್ವಲ್ಪ ಸಮಸ್ಯೆಗಳಾದರೂ ಅವುಗಳನ್ನು ಪರಿಹರಿಸಲು ಪ್ರಧಾನಿಯವರು ಹಲವಾರು ಕ್ರಮಗಳನ್ನು ಘೋಷಿಸಿದರು.

ಈ ಸಮಯದಲ್ಲಿ ಸಾರ್ವಜನಿಕರ ಅನುಕೂಲತೆಗೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯಿತು. ಬ್ಯಾಂಕು ಮತ್ತು ಎಟಿಎಂ ಕಡೆಗಳಲ್ಲಿನ ಉದ್ದ ಸರದಿ ಸಾಲುಗಳನ್ನು ತಪ್ಪಿಸಲು ಸರ್ಕಾರವು ಹಲವಾರು ಕ್ರಮಗಳನ್ನು

* ಹೆಚ್ಚುವರಿ ಮಹಾನಿರ್ದೇಶಕರು, ಪಿಐಬಿ, ನವದೆಹಲಿ. E-mail : dprfinance@gmail.com



ಕೈಗೊಂಡಿತು. ಹಿರಿಯ ನಾಗರಿಕರಿಗೆ ಹಾಗೂ ಅಂಗವಿಕಲರಿಗೆ ಪ್ರತ್ಯೇಕ ಸರದಿ ಸಾಲುಗಳ ವ್ಯವಸ್ಥೆಯನ್ನು ಈ ಮೊದಲೇ ಮಾಡಲಾಗಿತ್ತು. ಬಡ ಹಾಗೂ ಮುಗ್ಧ ಜನರ ಮೂಲಕ ತಮ್ಮ ಕಪ್ಪು ಹಣವನ್ನು ಬಿಳಿಹಣವನ್ನಾಗಿ ಪರಿವರ್ತಿಸಿಕೊಳ್ಳುತ್ತಿದ್ದ ದುರ್ಮಾರ್ಗಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಯಿತು. ಉತ್ತಮ ಗುಣಮಟ್ಟದ ಬೀಜಗಳು ಗೊಬ್ಬರ ಮತ್ತು ಪೀಡೆನಾಶಕ ಮುಂತಾದವುಗಳನ್ನುಉಪಯೋಗಿಸಿಕೊಂಡು ಬೆಳೆ ಬೆಳೆಯಲು ರೈತರಿಗೆ ಸಾಕಷ್ಟು ಹಣ ದೊರಕಿಸಿಕೊಡಲಾಯಿತು. ಇದೇ ರೀತಿ ವ್ಯಾಪಾರ ವ್ಯವಹಾರಸ್ಥರಿಗೆ ವಾರಕ್ಕೆ 50,000 ರೂ ಹಣವನ್ನು ಬ್ಯಾಂಕುಗಳ ಮೂಲಕ ಪಡೆದು ಕಾರ್ಮಿಕರಿಗೆ ದಿನಗೂಲಿ ನೀಡಲು, ಆ ಮೂಲಕ ಕಾರ್ಮಿಕರು ತಮ್ಮ ನಿತ್ಯದ ಖರ್ಚುವೆಚ್ಚಗಳನ್ನು ಪೂರೈಸಿಕೊಳ್ಳಲು ಅವಕಾಶ ಮಾಡಿಕೊಡಲಾಯಿತು.

ಪ್ರಧಾನ ಮಂತ್ರಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ತಮ್ಮ ಭಾಷಣದಲ್ಲಿ ಅಧಿಕ ಪ್ರಮಾಣದ ಹಣ ಚಲಾವಣೆಯು ಹೇಗೆ ಹಣದುಬ್ಬರಕ್ಕೆ ಕಾರಣವಾಗುತ್ತದೆ. ಭ್ರಷ್ಟಾಚಾರದ ಮೂಲಕ ಪಡೆದ ಹಣವು ಹೇಗೆ ಹಣದುಬ್ಬರದ ಪರಿಸ್ಥಿತಿಯನ್ನು ಇನ್ನೂ ಹದಗೆಡಿಸುತ್ತದೆ ಎಂದು ಹೇಳಿದರು. ಅಲ್ಲದೆ ಈ ಪರಿಸ್ಥಿತಿಯು ಬಡಜನರು ಮತ್ತು ನವ ಮಧ್ಯಮ ವರ್ಗದ ಜನರ ಮೇಲೂ ದುಷ್ಪರಿಣಾಮ ಬೀರುತ್ತದೆ ಎಂದು ಹೇಳಿ, ಇದಕ್ಕೆ ಪೂರಕವಾಗಿ ಪ್ರಾಮಾಣಿಕ ಬಡಜನರು ಮನೆಕೊಳ್ಳುವಾಗ ಎದುರಿಸುವ ಸಮಸ್ಯೆಗಳನ್ನು ಉದಾಹರಣೆಯಾಗಿ ನೀಡಿದರು.

ಕಪ್ಪು ಹಣದ ವಿರುದ್ಧ ಸರ್ಕಾರವು ತೆಗೆದುಕೊಂಡ ಮೊದಲ ಹೆಜ್ಜೆ ಇದಾಗಿರಲಿಲ್ಲ. ವಾಸ್ತವವಾಗಿ ಎನ್‌ಡಿಎ ಸರ್ಕಾರವು ಅಧಿಕಾರಕ್ಕೆ ಬಂದ ನಂತರ 2014ರ ಮೇ ತಿಂಗಳಿನಲ್ಲಿ ರಚಿಸಿದ ಎಸ್‌ಐಟಿ ಕಪ್ಪು ಹಣದ ವಿರುದ್ಧ ಕೈಗೊಂಡ ಮೊದಲ ನಿರ್ಧಾರವಾಗಿತ್ತು.

ಕಳೆದ ಎರಡೂವರೆ ವರ್ಷಗಳಲ್ಲಿ ಪ್ರಧಾನ ಮಂತ್ರಿಯವರ ನಡೆ ನುಡಿಗಳೇ ಕಪ್ಪು ಹಣದ ಹಾಗೂ ಭ್ರಷ್ಟಾಚಾರದ ವಿರುದ್ಧ ಅವರ ಹೋರಾಟಕ್ಕೆ ನಿದರ್ಶನವಾಗಿದೆ.

2015ರಲ್ಲಿ ವಿದೇಶಿ ಬ್ಯಾಂಕುಗಳ ಖಾತೆಗಳನ್ನು ಬಹಿರಂಗಪಡಿಸುವ ಬಗ್ಗೆ ಒಂದು ಕಾಯಿದೆಯನ್ನು ಜಾರಿಗೆ ತರಲಾಯಿತು. 2016ರ ಆಗಸ್ಟ್ ತಿಂಗಳಿನಲ್ಲಿ ಬೇನಾಮಿ ವ್ಯವಹಾರಗಳನ್ನು ತಡೆಯುವ ಬಗ್ಗೆ ಕಠಿಣ ನಿಯಮಗಳನ್ನು ಜಾರಿಗೆ ತರಲಾಯಿತು.

ಇದೇ ಅವಧಿಯಲ್ಲಿ ಆದಾಯ ಬಹಿರಂಗಪಡಿಸುವ ಯೋಜನೆ (ಐಡಿಎಸ್–2016) 2016 ಅನ್ನು ಜಾರಿಗೆ ತರಲಾಯಿತು. ಇದರ ಪ್ರಕಾರ ಜನರು ತಮ್ಮ ಕಪ್ಪು ಹಣವನ್ನು ಘೋಷಿಸಿಕೊಳ್ಳಲು ಅವಕಾಶ ನೀಡಲಾಯಿತು. ಈ ಯೋಜನೆಯು 2016ರ ಜೂನ್‌ನಿಂದ 2016ರ ಸೆಪ್ಟೆಂಬರ್ 30ರ ಜಾರಿಯಲ್ಲಿತ್ತು. ಈ ಅವಧಿಯಲ್ಲಿ ಜನರು ಘೋಷಿಸಿಕೊಂಡ ಹಣ 67 ಸಾವಿರ ಕೋಟಿ ರೂ. ಗಳಿಗೂ ಅಧಿಕವಾಗಿತ್ತು. ಈ ಎಲ್ಲಾ ಪ್ರಯತ್ನಗಳೂ ಫಲ ನೀಡಿವೆ. ಕಳೆದ ಎರಡೂವರೆ ವರ್ಷಗಳಲ್ಲಿ 1.25 ಲಕ್ಷ ಕೋಟಿ ಕಪ್ಪುಹಣದ ಹೊರತರಲ್ಪಟ್ಟಿದೆ.

ಪ್ರಧಾನ ಮಂತ್ರಿಯವರು ಕಪ್ಪು ಹಣದ ಪ್ರಸ್ತಾಪವನ್ನು ಜಾಗತಿಕ ವೇದಿಕೆಗಳ ಬಹುರಾಷ್ಟ್ರೀಯ ಶೃಂಗಸಭೆಗಳಲ್ಲಿ ಮತ್ತು ದ್ವಿಪಕ್ಷೀಯ ಸಭೆಗಳಲ್ಲಿ, ನಾಯಕರುಗಳೊಂದಿಗೆ ಪದೇ ಪದೇ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದ ಈ ಪ್ರಯತ್ನಗಳು ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಭಾರತವು ಒಂದು ಬೆಳ್ಳಿ ಚುಕ್ಕಿಯಾಗಿ ಹೊರಹೊಮ್ಮಲು ಅವಕಾಶ ನೀಡಿವೆ ಎಂದು ಹೇಳಿದರು. ಭಾರತವು ಬಂಡವಾಳ ಹೂಡಲು ಒಂದು ಉತ್ತಮ ಆಯ್ಕೆ ಆಗಿದೆ ಹಾಗೂ ವ್ಯವಹಾರ ಮಾಡಲು ಸುಲಭವಾದ ಸ್ಥಳವಾಗಿದೆ. ಮುಂಚೂಣಿಯಲ್ಲಿರುವ ಆರ್ಥಿಕ ನಿಯೋಗಗಳು ಭಾರತದ ಆರ್ಥಿಕ ಅಭಿವೃದ್ಧಿಯ ಬಗ್ಗೆ ಆಶಾವಾದವನ್ನು ವ್ಯಕ್ತಪಡಿಸಿವೆ. ಇದರೊಂದಿಗೆ ಭಾರತೀಯ ಉದ್ಯಮ ಕ್ಷೇತ್ರವು ಮೇಕ್ ಇನ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ ಸ್ಟ್ಯಾಂಡ್ ಅಪ್ ಇಂಡಿಯಾ ಗಳಂತಹ ನವೀನ ಯೋಜನೆಗಳಿಂದ ಉತ್ತೇಜನ ಪಡೆದಿದೆ.




ಒಂದು ದಿಕ್ಕಿನಲ್ಲಿ ಸರ್ಕಾರವು ಕಪ್ಪುಹಣದ ವಿರುದ್ಧ ಯುದ್ಧ ಸಾರಿದ್ದರೆ ಮತ್ತೊಂದು ದಿಕ್ಕಿನಲ್ಲಿ ಅದು ಡಿಜಿಟಲ್ ಬ್ಯಾಂಕಿಂಗ್ ಮತ್ತು ವಿದ್ಯುನ್ಮಾನ ಪಾವತಿಗಳನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ.

ಡಿಜಿಟಲ್ ಪಾವತಿ ಪ್ರಕ್ರಿಯೆಯನ್ನು ಮನೆಯಿಂದಲೇ ಪ್ರಾರಂಭಿಸಲು ಸರ್ಕಾರವು ಚಾಲನೆ ನೀಡಿದೆ. ಸರ್ಕಾರಿ ಪಾವತಿಯನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವ ಗುರಿಯನ್ನು ಮುಟ್ಟಲು, ಹಣಕಾಸು ಇಲಾಖೆಯು ಪೂರೈಕೆದಾರರಿಗೆ ವಿದ್ಯುನ್ಮಾನ ಪಾವತಿ ಮಾಡಲು ನಿಗದಿಯಾಗಿರುವ ಪ್ರಸ್ತುತ 10,000 ರೂಗಳ ಮಿತಿಯನ್ನು ಪರಿಶೀಲಿಸಿತು. 2016ರ ಆಗಸ್ಟ್‌ನಲ್ಲಿ ನಡೆಸಿದ ಪರಿಶೀಲನೆಯು ಈ ದಿಕ್ಕಿನಲ್ಲಿ ಅಂತಿಮ ಪರಿಶೀಲನೆಯಾಗಿದೆ. ಅದರ ಪ್ರಕಾರ ಗುತ್ತಿಗೆದಾರರು, ಪೂರೈಕೆದಾರರು ಮತ್ತು ಸಾಲ ನೀಡುವ ಸಂಸ್ಥೆಗಳಿಗೆ 5000 ರೂ (ಐದು ಸಾವಿರ)ಗಳಿಗಿಂತ ಹೆಚ್ಚಿನ ಹಣವನ್ನು ಪಾವತಿ ಆದೇಶವಿದ್ದಲ್ಲಿ ಮಾತ್ರ ನೀಡಬೇಕೆಂದು ಸರ್ಕಾರದ ಎಲ್ಲಾ ಇಲಾಖೆಗಳಿಗೂ ಹಣಕಾಸು ಇಲಾಖೆಯು ನಿರ್ದೇಶಿಸಿದೆ.

ವಿದ್ಯುನ್ಮಾನ ಪಾವತಿಯ ಕಡೆಗಿನ ತನ್ನ ಪ್ರಯತ್ನದಲ್ಲಿ ಕೇಂದ್ರ ಸರ್ಕಾರದ ಇಲಾಖೆಗಳು ತಮ್ಮ ನೌಕರರಿಗೆ ವಿದ್ಯುನ್ಮಾನ ವ್ಯವಸ್ಥೆಯಲ್ಲಿ ಮೂಲಕ ಸಂಬಳವನ್ನು ಪಾವತಿಸುತ್ತಿವೆ. ಬ್ಯಾಂಕುಗಳ ಮುಂದುವರೆದ ತಂತ್ರಜ್ಞಾನದಿಂದಾಗಿ ಪ್ರತಿಯೊಬ್ಬ ನೌಕರನೂ ತನ್ನ ಖಾತೆಯಲ್ಲಿ ಡೆಬಿಟ್ ಮತ್ತು ಎ.ಟಿ.ಎಂ. ಕಾರ್ಡುಗಳನ್ನು ಹೊಂದಿದ್ದಾನೆ. ಸರ್ಕಾರಿ ನೌಕರರು ನಗದಿಗೆ ಬದಲಾಗಿ ಡೆಬಿಟ್ ಕಾರ್ಡುಗಳನ್ನು ತಮ್ಮ ವೈಯುಕ್ತಿಕ ವ್ಯವಹಾರಗಳಿಗೆ ಬಳಸಲು ಹೆಚ್ಚಿನ ಉತ್ತೇಜನ ನೀಡಲಾಗುತ್ತಿದೆ. ತಮ್ಮ ನೌಕರರನ್ನು, ತಮ್ಮ ಎಲ್ಲಾ ವೈಯಕ್ತಿಕ ವ್ಯವಹಾರಗಳಿಗೂ ನಗದಿಗೆ ಬದಲಾಗಿ



ಡಿಜಿಟಲ್ ಕಾರ್ಡ್‌ಗಳನ್ನು ಬಳಸಿಕೊಳ್ಳಲು ಪ್ರೋತ್ಸಾಹಿಸುವಂತೆ ಸರ್ಕಾರದ ಎಲ್ಲಾ ಇಲಾಖೆಗಳಿಗೂ ಮತ್ತು ವಿಭಾಗಗಳಿಗೂ ಮನವಿ ಮಾಡಿಕೊಳ್ಳಲಾಗುತ್ತಿದೆ. ಅಲ್ಲದೆ ತಮ್ಮ ಎಲ್ಲಾ ನೌಕರರು ಡೆಬಿಟ್ ಕಾರ್ಡ್‌ಗಳನ್ನು ಪಡೆದಿದ್ದಾರೆ ಎಂಬುದನ್ನು ಖಾತರಿ ಪಡಿಸಿಕೊಳ್ಳಲು ಎಲ್ಲಾ ಇಲಾಖೆಗಳಿಗೂ ತಿಳಿಸಲಾಗಿದೆ.

ನೋಟುಗಳ ಸಂಖ್ಯೆಯ ಪ್ರಮಾಣ ಕಡಿಮೆಯಾಗಬೇಕು, ಆದರೆ ಆರ್ಥಿಕ ವ್ಯವಸ್ಥೆ ವಿಸ್ತಾರವಾಗಬೇಕು, ಡಿಜಿಟಲ್ ವ್ಯವಹಾರದ ಕಡೆ ಗಮನ ಕೇಂದ್ರೀಕರಿಸಬೇಕು ಎಂಬುದನ್ನು ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿ ಒತ್ತಿ ಹೇಳಿದ್ದಾರೆ.

ಭಾರತದ ಆರ್ಥಿಕ ವ್ಯವಸ್ಥೆಯನ್ನು ಡಿಜಿಟಲ್ ವ್ಯವಹಾರದ ಕಡೆ ಕೊಂಡೊಯ್ಯುವುದು 500 ಮತ್ತು 1000 ರೂ. ಗಳ ನೋಟುಗಳ ಅಮಾನ್ಯದ ಮುಖ್ಯ ಉದ್ದೇಶಗಳಲ್ಲಿ ಒಂದಾಗಿತ್ತು ಎಂದು ಅವರು ಹೇಳಿದ್ದಾರೆ. ಈ ದಿಕ್ಕಿನಲ್ಲಿ ಹೆಚ್ಚಿನ ಬ್ಯಾಂಕುಗಳು 2016ರ ಡಿಸೆಂಬರ್ ತಿಂಗಳ ತನಕ ಡೆಬಿಟ್ ಕಾರ್ಡ್‌ಗಳ ಮೂಲಕ ನಡೆಸಿದ ವ್ಯವಹಾರಗಳಿಗೆ ಸೇವಾ ಶುಲ್ಕವನ್ನು ಮನ್ನಾ ಮಾಡಿದರು.

ಬ್ಯಾಂಕುಗಳು ಈಗ ಪರ್ಯಾಯ ಬ್ಯಾಂಕ್ ವ್ಯವಸ್ಥೆಗಳಾದ ನೆಫ್ಟ್, ಮೊಬೈಲ್ ಬ್ಯಾಂಕಿಂಗ್, ಪ್ರಿಪೇಡ್ ಕಾರ್ಡ್ ಮತ್ತು ಪೇಮೆಂಟ್ಸ್ ಇಂಟರ್‌ಫೇಸ್ (ಯುಪಿಐ) ಇವುಗಳ ಮೂಲಕ ನಡೆಯುವ ವ್ಯವಹಾರಗಳ ಕಡೆ ಹೆಚ್ಚಿನ ಗಮನಹರಿಸಬೇಕಾಗಿದೆ. ನಗರ ಪ್ರದೇಶಗಳಲ್ಲದೆ ಅರೆನಗರ ಹಾಗೂ ಗ್ರಾಮೀಣ ಪ್ರದೇಶಗಳ ಕಡೆಗೂ ಈ ದಿಕ್ಕಿನಲ್ಲಿ ಹೆಚ್ಚಿನ ಗಮನಹರಿಸಬೇಕಾಗಿದೆ. ಭಾರತೀಯ ಬ್ಯಾಂಕರ್‌ಗಳ ಸಂಘದ (ಐಬಿಎ) ಬೆಂಬಲದೊಂದಿಗೆ ವೀಡಿಯೊಗಳ ಪ್ರದರ್ಶನದ ಮೂಲಕ ಅಭಿಯಾನ ನಡೆಸುವುದರಿಂದ ಈ ವಿಷಯವು ಗ್ರಾಮೀಣ ಜನರನ್ನು ತಲುಪಬೇಕಾಗಿದೆ.

ಪ್ರದರ್ಶನದ ಮೂಲಕ ಈ ಜನರಿಗೆ ನಗದು ರಹಿತ ವ್ಯವಹಾರಕ್ಕಾಗಿ ಕಾರ್ಡ್‌ಗಳು ಮತ್ತು ಇತರ ವಿಧಾನಗಳನ್ನು ಬಳಕೆ ಮಾಡಿಕೊಳ್ಳುವ ವಿಧಾನವನ್ನು ತಿಳಿಸಿಕೊಡಬೇಕು.

ವಿಧಾನಗಳ ಜೊತೆ ಈಗಾಗಲೇ ಅಸ್ತಿತ್ವದಲ್ಲಿರುವ ವಿಧಾನಗಳನ್ನು ಬಳಸಲು ಭಾರತೀಯ ಪ್ರಜೆಗಳಿಗೆ ಸ್ಪಷ್ಟ ಮಾರ್ಗಗಳನ್ನು ಕಲ್ಪಿಸಲಾಗಿದೆ. ಇವುಗಳಿಂದ ಬ್ಯಾಂಕುಗಳ ಚಟುವಟಿಕೆಗಳನ್ನು ಸುಲಭಗೊಳಿಸಲಾಗುತ್ತದೆ ಮತ್ತು ಸರ್ಕಾರದ ಗುರಿಯಾದ ಶ್ರೀಸಾಮಾನ್ಯರ ಆರ್ಥಿಕ ಸೇರ್ಪಡೆಯನ್ನು ಸಾಧಿಸಿದಂತಾಗುತ್ತದೆ.

ಪಾಯಿಂಟ್ ಆಫ್ ಸೇಲ್ (ಪಿಓಎಸ್) ಸಾಧನೆಗಳ ನಗದುರಹಿತ ವ್ಯವಹಾರಗಳಿಗೆ ಬಳಕೆಯಾಗುತ್ತವೆ. ಅವುಗಳು ಹಣ ಪಾವತಿ ಮಾಡುವುದಕ್ಕೂ ಮತ್ತು ವಿತರಣೆಗೂ ಬಳಕೆಯಾಗುತ್ತವೆ. ಪಿಓಎಸ್‌ಗೆ ಮೂಲ ಸುಂಕಗಳಿರುವುದಿಲ್ಲ. ಇಂತಹ ನಗದುರಹಿತ ವ್ಯವಹಾರಗಳನ್ನು ಉತ್ತೇಜಿಸಲು ಸರ್ಕಾರವು ಇವುಗಳಿಗೆ ಕೇಂದ್ರ ಅಬ್ಕಾರಿ ಸುಂಕದಿಂದ ವಿನಾಯಿತಿ ನೀಡಿದೆ. ಇದರ ಪರಿಣಾಮವಾಗಿ ಈ ಸಾಧನಗಳಿಗೆ ಸಾಮಾನ್ಯವಾಗಿ ಸಿವಿಡಿ ಎಂದು ಕರೆಯುವ ಹೆಚ್ಚುವರಿ ಅಬ್ಕಾರಿ ಸುಂಕ ಮತ್ತು ಎಸ್‌ಎಡಿ ಎಂದು ಕರೆಯುವ ಮತ್ತೊಂದು ಹೆಚ್ಚುವರಿ ಸುಂಕದಿಂದಲೂ ವಿನಾಯಿತಿ ನೀಡಲಾಗಿದೆ.

ಪಿಓಎಸ್ ಸಾಧನಗಳ್ನು ತಯಾರಿಸುವ ದೇಶೀಯ ತಯಾರಕರನ್ನು ಉತ್ತೇಜಿಸಲು ಈ ಸಾಧನಗಳನ್ನು ತಯಾರಿಸಲು ಬೇಕಾದ ಎಲ್ಲಾ ರೀತಿಯ ಸಾಮಗ್ರಿಗಳ ಮೇಲಿನ ಅಬ್ಕಾರಿ ಸುಂಕವನ್ನು ಮನ್ನಾ ಮಾಡಲಾಗಿದೆ. ಅಲ್ಲದೆ ಸಿವಿಡಿ ಮತ್ತು ಎಸ್‌ಎಡಿ ಗಳನ್ನೂ ಮನ್ನಾ ಮಾಡಲಾಗಿದೆ. ಇದು 31.3.2017ರ ತನಕ ಜಾರಿಯಲ್ಲಿರುತ್ತದೆ.

ಡಿಜಿಟಲ್ ಆರ್ಥಿಕ ವ್ಯವಸ್ಥೆಯನ್ನು ವಿಸ್ತರಿಸುವ ಹಾಗೂ ನಗದು ರಹಿತ






ವ್ಯವಹಾರದ ಕಡೆಗೆ ಮುನ್ನಡೆಯುವ ಯೋಜನೆಯ ಒಂದು ಅಂಗವಾಗಿ ಸರ್ಕಾರವು ಒಂದು ಲಕ್ಷ ಹೊಸ ಹೆಚ್ಚುವರಿ ಪಿಓಎಸ್ ಕೇಂದ್ರಗಳನ್ನು 31.3.2017ರೊಳಗೆ ಸ್ಥಾಪಿಸುವ ಗುರಿ ಹೊಂದಿದೆ. ಈ ಗುರಿಯನ್ನು ಸಾಧಿಸಲು ಬ್ಯಾಂಕುಗಳು ಈಗಾಗಲೇ 6 ಲಕ್ಷ ಪಿಓಎಸ್ ಯಂತ್ರಗಳ ಪೂರೈಕೆಗೆ ಆದೇಶ ನೀಡಿದೆ. ಅಲ್ಲದೆ ಇನ್ನೂ 4 ಲಕ್ಷ ಪಿಓಎಸ್ ಯಂತ್ರಗಳ ಪೂರೈಕೆಗೆ ಮುಂದಿನ ಕೆಲವೇ ದಿನಗಳಲ್ಲಿ ಆದೇಶ ನೀಡಲಿವೆ. ಕಾರ್ಡ್ ಆಧಾರದ ಮೇಲೆ ಪಾವತಿ ಮಾಡುವ ಮೂಲಕ ವರ್ತಕರಿಗೆ ಅನುಕೂಲವಾಗುವಂತೆ ಮಾಡಲು ದೇಶಾದ್ಯಂತೆ 15 ಲಕ್ಷ ಪಿಓಎಸ್ ಯಂತ್ರಗಳು ಅಸ್ತಿತ್ವದಲ್ಲಿವೆ.

ಕೇಂದ್ರ ಉದ್ಯೋಗ, ಕಾರ್ಮಿಕ ಇಲಾಖೆ ಮತ್ತು ರಾಜ್ಯಾಡಳಿತ ಇಲಾಖೆಗಳು ಜಂಟಿಯಾಗಿ, ಅಸಂಘಟಿತ ಕಾರ್ಮಿಕ ವಲಯಗಳು, ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಸುವ ಅಭಿಯಾನಕ್ಕಾಗಿ ಹಲವಾರು ಶಿಬಿರಗಳನ್ನು ವಿವಿಧ ಸ್ಥಳಗಳಲ್ಲಿ ಏರ್ಪಡಿಸಿವೆ. ಒಟ್ಟು 2,73,919 ಇಂತಹ ಶಿಬಿರಗಳನ್ನು ಈವರೆಗೆ ಸಂಘಟಿಸಿ 24.54 ಲಕ್ಷ ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ.

ಜನಧನ ಖಾತೆದಾರರನ್ನು ಒಳಗೊಂಡಂತೆ 30 ಕೋಟಿ ರೂಪೇ ಡೆಬಿಟ್ ಕಾರ್ಡ್‌ಗಳನ್ನು ಇದುವರೆಗೂ ಜನರಿಗೆ ನೀಡಲಾಗಿದೆ. ಕೇವಲ 12 ದಿನಗಳಲ್ಲಿ ಶೇ 300 ರಷ್ಟು ರೂಪೇ ಕಾರ್ಡ್‌ಗಳ ಹೆಚ್ಚಳ ಕಂಡುಬಂದಿತು. ಡೆಬಿಟ್ ಕಾರ್ಡ್‌ಗಳ ಬಳಕೆಗೆ ನೆರವಾಗಲು ಬ್ಯಾಂಕುಗಳು 31.12.2016ರ ತನಕ ವ್ಯವಹಾರ ಶುಲ್ಕವನ್ನು ಮನ್ನಾ ಮಾಡಲು ನಿರ್ಧರಿಸಿವೆ.

ಭಾರತದ ರಾಷ್ಟ್ರೀಯ ಪಾವತಿ ಮಂಡಳಿ (ಎನ್‌ಪಿಸಿಐ) ರೂಪೇ ಕಾರ್ಡ್‌ಗಳಿಗೆ ಬದಲಾವಣೆ ಶುಲ್ಕ ಅನ್ನು ಮನ್ನಾ ಮಾಡಿದೆ. ಒಗ್ಗೂಡಿದ ಈ ಕ್ರಮಗಳು ಮುಂದಿನ ದಿನಗಳಲ್ಲಿ ಡೆಬಿಟ್ ಕಾರ್ಡ್‌ಗಳ ಬಳಕೆಯನ್ನು ವಿವಿಧ ವ್ಯವಹಾರಗಳಲ್ಲಿ



ಒಪ್ಪುವಂತೆ ಮಾಡುತ್ತದೆ. ಡೆಬಿಟ್ ಕಾರ್ಡ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಳಸುವಂತೆ ಮಾಡಲು ಸರ್ಕಾರಿ ವಲಯದ ಬ್ಯಾಂಕುಗಳು ಮತ್ತು ಕೆಲವು ಖಾಸಗಿ ವಲಯದ ಬ್ಯಾಂಕುಗಳು 31.12.2016ರವರೆಗೆ ಎಂಡಿಆರ್ ಶುಲ್ಕಗಳನ್ನು ಮನ್ನಾ ಮಾಡಿವೆ. ಇತರ ಖಾಸಗಿ ವಲಯದ ಬ್ಯಾಂಕುಗಳು ಇದೇ ಕ್ರಮ ಕೈಗೊಳ್ಳಲು ನಿರೀಕ್ಷೆಯಲ್ಲಿವೆ.

ಇ–ವಾಲೆಟ್ ಮೂಲಕ ಹಣ ಪಾವತಿ ಮಾಡುವುದನ್ನು ಉತ್ತೇಜಿಸಲು, ಆರ್‌ಬಿಐ ತಿಂಗಳ ವಹಿವಾಟಿನ ಮಿತಿಯನ್ನು 10,000 ರೂಗಳಿಂದ 20,000 ರೂಗಳಿಗೆ ಏರಿಸಲು ನಿರ್ಧರಿಸಿದೆ. ವರ್ತಕರಿಗೂ ಸಹ ಇದೇ ರೀತಿಯ ಹೆಚ್ಚಳದ ಅನುಕೂಲವನ್ನು ಆರ್‌ಬಿಐ ಘೋಷಿಸಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಭಾರತೀಯ ರೈಲ್ವೆ ಇಲಾಖೆಯು ಕಾದಿರಿಸಿದ ಟಿಕೆಟ್‌ಗಳನ್ನು ಖರೀದಿಸಲು 2ನೇ ದರ್ಜೆಯ ಪ್ರಯಾಣಕ್ಕೆ 20 ರೂಗಳ ಮತ್ತು ಪ್ರಥಮ ದರ್ಜೆಯ ಪ್ರಯಾಣಕ್ಕೆ 40 ರೂಗಳ ಸೇವಾಶುಲ್ಕವನ್ನು 31.12.2016ರ ವರೆಗೆ ಮನ್ನಾ ಮಾಡಿತು. ಈ ಕ್ರಮವು ಕೌಂಟರ್‌ಗಳಲ್ಲಿ ನಿಂತು ನಗದು ನೀಡಿ ಟಿಕೆಟ್‌ಗಳನ್ನು ಕೊಳ್ಳುವುದಕ್ಕೆ ಬದಲಾಗಿ ಇ–ಟಿಕೆಟ್‌ಗಳನ್ನು ಕೊಳ್ಳಲು ಪ್ರಯಾಣಿಕರನ್ನು ಪ್ರೋತ್ಸಾಹಿಸಿತು.

ಪ್ರತಿನಿತ್ಯ ಸರಾಸರಿ 58% ಪ್ರಯಾಣಿಕರು ಆನ್‌ಲೈನ್‌ನಲ್ಲೂ ಮತ್ತು 42% ಜನರು ಕ್ಯಾಷ್ ಕೌಂಟರ್‌ಗಳಲ್ಲೂ ಟಿಕೆಟ್‌ಗಳನ್ನು ಖರೀದಿಸುತ್ತಾರೆ. ಈಗ ಈ–ಟಿಕೆಟ್‌ಗಳ ಖರೀದಿಯನ್ನು ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ. ಈ ಮೇಲಿನ ಕ್ರಮದಿಂದ ಹೆಚ್ಚಿನ ಸಂಖ್ಯೆಯ ಜನರು ನಗದುರಹಿತ ವ್ಯವಹಾರದ ಕಡೆ ವಾಲುತ್ತಾರೆ ಎಂದು ನಿರೀಕ್ಷಿಸಲಾಗಿದೆ.

ಟಿಆರ್‌ಎಐ, ಯುಎಸ್‌ಎಸ್‌ಡಿ ಶುಲ್ಕವನ್ನು ಬ್ಯಾಂಕಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಈಗಿನ ಒಂದು ಅವಧಿಗೆ 1.50 ರೂಗಳಿಂದ 0.50ರೂಗೆ ಇಳಿಸಲು ನಿರ್ಧರಿಸಲಾಗಿದೆ. ಅಲ್ಲದೆ ಅದು ಹಂತಗಳನ್ನು ಈಗಿನ 5 ರಿಂದ 8ಕ್ಕೆ ಏರಿಸಿದೆ.

ಟೆಲಿಕಾಂ ಕಂಪೆನಿಗಳು ಸಹ ಒಂದು ಅವಧಿಯ 50 ಪೈಸೆಯ ಯುಎಸ್‌ಎಸ್‌ಡಿ ಶುಲ್ಕವನ್ನು 31.12.2016ರ ವರೆಗೆ ಮನ್ನಾ ಮಾಡಲು ಸಮ್ಮತಿಸಿದವು. ಅದರ ಪರಿಣಾಮವಾಗಿ 31.12.2016ರವರೆಗೆ ಯುಎಸ್‌ಎಸ್‌ಡಿ ಶುಲ್ಕವು ಇಲ್ಲವಾಯಿತು. ಇಂದು ಮುಂಬರುವ ಫೋನ್‌ಗಳಿಗೆ ಸಂಬಂಧಿಸಿದಂತೆ ಮಿತವ್ಯಯ ಸಾಧಿಸಿದಂತಾಗುತ್ತದೆ. ಮಿತವ್ಯಯದ ಡಿಜಿಟಲ್ ವ್ಯವಹಾರಗಳಲ್ಲಿ ದೂರವಾಣಿಗೆ ಸಂಬಂಧಿಸಿದಂತೆ ಬಡವರಿಗೆ ಅನುಕೂಲವಾಗುತ್ತದೆ. (ಈಗ ದೇಶದ ಒಟ್ಟು ಫೋನ್‌ಗಳಲ್ಲಿ 65% ಇಂತಹ ಫೋನ್‌ಗಳಿವೆ). ಚೆಕ್‌ಪೋಸ್ಟ್‌ಗಳಲ್ಲಿ ಮತ್ತು ಸುಂಕದ ಕಟ್ಟೆಗಳಲ್ಲಿ ಹಣ ಪಾವತಿಸಲು ವಾಹನಗಳಿಗೆ ಅತಿ ಹೆಚ್ಚಿನ ಸಮಯ ವ್ಯಯವಾಗುತ್ತಿದೆ. ಜಿಎಸ್‌ಟಿಯು ಚೆಕ್‌ಪೋಸ್ಟ್‌ನ ಸಮಸ್ಯೆಯನ್ನು ನಿವಾರಿಸುತ್ತದೆ. ಆದರೆ ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಸುಂಕದಕಟ್ಟೆಗಳಲ್ಲಿ ಸುಂಕ ಪಾವತಿಸಲು ಇರುವ ಸಮಸ್ಯೆಯನ್ನು ನಿವಾರಿಸಲು ಅವಶ್ಯಕತೆ ಇದೆ. ರಾಷ್ಟ್ರೀಯ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಇಲಾಖೆಯು, ವಾಹನಗಳ ತಯಾರಕರಿಗೆ ಎಲ್ಲಾ ಹೊಸ ವಾಹನಗಳಲ್ಲಿ ಇಟಿಸಿ ಕಂಪ್ಲೆಂಟ್ ಆರ್‌ಎಫ್‌ಐಡಿಯನ್ನು ದೊರಕಿಸಿ ಕೊಡಲು ಸಲಹೆ ನೀಡುತ್ತಿದೆ.






ಎಲ್ಲಾ ಸರ್ಕಾರಿ ಸಂಘಟನೆಗಳು, ಸಾರ್ವಜನಿಕ ಉದ್ಯಮಗಳು (ಪಿಎಸ್‌ಯುಎಸ್) ಮತ್ತು ಇತರ ಸರ್ಕಾರಿ ಪ್ರಾಧಿಕಾರಿಗಳು, ಎಲ್ಲವೂ ತಮ್ಮ ನೌಕರರಿಗೆ ಮತ್ತು ಇತರ ಫಲಾನುಭವಿಗಳಿಗೆ ವೇತನ ಪಾವತಿ ಮಾಡಲು ಇಂಟರ್‌ನೆಟ್ ಬ್ಯಾಂಕಿಂಗ್, ಯುನಿಫೈಡ್ ಪೇಮೆಂಟ್, ಇಂಟರ್‌ಫೇಸ್, ಕಾರ್ಡ್ಸ್, ಆಧಾರ್‌ಕಾರ್ಡ್ ಆಧರಿತ ಪಾವತಿ ವ್ಯವಸ್ಥೆ ಮುಂತಾದ ಡಿಜಿಟಲ್ ಪಾವತಿ ವಿಧಾನಗಳನ್ನೇ ಬಳಸುವಂತೆ ಸಲಹೆ ನೀಡಲಾಗಿದೆ. ವೇತನ ಬಟವಾಡೆ ಮಾಡುವ ವಿಚಾರದಲ್ಲಿ ಸಂಬಂಧಪಟ್ಟು ಸರ್ಕಾರಿ ಪ್ರಾಧಿಕಾರಿಗಳು (ಅಧಿಕಾರ) ತಮ್ಮ ನೌಕರರಿಗೆ ಕಾರ್ಡ್ಸ್, ಇಂಟರ್‌ನೆಟ್ ಬ್ಯಾಂಕಿಂಗ್, ಯುನಿಫೈಡ್ ಪೇಮೆಂಟ್, ಇಂಟರ್‌ಫೇಸ್, ಕಾರ್ಡ್ಸ್, ಆಧಾರ್‌ಕಾರ್ಡ್ ಆಧರಿತ ಪಾವತಿ ವ್ಯವಸ್ಥೆ ಇತ್ಯಾದಿಗಳಲ್ಲಿ ಆಯ್ಕೆಯ ಅವಕಾಶ ಮಾಡಿಕೊಡಬೇಕಾದ ಅವಶ್ಯಕತೆ ಇದೆ. ಈ ಮೇಲೆ ಹೇಳಿದ ಎಲ್ಲಾ ಕ್ರಮಗಳ ಜೊತೆ ಪ್ರಸ್ತುತ ಸರ್ಕಾರದ 500 ಮತ್ತು 1000 ರೂಗಳ ನೋಟುಗಳನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳುವ ನಿರ್ಧಾರವು ನೂತನ ತಂತ್ರಜ್ಞಾನ ಮತ್ತು ಸುಧಾರಿತ ಮಟ್ಟದ ಆರ್ಥಿಕ ಸಾಕ್ಷರತೆಯ ಮೂಲಕ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ತ್ವರಿತವಾಗಿ ಅಭಿವೃದ್ಧಿಪಡಿಸುವ ಆಶಯ ಹೊಂದಿದೆ. ❑

# ಅಂಕೀಕರಣದ ಮೂಲಕ ಗ್ರಾಮೀಣ ಆರ್ಥಿಕತೆ ಬಲವರ್ಧನೆ




ಸರ್ಕಾರವು ನೋಟುಗಳ ಅಮಾನ್ಯತೆ ಘೋಷಣೆ ಮಾಡಿದ ನಂತರ ವಾಣಿಜ್ಯ ಕ್ಷೇತ್ರದ ಹಲವಾರು ರಂಗಗಳಲ್ಲಿ ಅಂಕೀಕೃತ ವಹಿವಾಟಿನಲ್ಲಿ ತೀವ್ರ ಪ್ರಗತಿಯನ್ನು ಕಾಣಲಾಗಿದೆ. ಸಂಘಟಿತ ಡೈರಿ ವಲಯ ಇದರಲ್ಲಿ ಹಿಂದೆ ಉಳಿದಿಲ್ಲ. ರಾಜ್ಯ ಸಹಕಾರ ಸಂಘಗಳು ಹಾಗೂ ಖಾಸಗಿ ಸಹಕಾರ ಕಂಪನಿಗಳಿಗೆ ಸೇರಿದ ಹಾಲು ತಯಾರಕರು ಹತ್ತು ಲಕ್ಷಕ್ಕೂ ಮೀರಿ ಹೊಸ ಬ್ಯಾಂಕ್ ಖಾತೆಯನ್ನು ತೆರೆದಿದ್ದಾರೆ

* ಸಂದೀಪ್ ದಾಸ್

ಕಳೆದ ವರ್ಷ ನವೆಂಬರಿನಲ್ಲಿ 500 ಮತ್ತು 1000 ರೂಪಾಯಿ ನೋಟುಗಳನ್ನು ಅಮಾನ್ಯಗೊಳಿಸಿದ ನಂತರ ಪ್ರಧಾನಮಂತ್ರಿಗಳು "ಈ ಅಮಾನ್ಯತೆಯು ನಗದುರಹಿತ ಆರ್ಥಿಕತೆಯತ್ತ ದಾರಿ ಮಾತ್ರ ತೋರದೆ, ಮುನ್ನಡೆಸಿಕೊಂಡೂ ಹೋಗುತ್ತಿದೆ" ಎಂದು ಹೇಳಿದರು.

ಎರಡು ತಿಂಗಳ ನಂತರ ಗ್ರಾಮೀಣ ಪ್ರದೇಶಗಳಲ್ಲಿ ಪರಿವರ್ತನೆ ಕಂಡುಬರುತ್ತಿದೆ. ಆಧಾರ್ ಆಧರಿತ ಪಾವತಿ ವ್ಯವಸ್ಥೆ, ನ್ಯಾಷನಲ್ ಯುನಿಫೈಡ್ ಯುಎಸ್‌ಎಸ್‌ಡಿ ವೇದಿಕೆ, ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡುಗಳಿಗೆ ಜೋಡಿಸಲ್ಪಟ್ಟ ಪಾಯಿಂಟ್ ಆಫ್ ಸೇಲ್ (ಪಿಓಎಸ್) ಯಂತ್ರ ಮತ್ತು ಇ–ವಾಲೆಟ್‌ನಂತಹ ಮೊಬೈಲ್ ಆ್ಯಪ್ ಆಧರಿತ ಕಾರ್ಯಕ್ರಮಗಳು ಇತ್ಯಾದಿ ಪಾವತಿ ವಿಧಾನಗಳು ಅಥವಾ ಮೊಬೈಲ್ ಬ್ಯಾಂಕಿಂಗ್ ಸೇವೆಗಳಂತಹ ಹಲವಾರು ರೀತಿಯ ನಗದುರಹಿತ ಹಣಕಾಸು ವ್ಯವಹಾರಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಸಾಕಷ್ಟು ಸಂಖ್ಯೆಯ ಗ್ರಾಮೀಣ ಜನತೆಯು ನಗದುರಹಿತ ವ್ಯವಹಾರವನ್ನು ಮಾಡುವುದನ್ನು ಖಚಿತಪಡಿಸುವತ್ತ ಸರ್ಕಾರವು ತನ್ನ ಇಡೀ ಗಮನವನ್ನು ಕೇಂದ್ರೀಕರಿಸಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಫಲಾನುಭವಿಗಳು ಬ್ಯಾಂಕ್ ಅಕೌಂಟಿನ ಮೂಲಕ ವೇತನ / ಕೂಲಿಯನ್ನು ಪಡೆಯುವುದು, ಸಹಕಾರ ಸಂಘಗಳು ಅಥವಾ ಖಾಸಗಿ ವಲಯಗಳಿಗೆ ಮಾರಿದ ಹಾಲಿಗೆ ಡೈರಿ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಹೋಗುವಂತಹ ನೇರ ನಿಧಿ ವರ್ಗಾವಣೆ ಅಥವಾ ಪ್ರಧಾನ್ ಮಂತ್ರಿ ಜನ್ ಧನ್ ಯೋಜನೆಯ ಅಡಿಯಲ್ಲಿ ಬ್ಯಾಂಕುಗಳಿಂದ ಹೊರಡಿಸಿದ ರೂಪೇ ಕಾರ್ಡುಗಳನ್ನು ಬಳಸಿ ಖರೀದಿ ಮಾಡುವುದು ಇತ್ಯಾದಿ ಹಲವಾರು ಚಟುವಟಿಕೆಗಳ ಮೂಲಕ ಬ್ಯಾಂಕ್ ಖಾತೆಗೆ ನೇರವಾಗಿ ಹಣವನ್ನು ವರ್ಗಾಯಿಸುವ ಪ್ರಯತ್ನ ನಡೆಯುತ್ತಿದೆ.

ಈಗ 26.5 ಕೋಟಿಗಿಂತ ಹೆಚ್ಚು ಬ್ಯಾಂಕು ಖಾತೆಗಳನ್ನು ಜನ್ ಧನ್ ಯೋಜನೆಯ ಅಡಿಯಲ್ಲಿ ತೆರೆಯಲಾಗಿದೆ. ಈ ಯೋಜನೆಯು ಪ್ರತಿಯೊಬ್ಬ ಹೊಸ ಜನ್ ಧನ್ ಖಾತೆಗಾರರಿಗೆ ರೂಪೇ ಡೆಬಿಟ್ ಕಾರ್ಡನ್ನು ಒದಗಿಸುವುದಾಗಿ ಭರವಸೆ ನೀಡಿದ್ದು ಇಲ್ಲಿಯವರೆಗೆ 19.5 ಕೋಟಿ ಕಾರ್ಡುಗಳನ್ನು ನೀಡಲಾಗಿದೆ.

ಜನ್ ಧನ್ ಬ್ಯಾಂಕ್ ಖಾತೆಗಾರರನ್ನು ಗ್ರಾಮೀಣ ಪ್ರದೇಶಗಳ ಡಿಜಿಟಲ್ ಪರಿವರ್ತನೆಯ ಕ್ರಾಂತಿಯ ಹರಿಕಾರರಾಗಿ ಮಾಡುವ ಗುರಿಯನ್ನು ಹೊಂದಲಾಗಿದೆ ಎಂದು ಹಣಕಾಸು ಸಚಿವಾಲಯ ಅಧಿಕಾರಿಗಳು ಹೇಳಿದ್ದಾರೆ.

### ಡೈರಿ ವಲಯವು ಹಣರಹಿತ ವಹಿವಾಟಿನಲ್ಲಿ ಮುನ್ನಡೆ ಸಾಧಿಸಿದೆ

ಸರ್ಕಾರವು ನೋಟುಗಳ ಅಮಾನ್ಯತೆ ಘೋಷಣೆ ಮಾಡಿದ ನಂತರ ವಾಣಿಜ್ಯ ಕ್ಷೇತ್ರದ ಹಲವಾರು ರಂಗಗಳಲ್ಲಿ ಅಂಕೀಕೃತ ವಹಿವಾಟಿನಲ್ಲಿ ತೀವ್ರ ಪ್ರಗತಿಯನ್ನು ಕಾಣಲಾಗಿದೆ. ಸಂಘಟಿತ ಡೈರಿ ವಲಯ ಇದರಲ್ಲಿ ಹಿಂದೆ ಉಳಿದಿಲ್ಲ. ರಾಜ್ಯ

* ಪತ್ರಕರ್ತರು. E-mail : andipdas2005@gmail.com



ಸಹಕಾರ ಸಂಘಗಳು ಹಾಗೂ ಖಾಸಗಿ ಸಹಕಾರ ಕಂಪನಿಗಳಿಗೆ ಸೇರಿದ ಹಾಲು ತಯಾರಕರು ಹತ್ತು ಲಕ್ಷಕ್ಕೂ ಮೀರಿ ಹೊಸ ಬ್ಯಾಂಕ್ ಖಾತೆಯನ್ನು ತೆರೆದಿದ್ದಾರೆ ಮತ್ತು ನವೆಂಬರ್ 10ರಿಂದ ಈ ಮೂಲಕ ಹಣವನ್ನು ಸ್ವೀಕರಿಸಿದ್ದಾರೆ. ಕಳೆದ ವರ್ಷದ ಮಧ್ಯಭಾಗದಿಂದ ಇಡಿ ದೇಶದಲ್ಲಿ ತೆರೆದ ಡೈರಿ ರೈತರ ಹೊಸ ಬ್ಯಾಂಕ್ ಖಾತೆಗಳ ಸಂಖ್ಯೆಯು ಮೂರು ಮಿಲಿಯನ್‌ಗೂ ಮೀರಿದೆ.

ಕೃಷಿ ಸಚಿವಾಲಯದ ಅಡಿಯಲ್ಲಿರುವ ಪಶು ಸಂಗೋಪನಾ ವಿಭಾಗವು ತನ್ನ ಇತ್ತೀಚಿನ ಸುತ್ತೋಲೆಯಲ್ಲಿ ಮುಂದಿನ ಕೆಲವು ತಿಂಗಳೊಳಗೆ ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್ (ಎನ್‌ಡಿಡಿಬಿ), ಡೆಲ್ಲಿ ಮಿಲ್ಕ್ ಸ್ಕಿಂ ಮತ್ತು ಎಲ್ಲ ರಾಜ್ಯ ಮಟ್ಟದ ಡೈರಿ ಸಂಘಗಳಿಗೆ ರೈತರ ಬ್ಯಾಂಕ್ ಖಾತೆಗಳಿಗೆ ನೇರ ಹಣ ಪಾವತಿ ಮಾಡಬೇಕೆಂದು ನಿರ್ದೇಶಿಸಿದೆ. ಸರ್ಕಾರವು ಕೂಡ ಅಮುಲ್ ಎಂದು ಜನಪ್ರಿಯವಾಗಿರುವ, ದೇಶದ ಅತಿ ದೊಡ್ಡ ಡೈರಿ ಸಂಘವಾದ ಗುಜರಾತ್ ಕೊ ಆಪರೇಟಿವ್ ಮಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ನಿಗೆ ತನ್ನ ಸುಮಾರು 29 ಲಕ್ಷ ರೈತರ ಹಾಲು ಖರೀದಿಯ ಹಣ ಪಾವತಿಗಾಗಿ ರೈತರ ಬ್ಯಾಂಕ್ ಖಾತೆಗಳನ್ನು ತೆರೆಯುವುದನ್ನು ಖಚಿತಪಡಿಸಬೇಕೆಂದು ಆಗ್ರಹಪಡಿಸಿದೆ.

"ಅಮಾನ್ಯೀಕರಣ ಘೋಷಣೆ ಆದಾಗಿನಿಂದ, ನಾವು ಡೈರಿ ರೈತರ 8 ಲಕ್ಷ ಹೊಸ ಬ್ಯಾಂಕ್ ಖಾತೆಯನ್ನು ತೆರೆದಿದ್ದೇವೆ. ಈಗ 19 ಲಕ್ಷಕ್ಕಿಂತ ಹೆಚ್ಚು ಡೈರಿ ರೈತರು ಸಹಕಾರಿ ಸಂಘಗಳಿಗೆ ಮಾರಿದ ಹಾಲಿನ ಹಣವನ್ನು ತಮ್ಮ ಬ್ಯಾಂಕ್ ಖಾತೆ ಮೂಲಕ ಪಡೆಯುತ್ತಿದ್ದಾರೆ"ಎಂದು ಜಿಸಿಎಂಎಂಎಫ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಆರ್ ಎಸ್ ಸೋಧಿ ಹೇಳಿದ್ದಾರೆ. ಸಂಘವು ಗುಜರಾತಿನ ಬುಡಕಟ್ಟು ಪ್ರದೇಶಗಳಲ್ಲೂ ಶಾಖೆಗಳನ್ನು ತೆರೆಯಲು ಬ್ಯಾಂಕುಗಳಿಗೆ ಕೋರಿದ್ದು ಆ ಮೂಲಕ ಮಿಕ್ಕ ಎಲ್ಲ ರೈತರು ಬ್ಯಾಂಕ್ ಖಾತೆಗಳನ್ನು ಹೊಂದುವಂತಾಗುತ್ತದೆ ಎಂದು ಅವರು ಹೇಳಿದ್ದಾರೆ. ಪ್ರತಿ ವಾರ ಅಮುಲ್ ತನ್ನ ಹಾಲು ಖರೀದಿಗೆ ರೈತರಿಗೆ ಸುಮಾರು ರೂ. 450 ಕೋಟಿ ನೀಡುತ್ತಿದೆ. ಈಗ ಅಮುಲ್‌ನಿಂದ ಪ್ರತಿವಾರ ಸುಮಾರು 310 ಕೋಟಿ ರೂಪಾಯಿ ರೈತರ ಖಾತೆಗಳಿಗೆ ವರ್ಗಾವಣೆಯಾಗುತ್ತಿದೆ. ಇದು ಅಮಾನ್ಯತೆಗೆ ಮುಂಚೆಗಿಂತ ಎರಡು ಪಟ್ಟು ಹೆಚ್ಚು. ಇದಲ್ಲದೆ, ಚೆನ್ನೈ ಆಧರಿತ ಖಾಸಾ ಡೈರಿ ಮೇಜರ್ ಹಟ್ಸನ್ ಅಗ್ರೊ ಪ್ರಾಡಕ್ಟ್ಸ್ ಈಗ ಸುಮಾರು 3 ಲಕ್ಷ ಹಾಲು ಉತ್ಪಾದಕರಿಗೆ ಪ್ರತಿ 10ನೆಯ ದಿನ 75 ಕೋಟಿ ರೂಪಾಯಿ ಹಣವನ್ನು ವರ್ಗಾಯಿಸುತ್ತಿದೆ. ಖಾಸಗಿ ಪಾಲುದಾರರ ನಡುವೆ ಕೂಡ ಇ-ಪಾವತಿ ಜನಪ್ರಿಯವಾಗುತ್ತಿದೆ ಎಂಬುದಕ್ಕೆ ಇದು ಸಂಕೇತವಾಗಿದೆ.

ಸಹಕಾರಿ ಸಂಘಗಳಿಗೆ ಸೇರಿದ ಡೈರಿ ರೈತರಿಗೆ ಪ್ರತಿ ದಿನದಂತೆ 10ದಿನ ಅಥವಾ ಒಂದು ವಾರದಲ್ಲಿ ಸುಮಾರು 120 ಕೋಟಿ ರೂಪಾಯಿಗಳನ್ನು ನೀಡಲಾಗುತ್ತಿತ್ತು ಇದರಿಂದ ಅಪಾರ ನಗದು ಖರ್ಚಾಗುತ್ತಿತ್ತು. ಆದರೆ ಈಗ ಸುಮಾರು 22 ಕೋಟಿ ಡೈರಿ ಸಹಕಾರಿ ಜಾಲದ ಭಾಗವಾಗಿರುವ ಸುಮಾರು ಒಂದು ಕೋಟಿ ಡೈರಿ ರೈತರ ಪೈಕಿ 60%-70% ರೈತರು ಬ್ಯಾಂಕ್ ಅಕೌಂಟನ್ನು ಹೊಂದಿದ್ದಾರೆ ಎಂದು ಅಧಿಕಾರಿಗಳು ಹೇಳಿದರು.

"ಕಳೆದ ಕೆಲವು ತಿಂಗಳಿಂದ, ನಾವು ರಾಜ್ಯ ಸಂಘಗಳಿಗೆ ನಗದುರಹಿತ ವಹಿವಾಟನ್ನುನಡೆಸಲು ಪ್ರೋತ್ಸಾಹಿಸುತ್ತಿದ್ದೇವೆ ಮತ್ತು ಸರ್ಕಾರದ ಅಮಾನ್ಯೀಕರಣವು ನಮ್ಮ ಈ ಪ್ರಯತ್ನಕ್ಕೆ ಪ್ರೇರಣೆ ನೀಡಿದೆ" ಎಂದು ಅಧಿಕಾರಿಗಳು ಹೇಳಿದರು. ಜಿಸಿಎಮ್‌ಎಮ್‌ಎಫ್, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಸಂಘ, ರಾಜಸ್ತಾನ ಕೊ-ಆಪರೇಟಿವ್ ಡೈರಿ ಫೆಡರೇಷನ್‌ಗಳಂತಹ ಎಲ್ಲ ರಾಜ್ಯ ಸಂಘಗಳಿಗೆ ಇನ್ನು ನಗದು ಪಾವತಿಯಾಗುತ್ತಿರುವ ರೈತರ ಬ್ಯಾಂಕ್ ಖಾತೆಯನ್ನು ತುರ್ತಾಗಿ ತೆರೆಯಲು ಸಹಕಾರ ಸಂಘಗಳ ಶೃಂಗ ಮಂಡಳಿಯಾದ ಎನ್‌ಡಿಡಿಬಿ ಆಗ್ರಹಪಡಿಸಿದೆ.

ಆಹಾರ ಸಚಿವಾಲಯವು ನ್ಯಾಯಬೆಲೆ ಅಂಗಡಿಗಳಲ್ಲಿ ನಗದುರಹಿತ ವಹಿವಾಟಿಗಾಗಿ ಅಂಕೀಕರಣದತ್ತ ಮುನ್ಹೆಜ್ಜೆ ಹಾಕಿದೆ.

ಇದರೊಂದಿಗೆ, ಆಹಾರ ಸಚಿವಾಲಯ ಕೂಡ ದೇಶದಾದ್ಯಂತ ತನ್ನ ಎಲ್ಲ 5 ಲಕ್ಷ ನ್ಯಾಯ ಬೆಲೆ ಅಂಗಡಿಗಳಲ್ಲಿ ಹಣರಹಿತ ವ್ಯವಹಾರವನ್ನು ಖಚಿತಪಡಿಸುವ ಮುಂದೊಡಗನ್ನು ಪ್ರಾರಂಭಿಸಿದೆ. ಇಲ್ಲಿ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆ ಅಡಿಯಲ್ಲಿ ಬರುವ ಫಲಾನುಭವಿಗಳು ತಮ್ಮ ಆಧಾರ ಆಧರಿತ ಬ್ಯಾಂಕ್ ಖಾತೆಗಳ ಮೂಲಕ ಅಥವಾ ಬ್ಯಾಂಕುಗಳು ಒದಗಿಸಿರುವ ರೂಪೇ ಕಾರ್ಡುಗಳ ಮೂಲಕ ಅತಿ ಹೆಚ್ಚು ರಿಯಾಯಿತಿಯಲ್ಲಿ ಧಾನ್ಯಗಳನ್ನು ಖರೀದಿಸಬಹುದು. "ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆ ಅಡಿಯಲ್ಲಿ ಬರುವ ಫಲಾನುಭವಿಗಳು ಅತಿ ಹೆಚ್ಚು ರಿಯಾಯಿತಿ ಧಾನ್ಯಗಳನ್ನು ಪಡೆಯಲು ಪ್ರತಿ ತಿಂಗಳು ಕೇವಲ ರೂ. 75 ಎಂದ 90 ಮಾತ್ರ ಪಾವತಿಸುತ್ತಿದ್ದಾರೆ. ಈ ಸಣ್ಣ ಹಣವನ್ನೂ ಕೂಡ ನಗದು ನೀಡದೆ ಪಾವತಿಸುವಂತೆ ಮಾಡುವ ಪ್ರಯತ್ನ ನಡೆಸುತ್ತಿದ್ದೇವೆ" ಎಂದು ಆಹಾರ ಸಚಿವಾಲಯ ಅಧಿಕಾರಿಗಳು ಹೇಳಿದ್ದಾರೆ. ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆ ಅಡಿಯಲ್ಲಿ ಪ್ರತಿಯೊಬ್ಬ ಫಲಾನುಭವಿಯು ಪ್ರತಿ ತಿಂಗಳು 5 ಕೆ.ಜಿ. ಅಕ್ಕಿ ಅಥವಾ ಗೋಧಿಯನ್ನು ಕೆ.ಜಿ.ಗೆ ತಲಾ ಮೂರು ರೂಪಾಯಿ ಮತ್ತು 2 ರೂಪಾಯಿಗಳಂತೆ ಪಡೆಯುತ್ತಾರೆ. ಆದರೆ ಒಡಿಶಾ, ಛತ್ತೀಸ್‌ಗಢ ಮತ್ತು ತಮಿಳುನಾಡುಗಳಂತಹ ರಾಜ್ಯಗಳಲ್ಲಿ ಆಹಾರಧಾನ್ಯಗಳಿಗೆ ಇನ್ನೂ ಹೆಚ್ಚಿನ ರಿಯಾಯಿತಿ ಇದೆ.

ತನ್ನ ಎಲ್ಲ 29,082 ಪಡಿತರ ಅಂಗಡಿಗಳಲ್ಲಿ ಪಾಯಿಂಟ್ ಆಫ್ ಸೇಲ್ (ಪಿಓಎಸ್) ಯಂತ್ರಗಳನ್ನು ಈಗಾಗಲೇ ಅಳವಡಿಸಿರುವ ಆಂಧ್ರಪ್ರದೇಶ, ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜೋಡಿಸಲ್ಪಟ್ಟಿರುವ ಆಧಾರ್ ಆಧರಿತ ಪಿಓಎಸ್ ಯಂತ್ರಗಳ ಬಳಕೆಯನ್ನು ಆರಂಭಿಸಿದೆ. "ಪಿಓಎಸ್ ಯಂತ್ರಗಳಲ್ಲಿ ಕಾರ್ಡನ್ನು ಬಳಸಿ ಫಲಾನುಭವಿಗಳು ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆ ಅಡಿಯಲ್ಲಿ ನಗದಿಲ್ಲದೆ ಧಾನ್ಯವಿಲ್ಲದೆ ಖರೀದಿಸಬಲ್ಲರು" ಎಂದು ಅಧಿಕಾರಿಗಳು ಹೇಳಿದ್ದಾರೆ. ಈಗ, ದೇಶದ 5,27,750 ನ್ಯಾಯಬೆಲೆ ಅಂಗಡಿಗಳ ಪೈಕಿ ಶೇಕಡ 33 ರಷ್ಟು ನ್ಯಾಯಬೆಲೆ ಅಂಗಡಿಗಳಲ್ಲಿ ಮಾತ್ರ ಪಿಓಎಸ್ ಯಂತ್ರಗಳಿದ್ದು ಇಲ್ಲಿ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆ

ಅಡಿಯಲ್ಲಿ ಖರೀದಿಸುವ ಆಹಾರ ಧಾನ್ಯಗಳ ವಹಿವಾಟನ್ನು ವಿದ್ಯುನ್ಮಾನವಾಗಿ ದಾಖಲಿಸಲಾಗುತ್ತದೆ. "ಈ ಪಿಓಎಸ್ ಯಂತ್ರಗಳನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜೋಡಿಸಲ್ಪಡಬೇಕಾಗುತ್ತದೆ" ಎಂದು ಅಧಿಕಾರಿಗಳು ಹೇಳಿದ್ದಾರೆ.

ಮಹಾರಾಷ್ಟ್ರ, ಹರಿಯಾಣ, ರಾಜಾಸ್ತಾನ್ ಮತ್ತು ಒಡಿಶಾಗಳ ಜೊತೆಗೆ ಕರ್ನಾಟಕವೂ ಸಹಾ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ (ಪಿಡಿಎಸ್) ಆಧಾರ್ ಆಧರಿತ ಪಾವತಿಯ ಅನುಷ್ಠಾನವನ್ನು ಆರಂಭಿಸಿದೆ. ರಾಜ್ಯದ 20,778 ಎಫ್‌ಪಿಎಸ್‌ಗಳಲ್ಲಿ ಆಧಾರ್ ಸಂಯೋಜಿತ ಪಾಯಿಂಟ್ ಆಫ್ ಸೇಲ್ ಯಂತ್ರಗಳು ಅತಿ ಹೆಚ್ಚು ದರ ರಿಯಾಯಿತಿ ಆಹಾರಧಾನ್ಯಗಳನ್ನು ಖರೀದಿಸುವ 1.08 ಕೋಟಿ ಬಡತನದ ಕೆಳರೇಖೆಯಲ್ಲಿರುವ ಪಡಿತರ ಚೀಟಿ ಹೊಂದಿದ ಜನರ ಜೈವಿಕ ಪ್ರಮಾಣೀಕರಣವನ್ನು ಬಳಸುತ್ತವೆ. ರಾಜ್ಯ ಸರ್ಕಾರವು ಆಧಾರ್ ಮೂಲಕ ಜನ್ ಧನ್ ಖಾತೆ ಕಾರ್ಡುದಾರರನ್ನು ಜೋಡಿಸುತ್ತದೆ. ಮಹಾರಾಷ್ಟ್ರ ಸರ್ಕಾರವು, ವ್ಯಾಪಾರ ವ್ಯವಹಾರ ಮಾದರಿ ಅಥವಾ ಯುಎಸ್‌ಎಸ್‌ಡಿ ಅಥವಾ ಇ-ವಾಲೆಟ್ ಸೌಲಭ್ಯ ಮೂಲಕ ಪಾವತಿ ಬಳಸುವ ನಗದುರಹಿತ ವಹಿವಾಟಿನ ಪ್ರಾರಂಭಿಕ ಯೋಜನೆಯನ್ನು ತನ್ನ 84 ಎಫ್‌ಪಿಎಸ್‌ಗಳಲ್ಲಿ ಜಾರಿಗೊಳಿಸಿದೆ. ಈಗ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಂಗಡಿಗಳು ಪಾಯಿಂಟ್ ಆಫ್ ಸೇಲ್ ಸ್ಥಳಗಳಲ್ಲಿ ವಹಿವಾಟನ್ನು ನಡೆಸುತ್ತವೆ. ಎಫ್‌ಪಿಎಸ್‌ಗಳು ರಿಯಾಯಿತಿ ಸರಕುಗಳನ್ನು ಪಡಿತರ ಚೀಟಿ ಹೊಂದಿರುವವರಿಗೆ ಮತ್ತು ಬಡತನದ ರೇಖೆಕೆಳಗಿರುವ ಜನರಿಗೆ ಪೂರೈಸುತ್ತವೆ. ಮಹಾರಾಷ್ಟ್ರ ಸರ್ಕಾರವು ತನ್ನ ಸುಮಾರು 50 ಸಾವಿರ ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಅಂಗಡಿಗಳಲ್ಲಿ ನಗದುರಹಿತ ವಹಿವಾಟನ್ನು ನಡೆಸುವ ಪ್ರಯತ್ನ ನಡೆಸುತ್ತಿದೆ. ಅಮಾನ್ಯ ಕ್ರಮ ಘೋಷಣೆಯಾದಾಗಿನಿಂದ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆ ಅಡಿಯಲ್ಲಿ ಬರುವ ಆಹಾರ ಧಾನ್ಯಗಳ ರವಾನೆಯಲ್ಲಿ ಹಣ ಕೊರತೆಯಿಂದಾಗಿ ವಿಳಂಬವಾಗಿರುವ ವರದಿ ಕಂಡುಬಂದಿಲ್ಲ. 24 ಕೋಟಿ ಪಡಿತರ ಚೀಟಿಗಳ ಪೈಕಿ 71%ಕ್ಕಿಂತ ಹೆಚ್ಚು ಕಾರ್ಡುಗಳಿಗೆ ಆಧಾರ್ ಜೋಡನೆಯಿದೆ ಮತ್ತು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಈ ಕಾರ್ಡುಗಳ ಜೋಡನೆ ಮಾಡುವ ಮತ್ತು ಪಿಓಎಸ್ ಯಂತ್ರಗಳ ಅಳವಡಿಕೆ ಮೂಲಕ ಹಣರಹಿತ



ವಹಿವಾಟನ್ನು ಖಚಿತಪಡಿಸುವುದು ಸಾಧ್ಯ ಎಂದು ಅಧಿಕಾರಿಗಳು ಹೇಳಿದ್ದಾರೆ. ಈಗ ಸುಮಾರು 50ರಿಂದ 55 ಮಿಲಿಯನ್ ಟನ್ ಅಕ್ಕಿ ಮತ್ತು ಗೋಧಿಯನ್ನು ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆ ಅಡಿಯಲ್ಲಿ ಬರುವ ಸುಮಾರು 82 ಕೋಟಿ ಜನರಿಗೆ ಪೂರೈಕೆ ಮಾಡಲಾಗುತ್ತಿದೆ.

ಆಹಾರ ಮತ್ತು ಗ್ರಾಹಕ ವ್ಯವಹಾರ ಸಚಿವಾಲಯವು ಕೂಡ ಅಧಿಕಾರಿಗಳಿಗೆ ತನ್ನ ಎಲ್ಲ ಅಧಿಕೃತ ಕಾರ್ಯಗಳನ್ನು ನಗದುರಹಿತ ವಹಿವಾಟುಗಳಾಗಿ ಮಾರ್ಪಾಡು ಮಾಡಬೇಕೆಂದು ಆದೇಶಿಸಿದೆ. ಭಾರತದ ಆಹಾರ ನಿಗಮ ಬ್ಯಾಂಕ್ ಖಾತೆಗಳಿಗೆ ಕನಿಷ್ಠ ಬೆಂಬಲ ಬೆಲೆ ವರ್ಗಾವಣೆ ಮೂಲಕ ರೈತರಿಂದ ಆಹಾರಧಾನ್ಯಗಳನ್ನು ಪಡೆಯುತ್ತಿದೆ. ಆದರೆ ಪಂಜಾಬ್ ಮತ್ತು ಹರಿಯಾಣಗಳಲ್ಲಿ ಕಮಿಷನ್ ಏಜೆಂಟುಗಳ ಮೂಲಕ ವರ್ಗಾಯಿಸಲಾಗುತ್ತಿದೆ.

ಹಾಗೆಯೇ ಇತ್ತೀಚೆಗೆ ಮುಂಗಾರು ಅವಧಿ ಮುಗಿಯುತ್ತಿದ್ದಂತೆ ಗ್ರಾಹಕ ವ್ಯವಹಾರ ವಿಭಾಗವು ಪಡೆದ ರೂ.703 ಕೋಟಿ ಬೆಲೆಯ ಧಾನ್ಯಗಳಿಗೆ ಆನ್ ಲೈನ್ ಪಾವತಿ ಮೂಲಕ ರೈತರಿಗೆ ಹಣ ನೀಡಿದೆ. ಎಲ್ಲ ಕಂಟ್ರಾಕ್ಟ್ ಕಾರ್ಯಗಳ ಎಲ್ಲ ಪಾವತಿಗಳನ್ನು ನಗದುರಹಿತವಾಗಿ ಮಾಡುವಂತೆ ಸಚಿವಾಲಯವು ಅಧಿಕಾರಿಗಳಿಗೆ ನಿರ್ದೇಶಿಸಿದೆ.

### ಉದ್ಯೋಗ ಖಾತರಿ ಕಾರ್ಮಿಕರಿಗೆ ಬ್ಯಾಂಕ್ ಖಾತೆಗಳ ಮೂಲಕ ಕೂಲಿ

ಹಲವು ವರ್ಷಗಳ ಹಿಂದೆ ಆರಂಭಿಸಿದ ಹಣಕಾಸು ಸೇರ್ಪಡೆ ಕಾರ್ಯಕ್ರಮದಿಂದಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಖಾತರಿ ಉದ್ಯೋಗ ಕಾಯಿದೆಯ ಅಡಿಯಲ್ಲಿ ಬರುವ ಕಾರ್ಮಿಕರಿಗೆ ಕೂಲಿಯ ಪಾವತಿಯು ನಗದು ಇಲ್ಲದೆ ನಡೆಯುತ್ತಿದೆ. ಫಲಾನುಭವಿಗಳು ತಮ್ಮ ಬ್ಯಾಂಕ್ ಖಾತೆಗಳ ಮೂಲಕ ಕೂಲಿಯನ್ನು ಪಡೆಯುತ್ತಿದ್ದಾರೆ. ಈ ಹಣಕಾಸು ವರ್ಷದಲ್ಲಿ (2016-17) 32 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು 25 ಕೋಟಿ ಫಲಾನುಭವಿಗಳಿಗೆ ವರ್ಗಾಯಿಸಲಾಗಿದೆ.

### ಒಂದು ಕೋಟಿ ಜನರ ಡಿಜಿಟಲ್ ಶಿಕ್ಷಣಕ್ಕೆ ಸರ್ಕಾರದ ಒತ್ತು

ಒಂದು ಕೋಟಿ ಗ್ರಾಮೀಣ ನಾಗರಿಕರನ್ನು ಡಿಜಿಟಲ್ ಶಿಕ್ಷಿತರಾಗಿ ಮಾಡುವ ಗುರಿಯನ್ನು ಸರ್ಕಾರವು ಹೊಂದಿದೆ. ಇದರಿಂದಾಗಿ ಜನರು ತಮಗೆ ದೊರಕುವ ಮತ್ತು ಅತ್ಯುತ್ತಮವಾಗಿ ಹೊಂದಿಕೆಯಾಗುವ ಎಲ್ಲ ಪಾವತಿ ಆಯ್ಕೆಗಳನ್ನು ಬಳಸುವ ತರಬೇತಿ ಪಡೆಯುತ್ತಾರೆ. 40ಲಕ್ಷಕ್ಕಿಂತ ಹೆಚ್ಚು ಗ್ರಾಮೀಣ ನಾಗರಿಕರು ಮತ್ತು ಸುಮಾರು 1.2 ಲಕ್ಷ ವರ್ತಕರು ಈಗಾಗಲೇ ಡಿಜಿಟಲ್ ಪಾವತಿಗಳಲ್ಲಿ ನೊಂದಾಯಿಸಿಕೊಂಡಿದ್ದಾರೆ. "ನಾವು ಈಗಾಗಲೇ ತಿಳಿವಳಿಕೆ ಉಂಟುಮಾಡುವ ಹಂತದಿಂದ ಜನರು ತಾವೇ ಎಲೆಕ್ಟ್ರಾನಿಕ್ ಪಾವತಿ ಆಯ್ಕೆಗಳನ್ನು ಪ್ರಯತ್ನಿಸುವ ಹಂತಕ್ಕೆ ತಲುಪಿದ್ದೇವೆ. ವಿದ್ಯುನ್ಮಾನ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯವು ಆರಂಭಿಸಿದ ಸಾಮಾನ್ಯ ಸೇವಾ ಕೇಂದ್ರಗಳು ಈ ಪ್ರಚಾರದ ಮುಂಚೂಣಿಯಲ್ಲಿವೆ" ಎಂದು ಒಬ್ಬ ಹಿರಿಯ ಸರ್ಕಾರಿ ಅಧಿಕಾರಿ ಹೇಳಿದರು.

ಇತ್ತೀಚೆಗೆ ಪ್ರಧಾನ ಮಂತ್ರಿಗಳು ತಕ್ಷಣಕ್ಕೆ ನಗದುರಹಿತ ಸಮಾಜ ಸಾಧ್ಯವಾಗದು; ಆದರೆ ತಕ್ಷಣದಲ್ಲಿ ಕಡಿಮೆ ನಗದು ಸಮಾಜದ ಭಾಗವಾಗುವ ನಿಟ್ಟಿನಲ್ಲಿ ಜನರು ಕಾರ್ಯನಿರತರಾಗಬೇಕೆಂದು ಮನವಿಮಾಡಿದರು. "ಈ ಡಿಜಿಟಲ್ ಆರ್ಥಿಕತೆ ಹೇಗೆ ಕೆಲಸ ಮಾಡುತ್ತಿದೆ ಎಂದು ಕಲಿಯಿರಿ. ವಿಭಿನ್ನ ರೀತಿಗಳಲ್ಲಿ ನಿಮ್ಮ ಬ್ಯಾಂಕ್ ಖಾತೆ ಬಳಸುವುದು ಮತ್ತು ಅಂತರ್ಜಾಲ ಬ್ಯಾಂಕ್ ವಹಿವಾಟು ಮಾಡುವುದನ್ನು ಕಲಿಯಿರಿ. ನಿಮ್ಮ ಫೋನುಗಳಲ್ಲಿ ಹಲವಾರು ಬ್ಯಾಂಕುಗಳ ಆ್ಯಪ್‌ಗಳನ್ನು ಪರಿಣಾಮಕಾರಿಯಾಗಿ ಬಳಸುವುದನ್ನು ಕಲಿಯಿರಿ. ನಗದು ಇಲ್ಲದೆ ನಿಮ್ಮ ವ್ಯಾಪಾರವನ್ನು ನಡೆಸುವುದನ್ನು ಕಲಿಯಿರಿ" ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಇಲ್ಲಿಯವರೆಗಿನ ಪ್ರಗತಿಯನ್ನು ನಾವು ಅವಲೋಕಿಸಿದರೆ ಗ್ರಾಮೀಣ ಭಾರತವನ್ನು ಕಡಿಮೆ ನಗದು ಬಳಕೆಯ ಆರ್ಥಿಕತೆಯಾಗಿ ಮಾಡುವಲ್ಲಿ ಉತ್ತಮ ಆರಂಭವಾಗಿದೆಯೆಂದು ಹೇಳಬಹುದು. ❑

# ನಗದುರಹಿತ ವ್ಯವಹಾರಗಳ ಅನುಕೂಲಗಳು




* ಬಿ.ಆರ್. ರವೀಂದ್ರನಾಥ್

ಪ್ರತಿಯೊಬ್ಬ ದೇಶವಾಸಿಯೂ ದೇಶದ ಪ್ರಗತಿಗಾಗಿ ಶ್ರಮಿಸಬೇಕಾಗಿರುತ್ತದೆ. ಆದ್ದರಿಂದ, ಪ್ರತಿಯೊಬ್ಬ ನಾಗರಿಕರೂ ತಮ್ಮ ತಮ್ಮ ವ್ಯವಹಾರಗಳನ್ನು ಆದಷ್ಟು ಹೆಚ್ಚು ನಗದು ರಹಿತವಾಗಿ ನಡೆಸಿದರೆ, ಒಂದು ದೊಡ್ಡ ಜವಾಬ್ದಾರಿ ನಿಭಾಯಿಸಿದಂತಾಗುತ್ತದೆ. ದೇಶದ ಪ್ರಗತಿಗಾಗಿ ಮಾಡಬೇಕಾದ ಕೆಲಸದ ಜೊತೆಜೊತೆಗೇ, ವ್ಯಕ್ತಿಗತವಾಗಿಯೂ ಬಹಳ ಸಮಯವನ್ನು ಉಳಿಸಿಕೊಂಡು ನೆಮ್ಮದಿಯನ್ನು ಪಡೆಯಬಹುದಾಗಿದೆ.

ನಗದು ಹಣ, ನಾಗರಿಕ ವ್ಯವಸ್ಥೆ ಅಭಿವೃದ್ಧಿಪಡಿಸಿಕೊಂಡಿರುವ ಅತ್ಯಂತ ಮುಖ್ಯವಾದ ಆರ್ಥಿಕ ನಿರ್ವಹಣಾ ಸಾಧನವಾಗಿದೆ. ನಗದುಹಣದಿಂದ ವಾಣಿಜ್ಯ ವ್ಯವಹಾರಗಳನ್ನು ಸುಗಮಗೊಳಿಸಲು ಸಾಧ್ಯವಾಗಿರುವಂತೆ ಇನ್ನಾವುದೇ ಸಾಧನದಿಂದ ಸಾಧ್ಯವಾಗಿರುವುದಿಲ್ಲ.

ನಗದುಹಣವನ್ನು ಎಲ್ಲ ನಾಗರಿಕರಿಗೂ ಸುಲಭವಾಗಿ ಲಭ್ಯಗೊಳಿಸಲು ಸರ್ಕಾರಗಳು ಹಾಗೂ ದೇಶಗಳ ಕೇಂದ್ರ ಬ್ಯಾಂಕುಗಳು ಹಲವಾರು ಮೂಲ ಸೌಲಭ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ನಿರ್ಮಾಣಮಾಡುತ್ತವೆ ಹಾಗೂ ಶ್ರಮ ಮತ್ತು ಹಣವನ್ನು ವೆಚ್ಚಮಾಡುತ್ತವೆ. ನಮ್ಮ ದೇಶದಲ್ಲಿ ನಗದು ಹಣವನ್ನು ಸುಲಭವಾಗಿ ಲಭ್ಯಗೊಳಿಸಲು ದೇಶದಾದ್ಯಂತ ಸುಮಾರು 4300 ಕರೆನ್ಸಿ ಚೆಸ್ಟ್‌ಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪಿಸಿರುತ್ತದೆ. ನಗದು ಹಣವನ್ನು ಸರ್ಕಾರದ ಒಡೆತನಲ್ಲಿರುವ ನಾಲ್ಕು ಟಂಕಸಾಲೆಗಳಲ್ಲಿ ನಾಣ್ಯಗಳನ್ನು ಹಾಗೂ ಎರಡು ಪ್ರೆಸ್‌ಗಳು ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ನ ಒಡೆತನಲ್ಲಿರುವ ಒಂದು ಪ್ರೆಸ್‌ನಲ್ಲಿ ನೋಟುಗಳನ್ನು ಮುದ್ರಿಸಲಾಗುತ್ತಿದೆ.

32 ಲಕ್ಷ ಚದರ ಕಿಮಿ ಪ್ರದೇಶದಲ್ಲಿ ಆರು ಲಕ್ಷ ಹಳ್ಳಿಗಳಿರುವ ನಮ್ಮ ಭಾರತ ದೇಶದಲ್ಲಿನ 125 ಕೋಟಿ ಜನಸಂಖ್ಯೆಗೆ ಸದಾಕಾಲ ಎಲ್ಲಾ ರೀತಿಯ ನಗದು ಹಣವನ್ನು ಲಭ್ಯಗೊಳಿಸುವುದು ಸಾಮಾನ್ಯ ಮಾತಲ್ಲ. ಅದರಲ್ಲೂ ನಮ್ಮ ದೇಶದಲ್ಲಿ ಬಹುತೇಕ ವ್ಯವಹಾರಗಳನ್ನು ನಗದು ರೂಪದಲ್ಲಿ ನಡೆಯುತ್ತಿರುವ ಈ ಕಾಲಘಟ್ಟದಲ್ಲಿ ನಗದು ಹಣದ ಮುದ್ರಣ, ರವಾನೆ ಹಾಗೂ ಸುರಕ್ಷತೆ, ಹಾಳಾದ ನೋಟುಗಳ ಹಿಂಪಡೆಯುವಿಕೆ, ವಿಲೇವಾರಿ ಇತ್ಯಾದಿ ಇತ್ಯಾದಿಗಳನ್ನು ನಿಭಾಯಿಸಲು ಮೀಸಲಿಟ್ಟಿರಬಹುದಾದ ಮೂಲಭೂತ ಸೌಲಭ್ಯಗಳು ಮತ್ತು ವಾರ್ಷಿಕ ವೆಚ್ಚದ ಗಾತ್ರ ಅಪಾರ ಮಟ್ಟದಲ್ಲಿರುತ್ತದೆ. ನಾವೆಲ್ಲರೂ ಪಾವತಿಸುವ ತೆರಿಗೆ ಹಣದಲ್ಲಿ ಒಂದು ಭಾಗ ಇದಕ್ಕಾಗಿ ಮೀಸಲಿಡಲಾಗಿರುತ್ತದೆ. ನಗದು ಹಣದ ಚಲಾವಣೆ ಹೆಚ್ಚಿದಷ್ಟೂ ವಹಿಸಬೇಕಾದ ನಿರ್ವಹಣೆ ವೆಚ್ಚ ಹೆಚ್ಚಿರುತ್ತದೆ.

ನಗದು ಹಣವನ್ನು ನಕಲಿ ಮಾಡಲು ಸಾಧ್ಯವಾಗದಿರುವಂತೆ ಅತ್ಯಾಧುನಿಕ ತಂತ್ರಜ್ಞಾನಗಳ ಬಳಕೆ ಮಾಡಲಾಗುತ್ತದೆ ಹಾಗೂ ಈ ಬಗ್ಗೆ ನಿರಂತರವಾಗಿ ಆಳವಾದ ಸಂಶೋಧನೆಗಳು ನಡೆಯುತ್ತಲೇ ಇರುತ್ತವೆ. ನಕಲಿ ನೋಟುಗಳನ್ನು ತಯಾರಿಸಲು ಸಾಧ್ಯವಾಗದಂತೆ ಮಾಡಲು ಪ್ರತಿಯೊಂದೂ ನೋಟಿನಲ್ಲಿ ಸುರಕ್ಷತೆಗಳನ್ನು ಅಳವಡಿಸಿರಬೇಕು.

ನಮ್ಮ ದೇಶದಲ್ಲಿರುವ ನೋಟುಗಳ ಮೌಲ್ಯ ಸುಮಾರು 20 ಲಕ್ಷ ಕೋಟಿಗಳಷ್ಟು ಇರುವಾಗ ಅಷ್ಟೂ ನೋಟುಗಳಲ್ಲಿ ನಕಲಿಯಾಗದಂತೆ ಕ್ರಮಗಳನ್ನು ಕೈಗೊಳ್ಳಬೇಕಾದಲ್ಲಿ ಬಹಳಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ರೀತಿಯ ಕ್ರಮಗಳನ್ನು ಕೈಗೊಳ್ಳಲು ತಗಲುವ ವೆಚ್ಚ ಅಪಾರ ಮಟ್ಟದಲ್ಲಿರುತ್ತದೆ. ನಗದು ಹಣದ ಗಾತ್ರ ಹೆಚ್ಚಿದ್ದಷ್ಟೂ ವ್ಯವಸ್ಥೆಯ ದುರ್ಬಲತೆ ಹೆಚ್ಚಾಗಬಹುದಾಗಿದ್ದು ಭದ್ರತೆ ಮತ್ತು ಸುರಕ್ಷತೆ ವೆಚ್ಚಗಳು ಕಲ್ಪನೆಗೂ ಬಾರದ ಮಟ್ಟದಲ್ಲಿರಬಹುದಾಗಿರುತ್ತದೆ. ದೇಶದ ಆರ್ಥಿಕ ವ್ಯವಸ್ಥೆಯನ್ನು

* ಮಾಜಿ ಬ್ಯಾಂಕ್‌ಅಧಿಕಾರಿ ಹಾಗೂ ಆರ್ಥಿಕ ಸಲಹೆಗಾರ. E-mail : ravindranath@ravindranath.com

**ಚಿತ್ರ – 1 : ಮರಳಿ ಬ್ಯಾಂಕಿಗೆ**




ಆರೋಗ್ಯಪೂರ್ಣವಾಗಿ ಕಾಪಾಡಿಕೊಂಡು ಬರಲು ನಗದು ಹಣದ ಬಳಕೆಯ ಪ್ರಮಾಣ ಒಂದು ಮಟ್ಟದ ಇತಿಮಿತಿಯಲ್ಲಿರ ಬೇಕಾಗಿರುತ್ತದೆ. ಇಂತಹ ಮಿತಿಯನ್ನು ಮೀರಿದಲ್ಲಿ ಹಣದುಬ್ಬರ, ಭ್ರಷ್ಟಾಚಾರ, ಮಾರುಕಟ್ಟೆಗಳಲ್ಲಿ ಅಸಹಜ ಮಟ್ಟದ ಏರುಪೇರುಗಳು, ತೆರಿಗೆ ಗಳ್ಳತನ, ಕಾಳಧನ ಇತ್ಯಾದಿಗಳಂತಹ ಹಲವು ರೀತಿಯ ದುಷ್ಪರಿಣಾಮಗಳು ಕಾಣಿಸಿಕೊಳ್ಳುತ್ತವೆ. ಹಾಗೆಯೇ ನಮ್ಮ ದೇಶದಲ್ಲಿ ನಗದು ಹಣ ಹೆಚ್ಚು ಚಲಾವಣೆಯಲ್ಲಿದ್ದಲ್ಲಿ ಶತ್ರು ರಾಷ್ಟ್ರಗಳಿಗೆ ನಮಗೆ ತೊಂದರೆಗಳನ್ನು ಉಂಟು ಮಾಡಲು ಅನುಕೂಲವಾಗುತ್ತದೆ. ಭಯೋತ್ಪಾದಕರಿಗೆ ನಗದು ಹಣವನ್ನು ಬಳಸಿಕೊಂಡು ಹಿಂಸಾತ್ಮಕ ಕೃತ್ಯಗಳನ್ನು ನಡೆಸಿ ತಪ್ಪಿಸಿಕೊಳ್ಳಲು ಸುಲಭವಾಗುತ್ತದೆ. ಹಾಗೆಯೇ ನಕಲಿ ನೋಟುಗಳನ್ನು ಅಪಾರ ಪ್ರಮಾಣದಲ್ಲಿ ಉತ್ಪಾದಿಸಿ ನಮ್ಮ ದೇಶದಲ್ಲಿನ ಆರ್ಥಿಕ ಸ್ಥಿತಿಯನ್ನು ಅಲ್ಲೋಲಕಲ್ಲೋಲ ಮಾಡಲು ಅವಕಾಶವುಂಟಾಗುತ್ತದೆ.

ಬಹುತೇಕ ಮುಂದುವರೆದ ದೇಶಗಳಲ್ಲಿ ವಾಣಿಜ್ಯ ವ್ಯವಹಾರಗಳನ್ನು ಮಾಡುವಲ್ಲಿ ನಗದು ಹಣದ ಪಾತ್ರ ಕೇವಲ ಶೇ. 15–ಶೇ20 ರಷ್ಟು ಮಾತ್ರ ಇರುತ್ತದೆ. ಆದರೆ ನಮ್ಮ ದೇಶದಲ್ಲಿನ ವಾಣಿಜ್ಯ ಚಟುವಟಿಕೆಗಳಲ್ಲಿ ನಗದು ಹಣದ ಪಾತ್ರ ಸುಮಾರು ಶೇ. 80 ರಷ್ಟು ಇರಬಹುದು ಎಂದು ಅಂದಾಜಿಸಲಾಗಿದೆ. ನಮ್ಮ ದೇಶವೂ ಆರ್ಥಿಕವಾಗಿ ಮುಂದುವರೆಯ ಬೇಕಾದಲ್ಲಿ ನಗದು ಹಣದ ಬಳಕೆ ಪ್ರಮಾಣ ಕಡಿಮೆ ಮಾಡಬೇಕಾಗುತ್ತದೆ. ನಾವು ಆ ದಿಕ್ಕಿನಲ್ಲಿ ಶ್ರಮವಹಿಸದಿದ್ದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಾವು ಉನ್ನತ ಮಟ್ಟಕ್ಕೆ ಏರಲಾಗುವುದಿಲ್ಲ. ನಗದು ಹಣದ ನಿರ್ವಹಣೆಗಾಗಿ ನಿಯೋಜಿಸಲಾಗಿರುವ ಲಕ್ಷಾಂತರ ಉದ್ಯೋಗಿಗಳನ್ನು ಇನ್ನೂ ಉತ್ತಮಗುಣಮಟ್ಟದ ಕೆಲಸಗಳಲ್ಲಿ ಬಳಸಿಕೊಳ್ಳಬಹುದಾಗಿರುತ್ತದೆ. ದೇಶದ ಪ್ರಗತಿಯಲ್ಲಿ ಯೋಜನೆಗಳನ್ನು ರೂಪಿಸುವುದು ಒಂದು ಪ್ರಮುಖ ಕಾರ್ಯವಾಗಿರುತ್ತದೆ. ಉತ್ತಮ ಹಾಗೂ ಪರಿಣಾಮಕಾರಿ ಯೋಜನೆಗಳನ್ನು ರೂಪಿಸಲು ಆದಷ್ಟೂ ಕರಾರುವಾಕ್ಕಾದ ಹಾಗೂ ಪೂರ್ಣಪ್ರಮಾಣದ ಮಾಹಿತಿ ಅತ್ಯಗತ್ಯವಾಗಿರುತ್ತದೆ.

ನಗದು ಹಣದ ಬಳಕೆ ಹೆಚ್ಚಿದ್ದಲ್ಲಿ ಈ ರೀತಿಯ ಮಾಹಿತಿಗಳನ್ನು ಸಂಗ್ರಹಿಸುವಲ್ಲಿ ಬಹಳಷ್ಟು ಕೊರತೆಗಳು ಉಂಟಾಗುತ್ತವೆ. ಉದಾಹರಣೆಗೆ ನಗದು ಹಣದಲ್ಲಿ ಮಾಡಲಾದ ವಹಿವಾಟುಗಳನ್ನು ಸರಿಯಾಗಿ ದಾಖಲಿಸದೆ ತೆರಿಗೆಗಳನ್ನು ಪಾವತಿ ಮಾಡದೆ ಕಾಳಧನದ ನಿರ್ಮಾಣ ಮಾಡುವುದು ಸುಲಭವಾಗುತ್ತದೆ. ದೇಶದಲ್ಲಿ ನಡೆಯುತ್ತಿರುವ ವಹಿವಾಟುಗಳ ಬಗ್ಗೆಯವಿವರಗಳಲ್ಲಿ ದೋಷಗಳಿದ್ದಲ್ಲಿ ಅದರ ಆಧಾರದ ಮೇಲೆ ರೂಪಿಸಲಾಗುವ ಯೋಜನೆಗಳು ಪರಿಣಾಮಕಾರಿಯಾಗಿರದೇ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು ಯಶಸ್ವಿಯಾಗದಿರುವ ಸಾಧ್ಯತೆಗಳೇ ಹೆಚ್ಚಾಗಿರಬಹುದು.

**ಚಿತ್ರ – 2 : ಅಂಗಡಿಯಲ್ಲಿ. (ಪ್ರತಿ ಹಂತದಲ್ಲಿ ಕನಿಷ್ಠ ಒಂದು ಬಾರಿಯಾದರೂ ಎಣಿಕೆ ಮಾಡುತ್ತಾರೆ).**




ವ್ಯಕ್ತಿಗಳ ಸ್ವಾಧೀನದಲ್ಲಿರುವ ಆದರೆ ಬಳಸದಿರುವ ನಗದುಹಣವು ದೇಶದ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ. ಬಹಳಷ್ಟು ಕುಟುಂಬಗಳಲ್ಲಿ ಬಳಸದೇ ಉಳಿಸಿಕೊಂಡಿರುವ ಹಣವನ್ನು ಬ್ಯಾಂಕ್ ಗಳಲ್ಲಿ ತುಂಬಿದಲ್ಲಿ, ಬ್ಯಾಂಕ್ ಗಳಿಗೆ ಹೆಚ್ಚಿನ ಸಂಪನ್ಮೂಲಗಳನ್ನು ಲಭ್ಯವಾಗುತ್ತದೆ.ಈ ಸಂಪನ್ಮೂಲಗಳಿಂದ ಸರ್ಕಾರದ ಸಾಲಪತ್ರಗಳಲ್ಲಿ ಹೂಡಿಕೆ ಮಾಡುವುದು, ಕೃಷಿಕರಿಗೆ ಸಾಲ ನೀಡುವುದು, ಉದ್ಯಮಿಗಳು ಸ್ಥಾಪಿಸಬಹುದಾದ ಘಟಕಗಳಿಗೆ ಸಾಲ ನೀಡುವುದು, ಈ ರೀತಿಯಾಗಿ ಬ್ಯಾಂಕ್ ಗಳು ಬಳಸಬಹುದಾಗಿರುತ್ತದೆ. ಇದರಿಂದ ದೇಶದಲ್ಲಿ ಆರ್ಥಿಕ ಪ್ರಗತಿಗೆ ದಾರಿಯಾಗುತ್ತದೆ. ನಗದು ಹಣದ ಬಳಕೆಯಿಂದ ವ್ಯವಸ್ಥೆಯಲ್ಲಿ ಬಹಳಷ್ಟು ಅದಕ್ಷತೆ ಉಂಟಾಗುತ್ತದೆ. ನಗದು ಹಣವನ್ನು ಪಡೆಯುವ ಅಥವಾ ಪಾವತಿಸುವ ಪ್ರತಿ ಹಂತದಲ್ಲಿಯೂ ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಪದೇಪದೇ ಎಣಿಸಬೇಕಾಗುತ್ತದೆ. ಚಿತ್ರ 1 ರಲ್ಲಿ ಬ್ಯಾಂಕಿಗೆ ಹಣ ಕಟ್ಟುವುದು ಮತ್ತು ಬ್ಯಾಂಕಿನಿಂದ ಹಣ ಪಡೆಯುವುದನ್ನು ತೋರಿಸಿದೆ. ಚಿತ್ರ 2 ರಲ್ಲಿ ಅಂಗಡಿಯಲ್ಲಿನ ನಗದು ವ್ಯವಹಾರವನ್ನು ಸಾಂಕೇತಿಕವಾಗಿ ತೋರಿಸಿದೆ. ಆ ಹಣವನ್ನು ತೆಗೆದುಕೊಂಡು ಅಂಗಡಿಗೆ ಹೋದಾಗ ಚಿತ್ರ 2 ರಲ್ಲಿ ತೋರಿಸಿದಂತೆ ಪ್ರಕ್ರಿಯೆಗಳು ನಡೆಯಬಹುದು:

ಹೆಚ್ಚಿನ ಮೊತ್ತದ ನಗದು ಹಣವನ್ನು ನಮ್ಮ ಬಳಿ ಇಟ್ಟುಕೊಂಡು ಮದುವೆ ಮತ್ತಿತರ ಸಮಾರಂಭಗಳಿಗೆ ಅಥವಾ ದೂರ ಪ್ರವಾಸ, ಗುಂಪಿನಲ್ಲಿ ಪ್ರಯಾಣ ಮಾಡಿದಾಗ, ಪದೇ ಪದೇ ಹಣ ಹೊರತೆಗೆಯುವ ಪ್ರಸಂಗ ಬರುತ್ತವೆ. ಪುನ: ಪುನ: ಎಣಿಸುವುದಲ್ಲದೇ, ಎಣಿಕೆ ತಪ್ಪುಗಳು, ಮೋಸ, ಕಳ್ಳತನ, ಖೋಟಾ ನೋಟು, ಹರಿದ ನೋಟು, ಮರೆತು ಬರುವುದು, ಇತ್ಯಾದಿಗಳೂ ಕೂಡ ಘಟಿಸುವುದು ಮಾಮೂಲು.ನಗದು ಹಣದ ಜವಾಬ್ದಾರಿ ಹೊತ್ತಿರುವವರಿಗೆ ಆತಂಕಗಳೇ ಜಾಸ್ತಿ! ಸ್ವಾಭಾವಿಕವಾಗಿ, ನಗದು ಹಣದ ಬಳಕೆ ಹೆಚ್ಚಿರುವಾಗ ವಿವಿಧ ರೀತಿಯ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತವೆ. ಎಣಿಕೆ ತಪ್ಪುಗಳು, ಮೋಸ, ಕಳ್ಳತನ ಹಾಗೂ ಇತರ ರೀತಿಯ ಅಪರಾಧಗಳಿಂದ ತಪ್ಪಿಸಿಕೊಳ್ಳಲು ಸುಭದ್ರತೆ ಕ್ರಮಗಳು ಇವೆಲ್ಲದರಿಂದ ವೆಚ್ಚಗಳೂ ಹೆಚ್ಚಾಗುತ್ತವೆ ಹಾಗೂ ವ್ಯಕ್ತಿಗಳ ಉತ್ಪಾದನಾ ಸಾಮರ್ಥ್ಯಗಳು ಕುಂಠಿತಗೊಳ್ಳುತ್ತವೆ. ನಗದು ನೋಟುಗಳನ್ನು ಎಲ್ಲರೂ ಬಳಸುವ ಅವಕಾಶವಿರುವ ಕಾರಣದಿಂದ ನಗದು ನೋಟುಗಳನ್ನು ಎಲ್ಲಾ ರೀತಿಯ ಪರಿಸರಗಳಲ್ಲಿ ಬಳಸಲಾಗುತ್ತಿದ್ದು ಅನೈರ್ಮಲ್ಯಕರ ವಾತಾವರಣಗಳಲ್ಲಿ ಉಪಯೋಗಿಸಲಾಗಿರುವ ನಗದು ನೋಟುಗಳಿಂದ ಸೋಂಕು ರೋಗಗಳು

ಹರಡಬಹುದಾಗಿರುತ್ತದೆ ಎಂದು ಕೆಲ ವೈದ್ಯರು ಅಭಿಪ್ರಾಯಪಡುತ್ತಾರೆ.

ಆರ್ಥಿಕ ಮಾರುಕಟ್ಟೆಯಲ್ಲಿ ಅನೂಚಾನವಾಗಿ ಸಕ್ರಿಯ ಚಟುವಟಿಕೆಗಳು ನಡೆಯುತ್ತಲಿರುತ್ತಿದ್ದು ಸೇವೆಗಳು ಸುಧಾರಿತಗೊಳ್ಳುತ್ತಿರುತ್ತವೆ. ಜೊತೆಗೆ ತಂತ್ರಜ್ಞಾನದ ಬಳಕೆ ಮಾಡಿದಲ್ಲಿ ಆರ್ಥಿಕ ಮಾರುಕಟ್ಟೆಯಲ್ಲಿನ ಸೇವೆಗಳ ಗುಣಮಟ್ಟಗಳು ಉತ್ತಮಗೊಳ್ಳುತ್ತವೆ. ಇಂದಿನ 21ನೇ ಶತಮಾನದಲ್ಲಿಜಾಗತಿಕರಣದ ಯುಗದಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಬಳಸುತ್ತಿರುವ ಈ ಕಾಲಘಟ್ಟದಲ್ಲಿ ಹಣಕಾಸು ವಹಿವಾಟುಗಳನ್ನು ನಡೆಸಲು ನಗದು ಹಣದ ಬಳಕೆಗೆ ಪರ್ಯಾಯವಾಗಿ ಹಲವಾರು ಉತ್ತಮ ಹಾಗೂ ಸುರಕ್ಷಿತಮಾರ್ಗಗಳು ಲಭ್ಯವಿರುತ್ತವೆ. ಈ ರೀತಿಯ ಪರ್ಯಾಯ ಮಾರ್ಗಗಳನ್ನು ಬಳಸಿಕೊಳ್ಳಲು ಸರಳ ವಿಧಾನಗಳನ್ನು ರೂಪಿಸಿರಲಾಗುತ್ತದೆ. ಹೀಗಾಗಿ ಹಣ ಪಾವತಿ ಮಾಡುವ ಹಾಗೂ ಹಣ ಪಡೆಯುವ ಚಟುವಟಿಕೆಗಳನ್ನು ತಂತ್ರಜ್ಞಾನದ ಮೂಲಕ ಸುಲಭವಾಗಿ ಮಾಡುವ ಅವಕಾಶಗಳು ಬಹಳಷ್ಟಿವೆ.

ನಗದು ರಹಿತ ವ್ಯವಹಾರಗಳನ್ನು ನಡೆಸಲು ಸಿದ್ಧವಿರುವ ಪರ್ಯಾಯಮಾರ್ಗಗಳೆಂದರೆ

1. ಬ್ಯಾಂಕ್ ಖಾತೆ ತೆರೆಯುವುದು
2. ಚೆಕ್ ಬಳಕೆ
3. ಇಸಿಎಸ್/ಎನ್ ಈ ಎಫ್ ಟಿ/ ಆರ್ ಟಿ ಜಿ ಎಸ್
4. ಕಾರ್ಡ ಬಳಕೆ– ಡೆಬಿಟ್/ಕ್ರೆಡಿಟ್/ ಖಾಸಗಿ
5. ಮುಂಗಡ ಪಾವತಿ
6. ಆನ್ ಲೈನ್ ಬ್ಯಾಂಕ್ ಖಾತೆ
7. ಮೊಬೈಲ್ ದೂರವಾಣಿ ಬಳಸಿಕೊಂಡು ಬ್ಯಾಂಕ್ ಖಾತೆಯ ವ್ಯವಹಾರಗಳು ಮತ್ತು ಈ–ವ್ಯಾಲೆಟ್ ವ್ಯವಹಾರಗಳು, ಆಪ್ ಪಾವತಿಗಳು, ಐಎಂಪಿಎಸ್,ಭೀಮ್, ಯುಪಿಐ ಇತ್ಯಾದಿ ಹಣದ ರವಾನೆಗಳು

ಈ ಮೇಲ್ಕಂಡ ಸೌಲಭ್ಯಗಳ ಬಗ್ಗೆ ತರಬೇತಿ ಪಡೆದುಕೊಂಡು ಯಾವುದೇ ವಯಸ್ಸಿನ, ಯಾವುದೇ ರೀತಿಯ ವಿದ್ಯಾಭ್ಯಾಸ ಹಿನ್ನಲೆಯಲ್ಲಿರುವ ವ್ಯಕ್ತಿಗಳು ಯಾವುದೇ ಪ್ರದೇಶದಿಂದ ಬಹುತೇಕ ವಾಣಿಜ್ಯ ವ್ಯವಹಾರಗಳನ್ನು ನಗದು ರಹಿತವಾಗಿ ಸುಲಭವಾಗಿ ನಡೆಸಬಹುದಾಗಿರುತ್ತದೆ.

ನಮ್ಮ ದೇಶದಲ್ಲಿ ವೈವಿಧ್ಯತೆಗಳು ಹೆಚ್ಚಿರುವಾಗ ಹಾಗೂ ನಮ್ಮ ಜೀವನದ ಶೈಲಿಯಲ್ಲಿ ವೈವಿಧ್ಯತೆಗಳು ಸಾಕಷ್ಟು ತುಂಬಿರುವಾಗ ನಮ್ಮ ವ್ಯವಹಾರಗಳನ್ನು ಮಾಡುವಲ್ಲಿ ಹಲವು ರೀತಿಯ ಅವಕಾಶಗಳು ಇರುವ ಸ್ವಾತಂತ್ರ್ಯವಿರುವುದು ಅನಿರ್ವಾಯ ಎಂಬುದನ್ನು ಮರೆಯಬಾರದು. ಹೀಗಾಗಿ ಯಾವ ಯಾವ ರೀತಿಯ ವ್ಯವಹಾರಗಳನ್ನು ಯಾವ ರೀತಿಯ ಸೌಲಭ್ಯಗಳನ್ನು ಬಳಸಿಕೊಂಡು ನಗದು ರಹಿತವಾಗಿ ನಡೆಸಬೇಕು ಎಂಬುದರ ಬಗ್ಗೆ ಸ್ವಲ್ಪ ಮಟ್ಟಿನ ಸ್ಪಷ್ಟತೆ ಹೊಂದಿರುವುದು ಸೂಕ್ತ. ಪ್ರತಿಯೊಬ್ಬ ವ್ಯಕ್ತಿಯ ಹಣಕಾಸು ವ್ಯವಹಾರಗಳು, ಅವುಗಳ ಗಾತ್ರ ಹಾಗೂ ಪುನರಾವರ್ತನೆ, ವ್ಯವಹಾರದ ಸ್ವರೂಪ, ಉದ್ದೇಶ ಹಾಗೂ ಪ್ರದೇಶಗಳ ಆಧಾರದ ಮೇಲೆ ನಗದು ರಹಿತ ಪಾವತಿ ಮಾಡುವ ನೀತಿಯನ್ನು ರೂಪಿಸಿಕೊಳ್ಳುವುದು ಅನುಕೂಲಕರ. ಈ ರೀತಿಯ ನೀತಿಯನ್ನು ಪ್ರತಿ ಕುಟುಂಬವೂ ಹೊಂದಿರಬೇಕು ಹಾಗೂ ಅದನ್ನು ಪಾಲಿಸಿಕೊಂಡು ಬರುವುದು ಲಾಭದಾಯಕವಾಗಿರುತ್ತದೆ. ಉದಾಹರಣೆಗೆ ಇಂತಹ ನೀತಿಯಲ್ಲಿ ಅಳವಡಿಕೊಳ್ಳಬೇಕಾದ ಪ್ರಮುಖ ಅಂಶಗಳು ಈ ಮುಂದಿನಂತೆ ಇರಬಹುದು:

1. ಯಾವ ರೀತಿಯ ಪಾವತಿಗಳನ್ನು ನಗದು ರಹಿತವಾಗಿ ಮಾಡಬೇಕು
2. ನಗದುರಹಿತ ವ್ಯವಹಾರಗಳನ್ನು ನಡೆಸಲು ಯಾವ ಖಾತೆಗಳಿಗೆ ಪ್ರತ್ಯೇಕ ಸೌಲಭ್ಯಗಳನ್ನು ಅಳವಡಿಸಿಕೊಳ್ಳಬೇಕು
3. ನಗದು ರೂಪದಲ್ಲಿ ಪಾವತಿಸಲು ಆಯ್ಕೆ ಮಾಡಿಕೊಂಡಿರುವ ಮಿತಿ ಎಷ್ಟು (ಉದಾ: ರೂ ಸಾವಿರ ಕ್ಕಿಂತ ಹೆಚ್ಚಿನ ಪಾವತಿಗಳನ್ನು ನಗದು ರಹಿತ ಮಾರ್ಗಗಳಲ್ಲಿ ಮಾತ್ರ ಮಾಡುವುದು)
4. ಎಲ್ಲಾ ರೀತಿಯ ಶುಲ್ಕಗಳು, ತೆರಿಗೆಗಳು, ಶಾಲಾ ಕಾಲೇಜು ಫೀಗಳು, ವಿದ್ಯುತ್, ನೀರು, ವಾಹನ ಇಂಧನಗಳು, ಪ್ರಯಾಣ ಟಿಕೆಟ್ ಗಳು ಇತ್ಯಾದಿಗಳನ್ನು ನಗದು ರಹಿತ ರೂಪದಲ್ಲಿಯೇ ಮಾಡುವುದು
5. ನಿರಕ್ಷರಿಗಳಿಗೆ, ಮನೆಗೆಲಸದವರಿಗೆ, ಸಣ್ಣ ಮೊತ್ತದ ವಹಿವಾಟುಗಳಿಗೆ



ಪಾವತಿ ಮಾಡುತ್ತಿದ್ದಲ್ಲಿ ನಗದು ಹಣದ ಬಳಕೆ ಮಾಡುವುದು.
6. ನಗದು ರಹಿತ ಪಾವತಿಗಳನ್ನು ಮಾಡುವುದು ಸುರಕ್ಷಿತವಲ್ಲ ಎಂಬ ಗುಮಾನಿಗಳಿದ್ದಲ್ಲಿ ನಗದು ರೂಪದಲ್ಲಿಯೇ ವಹಿವಾಟುಗಳನ್ನು ನಡೆಸುವುದು

ನಗದು ಹಣದ ಪಾವತಿ ಪಡೆದಾಗ ಅಥವಾ ಪಾವತಿ ಮಾಡಿದಾಗ ನಮಗೆ ನೇರವಾಗಿ ಯಾವುದೇ ಶುಲ್ಕ ಪಾವತಿ ಮಾಡುವ ಪರಿಸ್ಥಿತಿ ಕಂಡುಬರುವುದಿಲ್ಲ. ಆದರೆ, ಒಂದು ಲೆಕ್ಕಾಚಾರದ ಪ್ರಕಾರ ಒಬ್ಬ ಗ್ರಾಹಕನಿಗೆ ನಗದು ಹಣದಸ್ವೀಕೃತಿ/ಪಾವತಿ ಸೌಲಭ್ಯ ನೀಡಲು ಯಾವುದೇ ಬ್ಯಾಂಕ್ ಸರಾಸರಿಯಾಗಿ ರೂ.60 ಗಳಷ್ಟು ವೆಚ್ಚವನ್ನು ಭರಿಸಬೇಕಾಗುತ್ತದೆ. ಬ್ಯಾಂಕ್ ಗಳು ವಾಣಿಜ್ಯ ಸಂಸ್ಥೆಗಳಾಗಿರುವುದರಿಂದ ಈ ವೆಚ್ಚವನ್ನು ನೇರವಾಗಿ ಅಥವಾ ಪರೋಕ್ಷವಾಗಿ ಗ್ರಾಹಕರಿಗೆ ವರ್ಗಾಯಿಸುತ್ತವೆ. ಕೆಲವು ಬ್ಯಾಂಕ್‌ಗಳು ನಗದು ವ್ಯವಹಾರಗಳಿಗೆ ನೇರವಾಗಿ ಶುಲ್ಕಗಳನ್ನು ವಿಧಿಸುತ್ತಿವೆ. ನಗದು ವಹಿವಾಟುಗಳು ಕಡಿಮೆಗೊಂಡಲ್ಲಿ ಬ್ಯಾಂಕ್ ಭರಿಸಬೇಕಾದ ವೆಚ್ಚಗಳು ಕಡಿತಗೊಂಡು ಯಾವುದೋ ಒಂದು ರೂಪದಲ್ಲಿ ಗ್ರಾಹಕರಿಗೆ ಲಾಭವಾಗುತ್ತದೆ. ಕೆಲವು ನಗದುರಹಿತ ವಹಿವಾಟುಗಳನ್ನು ಮಾಡುವಲ್ಲಿ ಶುಲ್ಕಗಳನ್ನು ಪಾವತಿಸಬೇಕಾದ ಸನ್ನಿವೇಶಗಳು ಒದಗಿಬರಬಹುದು. ಈ ಕಾರಣವನ್ನು ಮುಂದೊಡ್ಡಿ ಹಲವಾರು ಜನರು ನಗದುರಹಿತ ವಹಿವಾಟುಗಳನ್ನು ನಡೆಸಲು ಹಿಂಜರಿಯುತ್ತಾರೆ. ಆದರೆ ಚಿತ್ರಗಳಲ್ಲಿ ತೋರಿಸಿದಂತೆ, ನಗದು ಹಣವನ್ನು ಬಳಸುವಲ್ಲಿ ಆಗಬಹುದಾದ ದೈಹಿಕ ಶ್ರಮ, ವ್ಯಯವಾಗುವ ಸಮಯ, ಉತ್ಪಾದನಾ ನಷ್ಟ, ಎಣಿಕೆ ತಪ್ಪುಗಳು, ಹಾಗೂ ಎದುರಿಸಬೇಕಾದ ಆಪತ್ತುಗಳು ಇವುಗಳಿಗೆ ಹೋಲಿಸಿದರೆ ಹಾಗೂ ಹೇಗಿದ್ದರೂ ಬ್ಯಾಂಕ್ ಗಳು ನಗದು ವ್ಯವಹಾರಗಳ ವೆಚ್ಚಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಗ್ರಾಹಕರಿಗೆ

ವರ್ಗಾಯಿಸುತ್ತಿರುವಾಗ ನಗದುರಹಿತ ಪರ್ಯಾಯ ಮಾರ್ಗಗಳಲ್ಲಿ ಭರಿಸಬೇಕಾದ ಶುಲ್ಕ/ವೆಚ್ಚಗಳು ಕಡಿಮೆ ಎಂತಲೇ ಹೇಳಬಹುದು. ಜೊತೆಗೆ ಹೆಚ್ಚು ಜನರು ನಗದುರಹಿತ ವ್ಯವಹಾರಗಳನ್ನು ನಡೆಸಲು ಮುಂದೆ ಬಂದಲ್ಲಿ ಶುಲ್ಕಗಳ ದರಗಳು ಕಡಿಮೆಗೊಳ್ಳುತ್ತವೆ. ನಗದು ರೂಪದಲ್ಲಿ ವಹಿವಾಟುಗಳನ್ನು ಮಾಡಿದಲ್ಲಿ ಪ್ರತಿ ಹಂತದಲ್ಲಿ ರಸೀದಿಗಳನ್ನು ಪಡೆಯಬೇಕಾಗುತ್ತದೆ ಹಾಗೂ ಪ್ರತಿ ವ್ಯವಹಾರದ ವಿವರಗಳನ್ನು ನೆನಪಿನಲ್ಲಿಟ್ಟುಕೊಂಡು ಕೂಡಲೇ ಪ್ರತ್ಯೇಕ ಖಾತೆ ಕಿರಿದಿ ಪುಸ್ತಕಗಳನ್ನು ಬರೆದುಕೊಂಡು ಕಾಪಾಡಬೇಕಾಗುತ್ತದೆ. ತೆರಿಗೆಗಳನ್ನು ಪಾವತಿಸುವಾಗ ತೆರಿಗೆ ಲೆಕ್ಕಾಚಾರಗಳು ಕ್ಲಿಷ್ಟವಾಗುತ್ತದೆ. ನಗದು ಹಣದ ವ್ಯವಹಾರದ ದಾಖಲೆಗಳನ್ನು ಪುರಾವೆಯಾಗಿಟ್ಟುಕೊಂಡು ದೀರ್ಘ ಕಾಲದವರೆಗೆ ಸಂರಕ್ಷಿಸಿಟ್ಟುಕೊಳ್ಳಬೇಕಾಗುತ್ತದೆ. ನಗದು ರಹಿತ ವ್ಯವಹಾರಗಳನ್ನು ನಡೆಸಿದಾಗ ರಸೀದಿಗಳು ಸ್ವಯಂಚಾಲಿತವಾಗಿ ನಿರ್ಮಾಣಗೊಳ್ಳುತ್ತವೆ ಹಾಗೂ ಪ್ರತಿ ಹಂತದಲ್ಲಿ ಪುರಾವೆಗಳು ಸೃಷ್ಟಿಗೊಂಡು ಪ್ರತ್ಯೇಕ ಪುರಾವೆಗಳ ಅಗತ್ಯವಿರುವುದಿಲ್ಲ. ನಗದು ಹಣದಲ್ಲಿ ನಡೆಸಿದ ವ್ಯವಹಾರಗಳ ಪುರಾವೆಗಳನ್ನು ಕೆಲವು ಬಾರಿ ಸಂಶಯಾತ್ಮಕ ದೃಷ್ಟಿಯಿಂದ ನೋಡುವ ಸಾಧ್ಯತೆಗಳಿರುತ್ತವೆ. ಆದರೆ ನಗದು ರಹಿತ ಪಾವತಿಗಳ ಪುರಾವೆಗಳು ಬಹುತೇಕವಾಗಿ ಖಚಿತ ಪುರಾವೆ ಎಂದು ಮಾನ್ಯಗೊಳ್ಳುತ್ತದೆ. ಯಾವುದೇ ವ್ಯವಸ್ಥೆಗಳನ್ನು ಬಳಸುವಲ್ಲಿ ಹಲವಾರು ತಪ್ಪುಗಳು ಆಗುವುದುಂಟು. ಹೇಗೆನಗದು ಹಣವನ್ನು ಜೋಪಾನವಾಗಿ ಕಾಪಾಡದಿದ್ದಲ್ಲಿ ನಷ್ಟವಾಗುತ್ತದಯೋ, ಅದೇ ರೀತಿಯಲ್ಲಿ ನಗದು ರಹಿತ ವ್ಯವಹಾರಗಳಲ್ಲಿ ಹಲವಾರು ಎಚ್ಚರಿಕೆಗಳನ್ನು ಹೊಂದಿರುವುದು ಅನಿವಾರ್ಯ ಎಂಬುದನ್ನು ಅರಿತಿರಬೇಕು. ಉದಾಹರಣೆಗೆ, ಚೆಕ್ ವ್ಯವಹಾರಗಳಲ್ಲಿ, ಚೆಕ್ ಪುಸ್ತಕಗಳನ್ನು ಸುರಕ್ಷಿತ ಸ್ಥಳಗಳಲ್ಲಿ ಕಾಪಾಡಬೇಕು, ಖಾಲಿ ಚೆಕ್ ಹಾಳೆಗಳಲ್ಲಿ ವಿನಾಕಾರಣ ಸಹಿ ಹಾಕಿರಬಾರದು, ಚೆಕ್‌ನ್ನು ಹಸ್ತಾಂತರಗೊಳಿಸುವ ಮುನ್ನ ಮಾತ್ರ ಸಹಿ ಹಾಕುವುದು ಉತ್ತಮ ಅಭ್ಯಾಸ. ಅದೇ ರೀತಿ ಅನ್ ಲೈನ್ ವ್ಯವಹಾರಗಳನ್ನು ಮಾಡುವಲ್ಲಿ ನಿಮ್ಮ ಪಾಸ್ ವರ್ಡ್ ನಿಮ್ಮ ಸಹಿ ಇದ್ದಂತೆ. ನಿಮಗೆ ನೀಡಲಾಗಿರುವ ಸೂಚನೆಗಳನ್ನು ಮತ್ತು ನಿಮ್ಮ ಪಾಸ್ ವರ್ಡ್ ಬಗೆಗಿನ ಗೌಪ್ಯತೆಯನ್ನು ಪಾಲಿಸಲೇ ಬೇಕು. ತಾಂತ್ರಿಕ ಕಾರಣಗಳಿಂದ ಕೆಲವೊಮ್ಮೆ ನಷ್ಟವಾದರೂ ಬಹುತೇಕವಾಗಿ ಸ್ವಲ್ಪ ಕಾಲಾನಂತರ ನಷ್ಟಗೊಂಡ ಹಣವನ್ನು ಹಿಂಪಡೆಯಬಹುದಾಗಿರುತ್ತದೆ.

ಪ್ರಪಂಚದಲ್ಲಿ ಸಮಾಜ ಘಾತಕ ಶಕ್ತಿಗಳು ಇರುವುದು ಅನಿರ್ವಾಯ ಸತ್ಯ. ಯಾವುದೇ ಸಮಾಜದಲ್ಲಿ ಕಳ್ಳತನ ಹಾಸು ಹೊಕ್ಕಾಗಿ ಇರುವುದನ್ನು ಅಲ್ಲಗೆಳೆಯಲು ಸಾಧ್ಯವಿಲ್ಲದ ಕಾರಣದಿಂದ ನಮ್ಮ ಹಣವನ್ನು ಕದಿಯಲು ಒಬ್ಬರಲ್ಲ ಒಬ್ಬರು ಪ್ರಯತ್ನಿಸುತ್ತಿರುತ್ತಾರೆ. ಅತ್ಯಾಧುನಿಕ ತಂತ್ರಜ್ಞಾನವಿದ್ದರೂ ನಾವು ಸಂಪೂರ್ಣವಾಗಿ ಸುರಕ್ಷಿತರಲ್ಲ ಎಂಬುದು ಸತ್ಯ. ಸೈಬರ್ ಅಪರಾಧಗಳ ಆಪತ್ತುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮ ಮೇಲಿರುತ್ತದೆ ಎಂಬುದನ್ನು ಮರೆಯಬಾರದು. ನಗದು ಹಣವನ್ನು ಹೊಂದಿದ್ದಲ್ಲಿ ಅದನ್ನು ಕದಿಯಲು ಕಳ್ಳರು ಪ್ರಯತ್ನಪಡುವ ಹಾಗೆಯೇ ನಿಮ್ಮ ಖಾತೆಯಲ್ಲಿನ ಹಣವನ್ನು ಕದಿಯಲು ಸೈಬರ್ ಅಪರಾಧಿಗಳು ಸದಾಕಾಲ ಪ್ರಯತ್ನಿಸುತ್ತಿರುತ್ತಾರೆ ಎಂಬುದನ್ನು ಎಂದೂ ಮರೆಯಬಾರದು. ನೀವು ಬಳಸುವ ಪ್ರತಿಯೊಂದು ಆನ್ ಲೈನ್ ಸೇವೆಯ ಬಗ್ಗೆ, ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳ ಬಗ್ಗೆ ವಿವರವಾದ ಸೂಚನೆಗಳನ್ನು ನೀಡಲಾಗಿರುತ್ತದೆ. ಅವುಗಳನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬರುವುದು ನಿಮ್ಮ ಕರ್ತವ್ಯವಾಗಿರುತ್ತದೆ. ನಿಮ್ಮ ಹಣವನ್ನು ರಕ್ಷಿಸುವ ಪ್ರಾಥಮಿಕ ಹೊಣೆಯನ್ನು ಬ್ಯಾಂಕ್‌ಗಳು ವಹಿಸಿಕೊಂಡಿರುವ ಕಾರಣದಿಂದ ಸೈಬರ್ ಅಪರಾಧಗಳನ್ನು ತಡೆಗಟ್ಟಲು ನಿಮಗೆ ಅವರ ಬೆಂಬಲವಿರುತ್ತದೆ.ಈ ನಿಟ್ಟಿನಲ್ಲಿ ಅನುಭವಿಗಳ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಬೇಕು. ಮೊದಮೊದಲಿಗೆ ಆದಷ್ಟು ಮಟ್ಟಿಗೆ ಕಡಿಮೆ ಮೊತ್ತದ ವಹಿವಾಟುಗಳನ್ನು ಮಾತ್ರ ಮಾಡಿ ಅನುಭವ ಪಡೆದು ನಂತರ ಹೆಚ್ಚಿನ ಮೊತ್ತದ ಮತ್ತು ಬೇರೆ ರೀತಿಯ ವಹಿವಾಟುಗಳನ್ನು ನಡೆಸುವುದು ಉತ್ತಮ. ಭಾರತವು ಸಾಧ್ಯವಾದ ಮಟ್ಟಿಗೆ ನಗದು ರಹಿತ ದೇಶವಾಗಲು ಕೇಂದ್ರ ಸರ್ಕಾರದ ಮಟ್ಟದಲ್ಲಿ ದೊಡ್ಡ ಪ್ರಮಾಣದ ಪ್ರಯತ್ನಗಳು ನಡೆಯುತ್ತಿವೆ. ಈಗ ಪ್ರತಿಯೊಂದು ರಾಜ್ಯಕ್ಕೂ, ಪ್ರತಿಯೊಂದು ಬ್ಯಾಂಕ್ ಗೂ ಗುರಿಗಳನ್ನು ನೀಡಿ ನಗದು ರಹಿತ ಸಮಾಜವನ್ನು ನಿರ್ಮಾಣ ಮಾಡುವ ಉದ್ದೇಶವನ್ನು ಸಾಕಾರಗೊಳಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ನಗದು ರಹಿತ ವಹಿವಾಟುಗಳ ಸೌಲಭ್ಯಗಳನ್ನು ಸ್ಥಾಪಿಸುವಲ್ಲಿ ಕರ್ನಾಟಕ ರಾಜ್ಯದ ಪ್ರಗತಿಯತ್ತ ಗಮನ ಹರಿಸೋಣ:( ಲಭ್ಯವಿರುವ ಪ್ರಕಟಿತ ಮಾಹಿತಿ ಆಧಾರದ ಮೇಲೆ)

ಕ್ರಿಸಿಲ್ ಸಂಸ್ಥೆಯು ಹಣಕಾಸು ಸೇರ್ಪಡೆಯ ಮಾಪನ ಮಾಡುವ ಕ್ರಿಸಿಲ್ ಇನ್ ಕ್ಲೂಸಿವ್ ಇಂಡೆಕ್ಸ್ ಎಂಬುವ ಒಂದು ಸೂಚ್ಯಂಕವನ್ನು ಸಿದ್ಧಗೊಳಿಸಿರುತ್ತದೆ. ಅದರ ಪ್ರಕಾರ,

1. 31 ನೇ ಮಾರ್ಚ 2012ರಲ್ಲಿ ಇದ್ದಂತೆ ಕರ್ನಾಟಕವು 9ನೇ ಸ್ಥಾನವನ್ನು ಪಡೆದಿದ್ದು ರಾಷ್ಟ್ರೀಯ ಸರಾಸರಿ 42.8 ಇರುವೆಡೆ ಕರ್ನಾಟಕವು 61.4 ಅಂಕಗಳನ್ನು ಗಳಿಸಿರುತ್ತದೆ. ಈ ಸೂಚ್ಯಂಕವು ಅನುಸರಿಸುವ ಮೂರು ಮಾನದಂಡಗಳಾದ ಬ್ಯಾಂಕ್ ರಹಿತ ಪ್ರದೇಶಗಳಲ್ಲಿ ಬ್ಯಾಂಕ್ ಶಾಖೆಗಳನ್ನು ಸ್ಥಾಪಿಸಿರುವುದು, ಠೇವಣಿ ಸಂಗ್ರಹಣೆ ಹಾಗೂ ಸಾಲ ನೀಡುವಿಕೆ ಮಟ್ಟ ಈ ಮೂರು ಮಾನದಂಡಗಳಲ್ಲಿಯೂ ಕರ್ನಾಟಕ ಉತ್ತಮ ಅಂಕಗಳನ್ನು ಪಡೆದಿರುತ್ತದೆ.
2. ಕರ್ನಾಟಕದ ಉಡುಪಿ ಜಿಲ್ಲೆಯ 158 ಗ್ರಾಮ ಪಂಚಾಯಿತಿಗಳು ನಗದುರಹಿತ ವ್ಯವಹಾರಗಳನ್ನು ಮಾಡಲು ಯೋಜನೆಯನ್ನು ಸಿದ್ಧಗೊಳಿಸಲಾಗಿದೆ.
3. ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನ ಐದು ಹಳ್ಳಿಗಳಲ್ಲಿ ಪ್ರಾಯೋಗಿಕ ಕಾರ್ಯ ನಡೆಯುತ್ತಿದೆ.
4. ರಾಮನಗರ ಜಿಲ್ಲೆಯ ನಾಲ್ಕು ಗ್ರಾಮಗಳ ಎಲ್ಲ ವಹಿವಾಟುಗಳನ್ನು ನಗದುರಹಿತಗೊಳಿಸುವ ಕಾರ್ಯ ಪ್ರಾರಂಭಗೊಂಡಿದೆ.
5. ಮಂಡ್ಯ ಜಿಲ್ಲೆಯ ಎಂಟು ಗ್ರಾಮಗಳ ಎಲ್ಲ ವಹಿವಾಟುಗಳನ್ನು ನಗದು ರಹಿತಗೊಳಿಸುವ ಕಾರ್ಯ ಪ್ರಾರಂಭಗೊಂಡಿದೆ.
6. ಕರ್ನಾಟಕದ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ ರಾಜ್ ಇಲಾಖೆಯ ಹೇಳಿಕೆ ಪ್ರಕಾರ ಮಾರ್ಚ್ 2017ರ ವೇಳೆಗೆ ಕನಿಷ್ಠ 100 ಗ್ರಾಮಗಳು ನಗದುರಹಿತವಾಗುತ್ತವೆ

**(51ನೇ ಪುಟಕ್ಕೆ)**

# ಗಮನ ಸೆಳೆದಿರುವ ಬೆಂಗಳೂರು ಒನ್

* ಹರತೀಸುತ

ಬೆಂಗಳೂರು ಒನ್ ಕೇಂದ್ರಗಳು ಸ್ಥಾಪನೆಯಾದಾಗಿನಿಂದಲೂ ಕಾರ್ಡ್‌ಗಳನ್ನು ಬಳಸುವ ಡಿಜಿಟಲ್ ವಹಿವಾಟು ನಡೆಸುತ್ತ ಬರುತ್ತಿವೆ. ಅದು ಸಹ ಗ್ರಾಹಕರಿಗೆ ಸಾಕಷ್ಟು ಅನುಕೂಲವನ್ನೇ ತಂದಿದೆ. ನೋಟು ಅಮಾನ್ಯ ನಂತರವಂತೂ ಬೆಂಗಳೂರು ಒನ್ ಕೇಂದ್ರಗಳಲ್ಲಿ ಕ್ಯಾಷ್‌ಲೆಸ್ ವಹಿವಾಟು ಇನ್ನಷ್ಟು ಹೆಚ್ಚಾಗಿದೆ.

ವಿಶ್ವದಲ್ಲಿಯೇ ಬೆಂಗಳೂರು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಕ್ರಿಯಾಶೀಲ ನಗರವೆಂಬ ಹೆಸರಿಗೆ ಪಾತ್ರವಾಗಿದೆ. ಬೆಂಗಳೂರು ನಗರಕ್ಕೆ ಈ ಹೆಸರು ಬರಲು ಬಹುಮುಖ್ಯ ಕಾರಣವೆಂದರೆ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಇಲ್ಲಿನ ಸರ್ಕಾರಗಳು ನೀಡಿರುವ ಆದ್ಯತೆ ಪ್ರಮುಖವಾದದ್ದು. ಎಂಭತ್ತರ ದಶಕದಿಂದಲೂ ಸರ್ಕಾರಗಳು ಹಾಕಿದ ಭದ್ರಬುನಾದಿ ಬೆಂಗಳೂರಿಗೆ ಇಂತಹ ಹೆಸರು ಬರಲು ಸಾಧ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಅವಕಾಶಗಳನ್ನು ಬಳಸಿಕೊಂಡೇ ಇ ಆಡಳಿತಕ್ಕೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ.

ಕೇಂದ್ರ ಸರ್ಕಾರ 1000 ಹಾಗೂ 500 ರೂ. ಮುಖಬೆಲೆಯ ನೋಟು ಅಮಾನ್ಯಗೊಳಿಸಿದ ನಂತರ ಇ ಆಡಳಿತವನ್ನು ಬಳಸಿಕೊಂಡು ಎಲ್ಲಾ ಕಡೆಗಳಲ್ಲಿ ನಗದು ರಹಿತ (ಕ್ಯಾಶ್ ಲೆಸ್) ವ್ಯವಹಾರ ನಡೆಸಲು ಉದ್ದೇಶಿಸಿದೆ. ಆ ನಿಟ್ಟಿನಲ್ಲಿಯೇ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ. ಆದರೆ ರಾಜ್ಯ ಸರ್ಕಾರ ಹತ್ತು ವರ್ಷಗಳ ಹಿಂದೆಯೇ ಜನ ಸಾಮಾನ್ಯರಿಗೆ ಅಗತ್ಯವಾದ ಸೇವೆಗಳನ್ನು ಇ ಆಡಳಿತದ ಮೂಲಕ ನೀಡುತ್ತ ಬರುತ್ತಿದೆ. ಅದಕ್ಕಾಗಿಯೇ ಸ್ಥಾಪನೆಗೊಂಡಿದ್ದು "ಬೆಂಗಳೂರು ಒನ್'.

ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಈ ನಗರದಲ್ಲಿ ಜನರ ಸಮಯ ಸಹ ಅತ್ಯಂತ ಅಮೂಲ್ಯವಾದದ್ದು. ಸಹ ಬಿಲ್‌ಗಳನ್ನು ಪಾವತಿ ಮಾಡುವುದಕ್ಕೋ, ಕಾಲೇಜುಗಳ ಶುಲ್ಕ ತುಂಬುವುದಕ್ಕೋ, ಅರ್ಜಿ ಸಲ್ಲಿಸುವುದಕ್ಕೋ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಂತು ಸಮಯ ವ್ಯರ್ಥ ಮಾಡಿಕೊಳ್ಳುವುದು ಬೇಡವೆಂಬ ಕಾರಣಕ್ಕಾಗಿಯೇ ಬೆಂಗಳೂರು ಒನ್ ಕೇಂದ್ರಗಳು ತಲೆ ಎತ್ತಿವೆ. ವಿದ್ಯುತ್, ದೂರವಾಣಿ, ನೀರಿನ ಬಿಲ್‌ಗಳ ಪಾವತಿ, ಬಸ್ಸು, ರೈಲ್ವೆ, ವಿಮಾನ ಟಿಕೆಟ್‌ಗಳನ್ನು ಬುಕ್ ಮಾಡುವುದು ಸೇರಿದಂತೆ ಅನೇಕ ಕಾರ್ಯಗಳನ್ನು ಈ ಬೆಂಗಳೂರು ಒನ್ ಕೇಂದ್ರಗಳ ಮೂಲಕವೇ ಮಾಡಬಹುದಾಗಿದೆ.

ರಾಜ್ಯ ಸರ್ಕಾರ 2005–06ರಲ್ಲಿ ಬೆಂಗಳೂರು ಒನ್ ಸ್ಥಾಪನೆ ಮಾಡಿತು. ಮಾಹಿತಿ, ಸಂವಹನ, ತಂತ್ರಜ್ಞಾನ (ಐಸಿಟಿ) ಬಳಸಿಕೊಂಡು ಒಂದೇ ನಿಲ್ದಾಣದಲ್ಲಿ ಹಲವು ಸೇವೆಗಳೆಂಬ ಧ್ಯೇಯೋದ್ದೇಶವನ್ನು ಹೊಂದಿ ಈ ಯೋಜನೆ ಆರಂಭಿಸಲಾಯಿತು. ಕಳೆದ ಹದಿಮೂರು ವರ್ಷಗಳ ಅವಧಿಯಲ್ಲಿ ಕೋಟ್ಯಾಂತರ ಜನ ಇದರ ಸದುಪಯೋಗ ಪಡೆದಿರುವುದರಿಂದ ಇದೊಂದು ಸಾರ್ಥಕ ಯೋಜನೆಯೂ ಹೌದು.

### ಧ್ಯೇಯೋದ್ದೇಶಗಳೇನು?

ಬೆಂಗಳೂರು ಒನ್ ಕೇಂದ್ರಗಳನ್ನು ಕೆಲವೊಂದು ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡು ಆರಂಭ ಮಾಡಲಾಗಿದೆ. ಅವುಗಳೆಂದರೆ:

* ಸಾರ್ವಜನಿಕರಿಗೆ ಪರಿಣಾಮಕಾರಿ–ಯಾದ ಹಾಗೂ ಅನುಕೂಲಕರವಾದ ಸೇವೆ ದೊರಕಬೇಕು.
* ಇಡೀ ನಗರದಲ್ಲಿ ಸೇವೆ ದೊರಕುವಂತಿರಬೇಕು.
* ಸಾರ್ವಜನಿಕರಿಗೆ ದೊರಕುವ ಸೇವೆ ಪಾರದರ್ಶಕವಾಗಿರಬೇಕು, ಉತ್ತರದಾಯಿತ್ವ ಸಹ ಇರಬೇಕು
* ಕಡಿಮೆ ವೆಚ್ಚದಲ್ಲಿ ಉತ್ತಮ ಸೇವೆ ದೊರಕುವಂತಿರಬೇಕು.

* ಹಿರಿಯ ಪತ್ರಕರ್ತರು.

* ಸಕಾಲದಲ್ಲಿ ಉತ್ತಮ ಸೇವೆ ದೊರಕಬೇಕು.

ಈ ಮಹತ್ತರವಾದ ಉದ್ದೇಶಗಳಿಗೆ ಎಲ್ಲಿಯೂ ಚ್ಯುತಿ ಬಾರದ ರೀತಿಯಲ್ಲಿ ಬೆಂಗಳೂರು ಒನ್ ಕೇಂದ್ರಗಳು ಕಾರ್ಯ ನಿರ್ವಹಣೆ ಮಾಡುತ್ತ ಬರುತ್ತಿವೆ. ಸರ್ಕಾರದ ಇ ಆಡಳಿತ ಇಲಾಖೆ ಮೇಲ್ವಿಚಾರಣೆ ಮಾಡುತ್ತ ಬರುತ್ತಿದೆ.

**ಎರಡು ರೀತಿಯ ಸೇವೆ**

ಬೆಂಗಳೂರು ಒನ್ ಕೇಂದ್ರಗಳು ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ನಡೆಯುತ್ತಿದ್ದು ಸಾರ್ವಜನಿಕರಿಗೆ ಇಲ್ಲಿ ಎರಡು ರೀತಿಯ ಸೇವೆಯನ್ನು ನೀಡಲಾಗುತ್ತದೆ. ಮೊದಲನೆಯದು ಸರ್ಕಾರದ ಸೇವೆಗಳಾದರೆ (ಜಿ2ಸಿ), ಮತ್ತೊಂದು ಖಾಸಗಿ ಸಂಸ್ಥೆಗಳಿಗೆ ಸೇರಿದ ಸೇವೆಗಳನ್ನು (ಬಿ2ಸಿ) ನೀಡುವುದಾಗಿದೆ. ಸರ್ಕಾರ ಹಾಗೂ ಖಾಸಗಿಯವರಿಂದ ಸಾರ್ವಜನಿಕರಿಗೆ ಯಾವುದೇ ಅಡೆತಡೆ ಇಲ್ಲದೇ ಸೇವೆಯನ್ನು ಒದಗಿಸುವುದು ಸರ್ಕಾರದ ಉದ್ದೇಶವಾಗಿದೆ. ಸಾರ್ವಜನಿಕರು ಅಲೆದಾಡುತ್ತ, ಸರತಿ ಸಾಲಿನಲ್ಲಿ ನಿಂತು ಸಮಯ ವ್ಯರ್ಥ ಮಾಡದೇ ತಾವಿರುವ ಸ್ಥಳಕ್ಕೆ ಹತ್ತಿರದಲ್ಲಿರುವ ಕೇಂದ್ರಗಳಲ್ಲಿ ಸೇವೆಗಳನ್ನು ಬಳಸಿಕೊಳ್ಳುವಂತೆ ಅನುಕೂಲ ಮಾಡಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ಎಷ್ಟರ ಮಟ್ಟಿಗೆ ಅನುಕೂಲವಾಗಿದೆ ಎಂಬುದು ಯಾವುದೇ ಬೆಂಗಳೂರು ಒನ್ ಕೇಂದ್ರಗಳತ್ತ ಹೋದರೆ ಸಾಕು ತಿಳಿಯುತ್ತದೆ.

**ಎಷ್ಟು ಸೇವೆಗಳು ಲಭ್ಯ**

ಬೆಂಗಳೂರು ಒನ್‌ನಲ್ಲಿ ಒಟ್ಟಾರೆ 117 ಸೇವೆಗಳನ್ನು ಒದಗಿಸುವ ಉದ್ದೇಶವಿದೆ. ಸಧ್ಯಕ್ಕೆ 40ಕ್ಕೂ ಹೆಚ್ಚು ಸೇವೆಗಳು ಲಭ್ಯವಾಗುತ್ತವೆ. ಅದರಲ್ಲಿ 29 ಸರ್ಕಾರಿ




ಹಾಗೂ ಇನ್ನುಳಿದವವು ಸೇವೆಗಳು ಖಾಸಗಿ ಸಂಸ್ಥೆಗಳಿಗೆ ಸೇರಿವೆ.

ಹದಿಮೂರು ವರ್ಷಗಳ ಅವಧಿಯಲ್ಲಿ ಸರ್ಕಾರದ ಈ ಯೋಜನೆಯಲ್ಲಿ 2000 ಕೋಟಿ ರೂ.ಗಳಿಗೂ ಹೆಚ್ಚಿನ ಮೊತ್ತದ 225 ಲಕ್ಷಕ್ಕೂ ಹೆಚ್ಚಿನ ವಹಿವಾಟುಗಳು ನಡೆದಿವೆ. ಈ ಸಂಖ್ಯೆಗಳನ್ನು ನೋಡಿದರೆ ಸಾಕು ಬೆಂಗಳೂರು ಒನ್ ನಗರದಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ, ಜನರಿಗೆ ಹತ್ತಿರದಲ್ಲಿದೆ ಎಂಬುದು ಅರ್ಥವಾಗುತ್ತದೆ.

**ಎಲ್ಲೆಡೆಯೂ ಲಭ್ಯ**

ಬೆಂಗಳೂರು ಒನ್ ಕೇಂದ್ರಗಳು ನಗರದ ಎಲ್ಲೆಡೆಯೂ ಲಭ್ಯವಾಗುತ್ತವೆ. ಬೆಂಗಳೂರಿನಲ್ಲಿ ನೂರಾರು ಕೇಂದ್ರಗಳನ್ನು ತೆರೆಯಲಾಗಿದೆ. ಆಯಾ ಬಡಾವಣೆಗಳ ಜನಸಂಖ್ಯೆಯನ್ನು ಆಧರಿಸಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತವೆ. ಈ ಕೇಂದ್ರಗಳು ಜನಸ್ನೇಹಿಗಳಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದಲೇ ಜನಪ್ರಿಯತೆ ಹೆಚ್ಚಿದೆ, ಜನಪ್ರಿಯತೆ ಹೆಚ್ಚಾದಂತೆ ಬೆಂಗಳೂರು ನಗರದಲ್ಲಿ ಬೆಂಗಳೂರು ಒನ್ ಕೇಂದ್ರಗಳ ಸಂಖ್ಯೆಯೂ ಹೆಚ್ಚಾಗುತ್ತ ಹೋಗಿದೆ. ಬಳಕೆದಾರರ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. ಅಷ್ಟರ ಮಟ್ಟಿಗೆ ಬೆಂಗಳೂರು ಒನ್ ಜನರಿಗೆ ಹತ್ತಿರದಲ್ಲಿದೆ.

**ಹೇಗಿವೆ ಕೇಂದ್ರಗಳು**

ಬೆಂಗಳೂರು ಒನ್ ಕೇಂದ್ರಗಳ ಸ್ಥಾಪನೆಗೆ ಹೆಚ್ಚಿನ ಹಣವೇನು ಖರ್ಚಾಗುವುದಿಲ್ಲ. ಮೂರು ಅಥವಾ ನಾಲ್ಕು ಕಂಪ್ಯೂಟರ್, ಪ್ರಿಂಟರ್ ಹಾಗೂ ಅದಕ್ಕೆ ಇಂಟರ್‌ನೆಟ್ ಸೌಲಭ್ಯ ಇದ್ದರೆ ಸಾಕು. ಯಾವ ಯಾವ ಸೇವೆಗಳನ್ನು ಸರ್ಕಾರ ನೀಡುತ್ತಿದೆಯೋ ಅಂತಹ ಇಲಾಖೆ ಅಥವಾ ಖಾಸಗಿ ಸಂಸ್ಥೆಗಳ ಜತೆಗೆ ಸಂಪರ್ಕ ಸಾಧಿಸಿ ಜನರಿಗೆ ಅಗತ್ಯವಾದ ಸೇವೆಗಳನ್ನು ನೀಡಲಾಗುತ್ತದೆ.

ಯಾವುದೇ ಕೇಂದ್ರದಲ್ಲಿ ಖಾಯಂ ಸಿಬ್ಬಂದಿ ಏನು ಇರುವುದಿಲ್ಲ. ಹೊರ ಗುತ್ತಿಗೆ ಆಧಾರದಲ್ಲಿಯೇ ನೌಕರರ ನೇಮಕ ಮಾಡಲಾಗಿದೆ. ಪ್ರತಿ ಕೇಂದ್ರದಲ್ಲಿ ಪ್ರತಿ ಪಾಳಿಯಲ್ಲಿ ಕನಿಷ್ಠ 4 ರಿಂದ 5 ಜನ ಕೆಲಸ ಮಾಡುತ್ತಿದ್ದಾರೆ. ದೊಡ್ಡ ಕೇಂದ್ರಗಳಲ್ಲಿ ಈ



ಸಂಖ್ಯೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಅಷ್ಟರ ಮಟ್ಟಿಗೆ ಈ ಕೇಂದ್ರಗಳು ನಿರುದ್ಯೋಗ ಸಮಸ್ಯೆ ಸಹ ನೀಗಿಸಿವೆ.

**ಹೆಚ್ಚುವರಿ ಶುಲ್ಕವೇನು ಇಲ್ಲ**

ಬೆಂಗಳೂರು ಒನ್ ಸೇವೆಯನ್ನು ಬಳಸುವ ಗ್ರಾಹಕರ ಮೇಲೆ ಯಾವುದೇ ಹೆಚ್ಚುವರಿ ಹೊರೆಯೇನು ಬೀಳುವುದಿಲ್ಲ. ಆ ಇಲಾಖೆಗಳು ಹಾಗೂ ಬೆಂಗಳೂರು ಒನ್ ನಡೆಸುವ ಸಂಸ್ಥೆಗಳ ನಡುವೆ ಒಪ್ಪಂದ ಇರುತ್ತದೆ. ಅದರ ಹೊರೆ ಗ್ರಾಹಕರ ಮೇಲೆ ಬೀಳುವುದಿಲ್ಲ. ಯಾವುದೇ ಸೇವಾ ಶುಲ್ಕಗಳನ್ನು ಗ್ರಾಹಕರಿಗೆ ನೇರವಾಗಿ ವಿಧಿಸುವುದಿಲ್ಲ.

**ಏನೇನು ಸೇವೆ ಲಭ್ಯ**

ಬೆಂಗಳೂರು ಒನ್ ಕೇಂದ್ರಕ್ಕೆ ಹೋದರೆ ಸಾಕು ಹತ್ತಾರು ಕಚೇರಿಗೆ ಅಲೆದಾಡುವಂತಹ ಕೆಲಸಗಳನ್ನು ಅಲ್ಲಿಯೇ ಮುಗಿಸಿಕೊಂಡು ಬರಬಹುದು. ಒಂದು ತಿಂಗಳಿನಲ್ಲಿ ಹತ್ತಾರು ಕಚೇರಿಗೆ ಅಲೆದಾಡುವುದು ಒಂದೆಡೆ ಸಿಗುತ್ತದೆ. ಬೆಂಗಳೂರು ಜಲಮಂಡಳಿ, ಬೆಸ್ಕಾಂ, ಬಿಎಸ್‌ಎನ್‌ಎಲ್, ವಿವಿಧ ಖಾಸಗಿ ಮೊಬೈಲ್ ಸಂಸ್ಥೆಗಳು, ಬೆಂಗಳೂರು ವಿವಿಯ ಅರ್ಜಿಗಳು, ಪಿಯುಸಿ ಶುಲ್ಕ, ಪೊಲೀಸ್ ದಂಡ ಪಾವತಿ, ಬಿಎಂಟಿಸಿಯ ತಿಂಗಳ ಪಾಸ್, ವಿವಿಧ ವಿಮೆಗಳ ಪಾವತಿ, ಉದ್ಯೋಗದ ಮಾಹಿತಿ, ಮತದಾರರ ಪಟ್ಟಿಗೆ ಸೇರ್ಪಡೆ ಮಾಡುವುದು, ಪ್ರವಾಸೋದ್ಯಮ ಇಲಾಖೆಯ ಸೇವೆ ಹೀಗೆ ಪಟ್ಟಿ ಸಾಗುತ್ತ ಹೋಗುತ್ತದೆ.

ವಿವಿಧ ದೇವಾಲಯಗಳಿಗೆ ಹೋಗುವವರು ಇಲ್ಲಿಂದ ಪೂಜೆ ಹಾಗೂ ಇತರೆ ಸೇವೆಗಳಿಗೆ ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಸಹ ಮಾಡಿಕೊಂಡು ಹೋಗಬಹುದು. ಅಂತಹ ಸೇವೆಯನ್ನು ಸಹ ಇಲ್ಲಿಂದ ಆರಂಭಿಸಲಾಗಿದೆ.

### ಆಧಾರ್ ನೊಂದಣಿಯೂ ಇದೆ

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈಗ ಎಲ್ಲದಕ್ಕೂ ಆಧಾರ್ ಕಡ್ಡಾಯ ಮಾಡಿವೆ. ಆಧಾರ್ ಸಂಖ್ಯೆ ಪಡೆಯಲು ಈ ಮೊದಲು ಗ್ರಾಹಕರು ಪರದಾಡಬೇಕಾಗಿತ್ತು. ಆದರೆ ಈಗ ಆ ಸೌಲಭ್ಯ ಬೆಂಗಳೂರು ಒನ್ ಕೇಂದ್ರದಲ್ಲಿಯೇ ದೊರಕುತ್ತದೆ. ಅಲ್ಲಿಯೇ ಕ್ಯಾಮರ ಹಾಗೂ ಹೆಬ್ಬೆರಳು ಮುದ್ರೆ ಮತ್ತು ಕಣ್ಣಿನ ಗುರುತು ಪಡೆಯುವ ವ್ಯವಸ್ಥೆ ಮಾಡಲಾಗಿದೆ.

ಅಗತ್ಯ ದಾಖಲೆ ತೆಗೆದುಕೊಂಡು ಹೋಗಿ ನೊಂದಾಯಿಸಿಕೊಳ್ಳಬಹುದು. ಯಾವುದೇ ತಿದ್ದುಪಡಿಗಳಿದ್ದರೂ ಇಲ್ಲಿ ಮಾಡಿಸಲು ಅವಕಾಶಗಳಿವೆ. ಅಷ್ಟರ ಮಟ್ಟಿಗೆ ಜನರಿಗೆ ಅನುಕೂಲವಾಗಿದೆ.

ಪ್ರತಿ ನಿತ್ಯ ಬೆಂಗಳೂರು ಒನ್ ಕೇಂದ್ರಗಳಲ್ಲಿ ನೂರಾರು ಜನ ಆಧಾರ್‌ಗೆ ನೊಂದಣಿ ಮಾಡಿಸುತ್ತಿರುತ್ತಾರೆ. ಆದ್ದರಿಂದಲೇ ಆಧಾರ್ ನೋಂದಣಿಯಲ್ಲಿ ಬಹುದೊಡ್ಡ ಮಟ್ಟದ ಪ್ರಗತಿ ಸಾಧ್ಯವಾಗಿದೆ. ಬೆಂಗಳೂರು ನಗರದಲ್ಲಿ ಆಧಾರ್ ನೊಂದಣಿಯ ಪ್ರಮಾಣ ಶೇ.97ರಷ್ಟು ಆಗಿದ್ದರೆ ಅದರಲ್ಲಿ ಬೆಂಗಳೂರು ಒನ್ ಕೇಂದ್ರಗಳ ಪಾತ್ರ ಬಹಳ ದೊಡ್ಡದಿದೆ.

### ಕಾರ್ಡ್ ಬಳಕೆಯೂ ಇಲ್ಲುಂಟು

ಕೇಂದ್ರ ಸರ್ಕಾರ ದೊಡ್ಡ ಮೌಲ್ಯದ ನೋಟುಗಳನ್ನು ಅಮಾನ್ಯಗೊಳಿಸಿದ ನಂತರ ಎಲ್ಲೆಡೆ ಕ್ಯಾಶ್‌ಲೆಸ್ ವ್ಯವಹಾರ ನಡೆಸಲಾಗುತ್ತಿದೆ. ಇದಕ್ಕಾಗಿ ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್‌ಗಳನ್ನು ಬಳಸಲಾಗುತ್ತಿದೆ. ಕಾರ್ಡ್‌ಗಳ ವಹಿವಾಟು ಮೊದಲಿನಿಂದಲೂ ಇತ್ತು, ಬೆಂಗಳೂರು ಒನ್ ಕೇಂದ್ರಗಳು ಸ್ಥಾಪನೆಯಾದಾಗಿನಿಂದಲೂ ಕಾರ್ಡ್‌ಗಳನ್ನು ಬಳಸುವ ಡಿಜಿಟಲ್ ವಹಿವಾಟು ನಡೆಸುತ್ತ ಬರುತ್ತಿವೆ. ಅದು ಸಹ ಗ್ರಾಹಕರಿಗೆ ಸಾಕಷ್ಟು ಅನುಕೂಲವನ್ನೇ ತಂದಿದೆ. ನೋಟು ಅಮಾನ್ಯ ನಂತರವಂತೂ ಬೆಂಗಳೂರು ಒನ್ ಕೇಂದ್ರಗಳಲ್ಲಿ ಕ್ಯಾಶ್‌ಲೆಸ್ ವಹಿವಾಟು ಇನ್ನಷ್ಟು ಹೆಚ್ಚಾಗಿದೆ.

ನಗದು, ಚೆಕ್, ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಸಹ ಪಡೆಯಲಾಗುತ್ತದೆ. ಈ ಕೇಂದ್ರಗಳು 365 ದಿನ 24x7ರಂತೆ ಕಾರ್ಯ ನಿರ್ವಹಣೆ ಮಾಡುತ್ತವೆ.




ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ತಿ ತೆರಿಗೆಯನ್ನು ಸಹ ಬೆಂಗಳೂರು ಒನ್ ಕೇಂದ್ರಗಳಲ್ಲಿ ಪಾವತಿಗೆ ಅವಕಾಶ ಇತ್ತು. ಆದರೆ ಈ ವರ್ಷದಿಂದ ಬ್ಯಾಂಕೊಂದರಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕವೇ ಪಾವತಿ ಮಾಡಬೇಕೆಂದು ಕೈಗೊಂಡಿರುವ ಪಾಲಿಕೆಯ ನಿಲುವು ಸಾಕಷ್ಟು ಸಮಸ್ಯೆಗೂ ಕಾರಣವಾಗಿದೆ.

ಈ ಮೊದಲು ಸಾರ್ವಜನಿಕರು ಬೆಂಗಳೂರು ಒನ್ ಕೇಂದ್ರಗಳಿಗೆ ಹೋಗಿ ಸುಲಭವಾಗಿ ಪಾವತಿ ಮಾಡಿ ಬಿಡುತ್ತಿದ್ದರು. ಆದರೆ ಈಗ ಒಂದೇ ಬ್ಯಾಂಕ್‌ಗೆ ಹುಡುಕಿ ಹೋಗಬೇಕಾಗಿದೆ. ಅದರಿಂದ ಸಾರ್ವಜನಿಕರಿಗೆ ಸುಲಭವಾಗಿ ಸಿಗುತ್ತಿದ್ದ ಸೇವೆಯೊಂದು ತಪ್ಪಿದಂತಾಗಿದೆ.

### ಪ್ರಶಸ್ತಿಗಳು

ಇ ಆಡಳಿತವನ್ನು ಬಳಸಿಕೊಂಡು ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುತ್ತಿರುವುದರಿಂದ ಬೆಂಗಳೂರು ಒನ್ ಕೇಂದ್ರಕ್ಕೆ ಪ್ರಶಸ್ತಿಗಳು ಬಂದಿವೆ. 2005 ಹಾಗೂ 2012ರಲ್ಲಿ ಕಂಪ್ಯೂಟರ್ ಸೊಸೈಟಿ ಆಫ್ ಇಂಡಿಯಾದಿಂದ ನಿಹೆಲೆಂಟ್ ಪ್ರಶಸ್ತಿ, 2009ರಲ್ಲಿ ನ್ಯಾಷನಲ್ ವೆಬ್‌ರತ್ನ ಪ್ರಶಸ್ತಿ, 2013ರಲ್ಲಿ ನಮ್ಮ ಬೆಂಗಳೂರು ಪ್ರತಿಷ್ಠಾನದ ಪ್ರಶಸ್ತಿ ಲಭ್ಯವಾಗಿವೆ. ಇದರಿಂದಲೇ ಬೆಂಗಳೂರು ಒನ್ ಸಾರ್ವಜನಿಕರಿಗೆ ಎಂತಹ ಉತ್ಕೃಷ್ಟವಾದ ಸೇವೆಯನ್ನು ಒದಗಿಸುತ್ತಿದೆ ಎಂಬುದು ಸುಲಭವಾಗಿ ಅರ್ಥವಾಗುತ್ತದೆ.

### ಕರ್ನಾಟಕ ಒನ್

ಬೆಂಗಳೂರು ಒನ್ ಯಶಸ್ವಿಯಾದ ನಂತರ ಕರ್ನಾಟಕ ಸರ್ಕಾರ ಉಳಿದ ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಕರ್ನಾಟಕ ಒನ್ ಕೇಂದ್ರಗಳನ್ನು ಸ್ಥಾಪನೆ ಮಾಡಿದೆ. ಅಲ್ಲಿಯೂ ಸಾರ್ವಜನಿಕರಿಗೆ ಸರ್ಕಾರದ ಹಾಗೂ ಖಾಸಗಿಯ ಕೆಲ ಸೇವೆಗಳು ಲಭ್ಯವಾಗುವಂತೆ ಮಾಡಿದೆ.

ಬಳ್ಳಾರಿ, ಬೆಳಗಾವಿ, ದಾವಣಗೆರೆ, ಕಲಬುರಗಿ, ಹುಬ್ಬಳ್ಳಿ ಧಾರವಾಡ, ಮೈಸೂರು, ಮಂಗಳೂರು, ಶಿವಮೊಗ್ಗ ಹಾಗೂ ತುಮಕೂರು ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಈ ಸೇವೆ ಸಾರ್ವಜನಿಕರಿಗೆ ದೊರಕುತ್ತಿದೆ.

ಈ ಆಡಳಿತ ಕೇವಲ ನಗರಗಳಿಗೆ ಮಾತ್ರ ಸೀಮಿತವಲ್ಲ ಎಂಬುದನ್ನು ಈ ಸರ್ಕಾರ ತೋರಿಸಿಕೊಟ್ಟಿದೆ. ಗ್ರಾಮ ಮಟ್ಟಕ್ಕೂ ತೆಗೆದುಕೊಂಡು ಹೋಗುವ ಮೂಲಕ ಅಲ್ಲಿನ ಜನರಿಗೂ ಇ ಆಡಳಿತದ ಸೇವೆ ಸಿಗುವಂತೆ ಮಾಡಿರುವುದು ರಾಜ್ಯ ಸರ್ಕಾರದ ಹೆಗ್ಗಳಿಕೆ.

ಸುಮಾರು 2000ಕ್ಕೂ ಹೆಚ್ಚಿನ ಪಂಚಾಯಿತಿಗಳಲ್ಲಿ ಬಾಪು ಸೇವಾ ಕೇಂದ್ರಗಳನ್ನು ಸ್ಥಾಪಿಸಿ ಅವುಗಳ ಮೂಲಕ ಸುಮಾರು 100 ಸೇವೆಗಳನ್ನು ಜನಸಾಮಾನ್ಯರಿಗೆ ಒದಗಿಸುತ್ತಿದೆ. ಇಲ್ಲಿಯೂ ಸಹ ಬೆಂಗಳೂರು ಒನ್ ಕೇಂದ್ರದ ಮಾದರಿಯಲ್ಲಿಯೇ ವಹಿವಾಟು ನಡೆಯುತ್ತಿದೆ. ಹಂತ ಹಂತವಾಗಿ ರಾಜ್ಯದ ಉಳಿದ ಗ್ರಾಮ ಪಂಚಾಯಿತಿಗಳಿಗೂ ಈ ಸೌಲಭ್ಯ ವಿಸ್ತರಣೆಯಾಗುತ್ತಿದೆ.

### ಮೊಬೈಲ್ ಒನ್

ಬೆರಳ ತುದಿಯಲ್ಲಿಯೇ ಆಡಳಿತ ನಡೆಸಬಹುದಾದ ಈ ದಿನಗಳಲ್ಲಿ ರಾಜ್ಯ ಸರ್ಕಾರ ಕೈಗೊಂಡ ಮತ್ತೊಂದು ಪ್ರಮುಖವಾದ ಇ ಆಡಳಿತದ ಯೋಜನೆ ಎಂದರೆ ಮೊಬೈಲ್ ಒನ್. ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಇಂತಹದೊಂದು ಯೋಜನೆಯನ್ನು ಕರ್ನಾಟಕ ಸರ್ಕಾರ ಆರಂಭಿಸಿತು. 2014ರಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರ ವಿಶೇಷ ಆಸಕ್ತಿಯ ಫಲವಾಗಿ ಈ ಯೋಜನೆಗೆ ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ ಚಾಲನೆ ನೀಡಿದರು. ಲಕ್ಷಾಂತರ ಜನ ಈ ಯೋಜನೆಯ ಫಲ ಪಡೆದಿದ್ದು, ಕೋಟ್ಯಾಂತರ ರೂ.ಗಳ ವಹಿವಾಟನ್ನು ನಡೆಸಿದ್ದಾರೆ. ಅಷ್ಟರ ಮಟ್ಟಿಗೆ ನಗದು ರಹಿತವಾದ ವಹಿವಾಟು ಮೊಬೈಲ್‌ಗಳ ಮೂಲಕವೇ ನಡೆದಿರುವುದು ವಿಶೇಷ. ಇ ಆಡಳಿತವನ್ನು ಯಾವ ರೀತಿಯಲ್ಲಿ ಬಳಕೆ ಮಾಡಲು ಸಾಧ್ಯವಿದೆ ಎಂಬುದಕ್ಕೆ ಇದೆಲ್ಲವೂ ಉದಾಹರಣೆಗಳಾಗಿದೆ. ಆ ನಿಟ್ಟಿನಲ್ಲಿ ಸರ್ಕಾರ ಉತ್ತಮ ಹೆಜ್ಜೆಯನ್ನಿಟ್ಟಿದೆ. ❑

# ಮನ್ ಕೀ ಬಾತ್



ಪ್ರಧಾನ ಮಂತ್ರಿ
ಶ್ರೀ ನರೇಂದ್ರ ಮೋದಿಯವರು
ಜನವರಿ 29 ರಂದು
ಆಕಾಶವಾಣಿ
ಮೂಲಕ
ದೇಶವನ್ನು ಉದ್ದೇಶಿಸಿ
ಮಾಡಿದ
"ಮನ್ ಕೀ ಬಾತ್"ನ
ಆಯ್ದ
ಕನ್ನಡ ಅವತರಣಿಕೆ.

ನನ್ನ ಪ್ರೀತಿಯ ದೇಶ ಬಾಂಧವರೇ, ನಿಮಗೆಲ್ಲರಿಗೂ ನಮಸ್ಕಾರ. ಜನವರಿ 26 ನಮ್ಮ ದೇಶದ ಗಣರಾಜ್ಯೋತ್ಸವ, ನಾವೆಲ್ಲರೂ ಅದನ್ನು ಅತ್ಯಂತ ಉತ್ಸಾಹ ಮತ್ತು ಹುರುಪಿನಿಂದ ಆಚರಿಸಿದೆವು. ಭಾರತದ ಸಂವಿಧಾನ ಮತ್ತು ನಾಗರಿಕರ ಕರ್ತವ್ಯ, ನಾಗರಿಕರ ಅಧಿಕಾರ, ನಮ್ಮ ಪ್ರಜಸತ್ತಾತ್ಮಕತೆ ಬಗ್ಗೆ ನಮ್ಮ ಬದ್ಧತೆ, ಒಂದು ರೀತಿಯಲ್ಲಿ ಇದು ನಮ್ಮ ಹಕ್ಕುಗಳ ಉತ್ಸವವಾಗಿದೆ. ಇದು ಮುಂಬರುವ ಪೀಳಿಗೆಗೆ ನಮ್ಮ ಸಂವಿಧಾನ ಮತ್ತು ಸಾಂವಿಧಾನಿಕ ಹಕ್ಕು ಬಾಧ್ಯತೆಗಳ ಬಗ್ಗೆ ಜಾಗರೂಕತೆಯನ್ನು ಹುಟ್ಟಿಸುತ್ತದೆ ಮತ್ತು ಶಿಕ್ಷಿತರನ್ನಾಗಿಯೂ ಮಾಡುತ್ತದೆ.

ಆದರೆ ಪ್ರಸ್ತುತ ನಮ್ಮ ದೇಶದಲ್ಲಿ ನಾಗರಿಕರ ಕರ್ತವ್ಯ, ಅಧಿಕಾರ ಕುರಿತು ಎಷ್ಟು ಚರ್ಚೆ ಆಗಬೇಕಿತ್ತೋ, ಎಷ್ಟು ಆಳವಾದ ಚರ್ಚೆಗೆ ಈಡಾಗಬೇಕಿತ್ತೋ ಎಷ್ಟು ವಿಸ್ತ್ರತವಾಗಿ ಚರ್ಚೆಗೊಳಪಡಬೇಕಿತ್ತೋ ಅದು ಆಗುತ್ತಿಲ್ಲ. ಎಲ್ಲ ಹಂತಗಳಲ್ಲೂ, ಎಲ್ಲ ಸಮಯದಲ್ಲೂ ನಮ್ಮ ಅಧಿಕಾರಗಳಿಗೆ ನಾವು ಎಷ್ಟು ಒತ್ತು ನೀಡುತ್ತೇವೋ ಅಷ್ಟೇ ನಮ್ಮ ಕರ್ತವ್ಯಗಳ ಮೇಲೂ ನೀಡಬೇಕೆಂದು ನಾನು ಬಯಸುತ್ತೇನೆ. ಅಧಿಕಾರ ಮತ್ತು ಕರ್ತವ್ಯ ಎಂಬ ಎರಡು ಹಳಿಗಳ ಮೇಲೆ ಮಾತ್ರವೇ ಭಾರತದ ಸಾಂವಿಧಾನಿಕ ರೈಲು ವೇಗವಾಗಿ ಚಲಿಸಬಲ್ಲುದಾಗಿದೆ. ನಾಳೆ ಜನವರಿ 30. ನಮ್ಮ ಪೂಜ್ಯ ಬಾಪೂಜಿಯವರ ಪುಣ್ಯತಿಥಿ. ಜನವರಿ 30 ರಂದು ನಾವೆಲ್ಲ ಬೆಳಿಗ್ಗೆ 11 ಗಂಟೆಗೆ 2 ನಿಮಿಷಗಳ ಕಾಲ ಮೌನ ಆಚರಿಸಿ ದೇಶಕ್ಕೆ ಪ್ರಾಣ ತೆತ್ತ ಹುತಾತ್ಮರಿಗೆ ಶೃದ್ಧಾಂಜಲಿ ಅರ್ಪಿಸುತ್ತೇವೆ. ಒಂದು ಸಮಾಜದ ರೂಪದಲ್ಲಿ, ರಾಷ್ಟ್ರದ ರೂಪದಲ್ಲಿ ಜನವರಿ 30 ರಂದು ನಾವೆಲ್ಲ ಬೆಳಿಗ್ಗೆ 11 ಗಂಟೆಗೆ 2 ನಿಮಿಷಗಳ ಕಾಲ ಮೌನ ಆಚರಿಸುವುದು ನಮ್ಮ ಸಹಜ ಸ್ವಭಾವವಾಗಬೇಕು. ಎರಡೇ ನಿಮಿಷವಾದ್ರೂ ಅದರಲ್ಲಿ ಸಾಮೂಹಿಕತೆ, ಸಂಕಲ್ಪ ಮತ್ತು ಹುತಾತ್ಮರಿಗೆ ಶ್ರದ್ಧಾಂಜಲಿ ವ್ಯಕ್ತವಾಗುತ್ತದೆ.

ನಾನು ವಿಶಿಷ್ಟ ರೂಪದಲ್ಲಿ ನಮ್ಮ ಯುವಕರಿಗೆ ಆಹ್ವಾನಿಸಬಯಸುತ್ತೇನೆ. ನೀವು ಸೋಷಿಯಲ್ ಮೀಡಿಯಾದಲ್ಲಿ ಬಹಳ ಆಕ್ಟಿವ್ ಆಗಿದ್ದೀರಿ. ನೀವು ಒಂದು ಕೆಲಸ ಮಾಡಬಹುದೇ? ಈ ಬಾರಿ ಯಾವ ವೀರರಿಗೆ ಪ್ರಶಸ್ತಿ ಲಭಿಸಿದೆಯೋ ಅವರ ವಿವರವನ್ನು ನೆಟ್ ನಲ್ಲಿ ಹುಡುಕಿ ತೆಗೆಯಿರಿ ಮತ್ತು ಅವರ ಕುರಿತು ಎರಡು ಒಳ್ಳೆಯ ಶಬ್ದಗಳನ್ನು ಬರೆದು ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿ. ಅವರ ಸಾಹಸದ, ಶೌರ್ಯ, ಪರಾಕ್ರಮದ ವಿಷಯಗಳನ್ನು ನೀವು ಆಳವಾಗಿ ಅರಿತುಕೊಂಡರೆ ನಮಗೆ ಆಶ್ಚರ್ಯವಾಗುತ್ತದೆ, ಹೆಮ್ಮೆ ಎನಿಸುತ್ತದೆ ಮತ್ತು ಪ್ರೇರಣೆಯೂ ದೊರೆಯುತ್ತದೆ.

ಒಂದೆಡೆ ನಾವು ಜನವರಿ 26 ರ ಸಂಭ್ರಮದ ಮತ್ತು ಉತ್ಸಾಹಭರಿತ ಸಂಗತಿಗಳಲ್ಲಿ ಆನಂದವಾಗಿದ್ದರೆ ಇನ್ನೊಂದೆಡೆ ನಮ್ಮ ಸೈನ್ಯದ ಯೋಧರು ಕಾಶ್ಮೀರದಲ್ಲಿ ದೇಶದ ರಕ್ಷಣೆಗೆ ಎದೆಯೊಡ್ಡಿ ನಿಂತಿದ್ದರು. ಅವರು ಹಿಮಕುಸಿತದಿಂದಾಗಿ ವೀರಮರಣವನ್ನಪ್ಪಿದರು. ನಾನು ಈ ಎಲ್ಲ ವೀರ ಯೋಧರಿಗೆ ಶೃದ್ಧಾಂಜಲಿ ಅರ್ಪಿಸುತ್ತೇನೆ ಮತ್ತು ನಮಿಸುತ್ತೇನೆ.

ನನ್ನ ಯುವಮಿತ್ರರೇ, ನಾನು ನಿರಂತರವಾಗಿ ಮನದಾಳದ ಮಾತನ್ನಾಡುತ್ತಿರುವುದು ನಿಮಗೆಲ್ಲ ಗೊತ್ತಿದೆ. ಜನವರಿ, ಫೆಬ್ರವರಿ, ಮಾರ್ಚ ಮತ್ತು ಏಪ್ರಿಲ್ ತಿಂಗಳುಗಳು ಎಲ್ಲರ ಮನೆಯಲ್ಲಿ ಪರೀಕ್ಷೆಯ ತಿಂಗಳುಗಳಾಗಿರುತ್ತವೆ. ಮನೆಯಲ್ಲಿ

* ಕೃಪೆ : ಆಕಾಶವಾಣಿ, ಬೆಂಗಳೂರು.

ಒಂದಿಬ್ಬರು ಮಕ್ಕಳ ಪರೀಕ್ಷೆ ಇರುತ್ತದೆ, ಆದರೆ ಸಂಪೂರ್ಣ ಕುಟುಂಬವೇ ಪರೀಕ್ಷೆಯ ಒತ್ತಡ ಎದುರಿಸುತ್ತಿರುತ್ತದೆ. ಹಾಗಾಗಿ ಇದು ನನ್ನ ವಿದ್ಯಾರ್ಥಿ ಮಿತ್ರರೊಂದಿಗೆ ಮಾತನಾಡಲು ಸರಿಯಾದ ಸಮಯ ಎಂದು ನನಗೆ ಅನ್ನಿಸಿತು.

ಅವರ ಪೋಷಕರೊಂದಿಗೆ ಮತ್ತು ಶಿಕ್ಷಕರೊಂದಿಗೆ ಮಾತನಾಡಬೇಕು ಎಂದೆನಿಸಿತು. ಏಕೆಂದರೆ ಎಷ್ಟೋ ವರ್ಷಗಳಿಂದ ನಾನು ಎಲ್ಲೆ ಹೋದರೂ, ಯಾರನ್ನೇ ಭೇಟಿಯಾದರೂ ಅವರಿಗೆ ಪರೀಕ್ಷೆ ಎಂಬುದು ಒಂದು ದೊಡ್ಡ ಸಮಸ್ಯೆ ಎನಿಸಿದ್ದನ್ನು ಗಮನಿಸಿದೆ. ಕುಟುಂಬ ಚಿಂತಿತರಾಗಿರುತ್ತದೆ, ವಿದ್ಯಾರ್ಥಿಗಳು, ಶಿಕ್ಷಕರು ಚಿಂತಿತರಾಗಿರುವಂಥ ಒಂದು ರೀತಿಯ ವಿಚಿತ್ರವಾದ ಮನೋವೈಜ್ಞಾನಿಕ ವಾತಾವರಣ ಪ್ರತಿಯೊಂದು ಮನೆಯಲ್ಲೂ ಕಂಡುಬರುತ್ತದೆ. ಇದರಿಂದ ಹೊರಬರಬೇಕು ಎಂದು ನನಗೆ ಯಾವಾಗಲೂ ಅನ್ನಿಸಿದೆ, ಹಾಗಾಗಿ ನನ್ನ ಯುವ ಮಿತ್ರರೊಂದಿಗೆ ಸ್ವಲ್ಪ ವಿಸ್ತಾರವಾಗಿ ಮಾತನಾಡಬಯಸುತ್ತೇನೆ.

ಅಸಲು ವಿಷಯವೇನೆಂದರೆ, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಕಚ್‌ನಿಂದ ಕಾಮ್‌ರೂಪ್‌ವರೆಗೆ, ಅಮ್ರೇಲಿಯಿಂದ ಅರುಣಾಚಲ ಪ್ರದೇಶದವರೆಗೆ ಈ ಮೂರ್ನಾಲ್ಕು ತಿಂಗಳುಗಳು ಪರೀಕ್ಷೆಗಳೇ ಇರುತ್ತವೆ. ನಾವು ಪ್ರತಿವರ್ಷ ಈ ಮೂರ್ನಾಲ್ಕು ತಿಂಗಳುಗಳು ನಮ್ಮದೇ ಆದ ರೀತಿಯಲ್ಲಿ ನಮ್ಮ ಪರಂಪರೆಯನುಸಾರ, ನಮ್ಮ ಕುಟುಂಬದ ಪರಿಸ್ಥಿತಿಗಳನ್ನು ಆಧರಿಸಿ ಉತ್ಸವದ ರೂಪದಲ್ಲಿ ಪರಿವರ್ತಿಸುವುದು ನಮ್ಮ ಕರ್ತವ್ಯವಾಗಿದೆ. ಅದಕ್ಕಾಗಿಯೇ ನಿಮಗೆಲ್ಲರಿಗೂ 'smile more score more'ಎಂದು ಹೇಳಬಯಸುತ್ತೇನೆ.

ಜೀವನದ ಪ್ರತಿ ಕ್ಷೇತ್ರದಲ್ಲಿ ಅದರಲ್ಲೂ ಮಿತ್ರರೇ ನೀವು ಪರೀಕ್ಷೆ ನೀಡಲು ಹೊರಟಾಗ ಹಿಂದೆ ಶಾಂತಿಯಿಂದ 2 ಘಂಟೆ ಓದುತ್ತಿದ್ದರೆ ಈಗ ಅದನ್ನು 3 ಘಂಟೆಗೆ ವಿಸ್ತರಿಸಬಹುದೇ? ಹಿಂದೆ ಬೆಳಿಗ್ಗೆ ಬೇಗ ಏಳಲು ನಿರ್ಧರಿಸಿದ್ದರೂ ತಡವಾಗುತ್ತಿತ್ತು, ಈಗ ನೀವು ಸರಿಯಾದ ಸಮಯಕ್ಕೆ ಎದ್ದೇಳುತ್ತಿದ್ದೀರಾ? ಹಿಂದೆ ಪರೀಕ್ಷೆ ಒತ್ತಡದಿಂದ ನಿದ್ದೆ ಬರುತ್ತಿರಲಿಲ್ಲ, ಈಗ ನಿದ್ದೆ ಬರುತ್ತದೆಯೇ? ನಿಮ್ಮನ್ನು ನೀವೇ ಪರೀಕ್ಷಿಸಿಕೊಂಡರೆ ನಿಮ್ಮ ಗಮನಕ್ಕೆ ಬರುತ್ತದೆ – ಪ್ರತಿಸ್ಪರ್ಧೆಯಲ್ಲಿ ಪರಾಜಯ, ಹತಾಶೆ,



ನಿರಾಸೆ ಮತ್ತು ಅಸೂಯೆ ಹುಟ್ಟಿಕೊಳ್ಳುತ್ತವೆ. ಆದರೆ ಅನುಸ್ಪರ್ಧೆ ಆತ್ಮ ಮಂಥನ, ಆತ್ಮ ಚಿಂತನೆಗೆ ಎಡೆಮಾಡಿಕೊಡುತ್ತದೆ. ಸಂಕಲ್ಪ ಶಕ್ತಿಯನ್ನು ದೃಢಗೊಳಿಸುತ್ತದೆ. ನಿಮ್ಮನ್ನು ನೀವೇ ಸೋಲಿಸಿದಾಗ ಮುನ್ನಡೆಯುವ ಉತ್ಸಾಹ ತುಂಬುತ್ತದೆ. ಬಾಹ್ಯ ಶಕ್ತಿಯ ಅವಶ್ಯಕತೆ ನಮಗಿರುವುದಿಲ್ಲ. ನಮ್ಮೊಳಗೇ ಒಂದು ಶಕ್ತಿ ಹುಟ್ಟಿಕೊಳ್ಳುತ್ತದೆ. ಸರಳ ಭಾಷೆಯಲ್ಲಿ ಹೇಳುವುದಾದರೆ – ನೀವು ಯಾರೊಂದಿಗಾದರೂ ಪ್ರತಿಸ್ಪರ್ಧೆ ಮಾಡಿದಲ್ಲಿ ಆಗ ಮೂರು ಸಾಧ್ಯತೆಗಳು ದೊಡ್ಡದಾಗಿ ಕಂಡುಬರುತ್ತವೆ. ಒಂದು ನಾನು ಅವನಿಗಿಂತ ಉತ್ತಮನು, ಎರಡನೆಯದ್ದು ನೀವು ಅವರಿಗಿಂತ ಬಹಳ ಕಡಿಮೆ ಎಂದು, ಇಲ್ಲವೇ ನೀವು ಅವರಿಗೆ ಸರಿಸಮಾನರಾಗಿದ್ದೀರಿ. ನೀವು ಉತ್ತಮರಾದರೆ ಅಸಡ್ಡೆ ಮಾಡುತ್ತೀರಿ. ಅತಿಯಾದ ವಿಶ್ವಾಸ ಹೊಂದಿರುತ್ತೀರಿ. ಒಂದೊಮ್ಮೆ ಅವರಿಗಿತ ಕೆಳಮಟ್ಟಕ್ಕಿದ್ದರೆ ದುಃಖಿತರಾಗಿ ನಿರಾಸೆ ಹೊಂದುತ್ತೀರಿ. ಅಸೂಯೆ ಮೂಡುತ್ತದೆ. ಅದು ನಿಮ್ಮನ್ನು ನಾಶಪಡಿಸುತ್ತಾ ಸಾಗುತ್ತದೆ. ಸರಿಸಮನಾಗಿದ್ದರೆ ಸುಧಾರಣೆಯ ಅವಶ್ಯಕತೆ ಇದೆ ಎಂಬುದನ್ನು ನೀವು ಮನಗಾಣುವುದೇ ಇಲ್ಲ. ಜೀವನ ಹೇಗೆ ಸಾಗಿದೆಯೋ ಹಾಗೇ ಮುಂದುವರಿಯುತ್ತದೆ. ಹಾಗಾಗಿ ನಿಮ್ಮೊಂದಿಗೇ ನೀವು ಸ್ಪರ್ಧಿಸಿ ಎಂದು ನಾನು ಆಗ್ರಹಿಸುತ್ತೇನೆ. ಹಿಂದೆ ಏನು ಮಾಡಿದ್ದೆ, ಮುಂದೆ ಹೇಗೆ ಮಾಡುತ್ತೇನೆ, ಹೇಗೆ ಇನ್ನೂ ಅದನ್ನು ಉತ್ತಮಗೊಳಿಸುತ್ತೇನೆ ಎಂಬುದರ ಬಗ್ಗೆ ನಿಮ್ಮ ಗಮನವನ್ನು ಕೇಂದ್ರೀಕರಿಸಿ. ನಿಮ್ಮಲ್ಲಿ ಬಹಳ ಪರಿವರ್ತನೆ ಆಗುವುದನ್ನು ನೀವು ಗಮನಿಸುತ್ತೀರಿ.

ಹಲವು ವರ್ಷಗಳ ಹಿಂದಿನ ಮಾತು, ನನ್ನ ಪರಿಚಯದ ವ್ಯಕ್ತಿಯೊಬ್ಬರು ಹೃದಯಾಘಾತದಿಂದ ಆಸ್ಪತ್ರೆಗೆ ದಾಖಲಾಗಿದ್ದರು. ನಮ್ಮ ದೇಶದ ಪ್ರಥಮ ಲೋಕಸಭಾ ಸ್ಪೀಕರ್ ಗಣೇಶ್ ಮಾವಳಂಕರ್, ಅವರ ಪುತ್ರ ಎಂ. ಪಿ. ಕೂಡಾ ಆಗಿದ್ದ ಪುರುಷೋತ್ತಮ್ ಮಾವಳಂಕರ್ ಅವರು, ಇವರನ್ನು ನೋಡಲು ಬಂದಿದ್ದರು. ಅಲ್ಲಿ ನಾನೂ ಇದ್ದೆ. ಅವರು ಆರೋಗ್ಯದ ಬಗ್ಗೆ ಒಂದೂ ಪ್ರಶ್ನೆ ಕೇಳಲಿಲ್ಲ ಎಂಬುದನ್ನು ನಾನು ಗಮನಿಸಿದೆ. ಅವರು ಅಲ್ಲಿ ಕೂತು, ಅಲ್ಲಿಯ ಸ್ಥಿತಿ, ಅವರ ಆರೋಗ್ಯದ ಬಗ್ಗೆ ಏನನ್ನೂ ಮಾತಾಡದೇ ಬಂದ 2 ನಿಮಿಷಕ್ಕೇ ನಗೆ ಚಟಾಕಿಗಳನ್ನು ಹಾರಿಸಲು ಆರಂಭಿಸಿದರು. ಅಲ್ಲಿಯ ವಾತಾವರಣವನ್ನು ತಿಳಿಗೊಳಿಸಿದರು. ಒಂದು ರೀತಿ ನಾವು ಅಸ್ವಸ್ಥರಾಗಿರುವವರನ್ನು ಭೇಟಿಯಾಗಲು ಹೋಗಿ ಅವರ ರೋಗದ ಬಗ್ಗೆ ಹೆದರಿಸುತ್ತೇವೆ. ಪೋಷಕರಿಗೆ ನಾನು ಹೇಳಬಯಸುವುದೇನೆಂದರೆ ಆಗಾಗ ನಾವೂ ಮಕ್ಕಳೊಂದಿಗೆ ಇದೇ ರೀತಿ ನಡೆದುಕೊಳ್ಳುತ್ತೇವೆ. ಪರೀಕ್ಷೆ ಸಮಯದಲ್ಲಿ ಮಕ್ಕಳಿಗೆ ನಕ್ಕು ನಲಿಯುವ ಅವಕಾಶ ನೀಡಬೇಕೆಂದು ನಿಮಗೆ ಅನ್ನಿಸಿಲ್ಲವೇ? ಹಾಗೆ ಮಾಡಿ ನೋಡಿ ವಾತಾವರಣವೇ ಬದಲಾಗುತ್ತದೆ.

ಪರೀಕ್ಷೆ ಸಮಯದಲ್ಲಿ ಆಟವಾಡುವ ಬಗ್ಗೆ ನಿಮ್ಮೊಂದಿಗೆ ಮಾತಾಡಿದರೆ ನಿಮ್ಮ ಶಿಕ್ಷಕರು ಮತ್ತು ತಂದೆತಾಯಂದಿರು, ಇವರೆಂಥ ಪ್ರಧಾನಿ, ಮಕ್ಕಳ ಪರೀಕ್ಷೆ ಸಮಯದಲ್ಲಿ ಆಟವಾಡಿ ಎಂದು ಹೇಳುತ್ತಿದ್ದಾರೆ ಎಂದು ನನ್ನ ಮೇಲೆ ಕೋಪಿಸಿಕೊಳ್ಳುತ್ತಾರೆ, ಬೇಜಾರುಪಟ್ಟುಕೊಳ್ಳುತ್ತಾರೆ. ಏಕೆಂದರೆ ಸಾಮಾನ್ಯವಾಗಿ ವಿದ್ಯಾರ್ಥಿಗಳು ಆಟವಾಡುವತ್ತ ಗಮನಹರಿಸಿದರೆ ಓದಿನೆಡೆಗೆ ಗಮನ ಕಡಿಮೆಯಾಗುತ್ತದೆ ಎಂಬ ನಂಬಿಕೆ ಇದೆ. ಈ ಗ್ರಹಿಕೆಯೇ ತಪ್ಪು. ಸಮಸ್ಯೆಯ ಮೂಲವೇ ಅಲ್ಲಿದೆ. ಸರ್ವತೋಮುಖ ಬೆಳವಣಿಗೆ ಹೊಂದಬೇಕೆಂದರೆ ಕೇವಲ ಪುಸ್ತಕಗಳಷ್ಟೇ ಅಲ್ಲ, ಅದರ ಹೊರತಾಗಿಯೂ ಒಂದು ವಿಶಾಲವಾದ ಜೀವನವಿದೆ. ಅದನ್ನೂ ಕಲಿಯುವ ಮತ್ತು ಜೀವಿಸಲು ಕೂಡಾ ಇದೇ ಸಮಯವಾಗಿರುತ್ತದೆ. ಮೊದಲು ಎಲ್ಲ ಪರೀಕ್ಷೆಗಳನ್ನು ಮುಗಿಸಿ, ನಂತರ ಆಡುತ್ತೇನೆ, ಇದನ್ನು ಮಾಡುತ್ತೇನೆ ಅದನ್ನು ಮಾಡುತ್ತೇನೆ ಎಂದರೆ ಅದು ಅಸಂಭವ. ಜೀವನ ರೂಪಿಸಿಕೊಳ್ಳಲು ಇದೇ ಸಮಯವಾಗಿರುತ್ತದೆ. ಇದನ್ನೇ ಪಾಲನೆ ಎನ್ನುತ್ತೇವೆ. ನನ್ನ ದೃಷ್ಟಿಯಲ್ಲಿ ಪರೀಕ್ಷೆಯಲ್ಲಿ ಮೂರು ವಿಷಯಗಳು ಬಹಳ ಮುಖ್ಯವಾಗಿರುತ್ತವೆ. ಸರಿಯಾದ ವಿಶ್ರಾಂತಿ, ದೇಹಕ್ಕೆ ಬೇಕಾದಷ್ಟೇ ನಿದ್ದೆ

ಮತ್ತು ಮೂರನೆಯದಾಗಿ ಮೆದುಳಿನ ಚಟುವಟಿಕೆ ಹೊರತಾಗಿ ದೈಹಿಕ ಚಟುವಟಿಕೆ ಅವಶ್ಯಕವಾಗಿರುತ್ತದೆ. ಇಷ್ಟೆಲ್ಲಾ ಮುಂದಿರುವಾಗ ಒಂದೆರಡು ನಿಮಿಷ ನೀಲಾಕಾಶವನ್ನು ನೋಡಿ, ಸ್ವಲ್ಪ ಗಿಡಮರಗಳತ್ತ ಗಮನ ಹರಿಸಿ, ನಿಮ್ಮ ಮನಸ್ಸನ್ನು ಸ್ವಲ್ಪ ಪ್ರಫುಲ್ಲಗೊಳಿಸಿ ಆಗ ನೋಡಿ ಒಂದು ಹೊಸ ಹುರುಪಿನೊಂದಿಗೆ ನಿಮ್ಮ ಕೋಣೆಗೆ ಮರಳಿ ಮತ್ತೆ ಓದಲಾರಂಭಿಸುವಿರಿ. ನೀವು ಏನೇ ಮಾಡ್ತಾ ಇದ್ದರೂ ಸ್ವಲ್ಪ ವಿರಾಮ ಪಡೆಯಿರಿ. ಎದ್ದು ಹೊರಗಡೆ ಹೋಗಿ ಬನ್ನಿ, ಅಡುಗೆ ಮನೆಗೆ ಹೋಗಿ ನಿಮಗಿಷ್ಟವಾದ ವಸ್ತುವನ್ನು ಹುಡುಕಿ, ನಿಮಗಿಷ್ಟವಾದ ಬಿಸ್ಕೆಟ್ ಸಿಕ್ಕರೆ, ಅದನ್ನು ತಿನ್ನಿರಿ, ಸ್ವಲ್ಪ ನಕ್ಕು ನಲಿಯಿರಿ. ಐದೇ ನಿಮಿಷವಾದರೂ ಸರಿಯೇ ವಿರಾಮ ಪಡೆಯಿರಿ. ನಿಮ್ಮ ಕೆಲಸ ಸರಳಗೊಳ್ಳುತ್ತಿದೆ ಎಂಬ ಅನುಭವ ನಿಮಗಾಗುತ್ತದೆ. ಇದು ಎಲ್ಲರಿಗೂ ಇಷ್ಟವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ಇದು ನನ್ನ ಅನುಭವ. ಇಂಥ ಸಮಯದಲ್ಲಿ ದೀರ್ಘ ಉಸಿರಾಟ ತುಂಬಾ ಒಳ್ಳೆಯದು. ಆಗ ನೋಡಿ ಎಷ್ಟು ಆರಾಮದಾಯಕವೆನಿಸುತ್ತದೆ. ದೀರ್ಘ ಶ್ವಾಸ ತೆಗೆದುಕೊಳ್ಳಲು ಕೋಣೆಯಲ್ಲೇ ಉಳಿಯುವ ಅವಶ್ಯಕತೆಯಿಲ್ಲ. ಸ್ವಲ್ಪ ಬಯಲಿಗೆ ಬನ್ನಿ, ಮಹಡಿ ಮೇಲೆ ಹೋಗಿ, 5 ನಿಮಿಷ ದೀರ್ಘ ಶ್ವಾಸ ತೆಗೆದುಕೊಂಡು ನಂತರ ಓದಲು ಕುಳಿತುಕೊಳ್ಳಿ. ನೀವು ಗಮನಿಸಿ, ನಿಮ್ಮ ಶರೀರ ಆರಾಮವನ್ನು ಅನುಭವಿಸುತ್ತದೆ. ಶಾರೀರಿಕ ಆರಾಮದ ಜೊತೆಗೆ ಮಾನಸಿಕ ಆರಾಮವೂ ಆಗುತ್ತದೆ.

ನನ್ನ ಪ್ರಿಯ ಯುವ ಮಿತ್ರರೇ, ನೀವು ಪರೀಕ್ಷಾ ತಯಾರಿಯಲ್ಲಿ ಮಗ್ನರಾಗಿದ್ದಾಗ ನಾನು ನಿಮ್ಮನ್ನು ನನ್ನ ಮನದಾಳದ ಮಾತಿನಲ್ಲಿ ಹಿಡಿದಿಟ್ಟಿರುವೆ. ಇಂದಿನ ನನ್ನ ಮಾತುಗಳು ಬಹುಶಃ ನಿಮಗೆ ವಿರಾಮವನ್ನು ನೀಡೇ ನೀಡುತ್ತವೆ. ಆದರೆ ಇದರೊಟ್ಟಿಗೆ ನಾನು ಹೇಳಿದ ಮಾತುಗಳನ್ನು ಹೊರೆಯಾಗಲು ಬಿಡಬೇಡಿ. ಸಾಧ್ಯವಾದರೆ ಮಾಡಿ ಇಲ್ಲ ಬಿಟ್ಟು ಬಿಡಿ. ಇಲ್ಲವಾದಲ್ಲಿ



ಇದೇ ಒಂದು ಹೊರೆಯಾಗಬಲ್ಲದು. ನಿಮ್ಮ ಕುಟುಂಬದವರು ಮತ್ತು ತಂದೆತಾಯಂದಿರಿಗೆ ಭಾರವಾಗದಂತೆ ಇರಲು ಹೇಗೆ ಸಲಹೆ ನೀಡಿದೆನೋ ಹಾಗೆಯೇ ಅದು ನನಗೂ ಅನ್ವಯಿಸುತ್ತದೆ. ನಿಮ್ಮ ಸಂಕಲ್ಪವನ್ನು ನೆನಪಿಸಿಕೊಳ್ಳುತ್ತಾ, ಆತ್ಮ ವಿಶ್ವಾಸದೊಂದಿಗೆ ಪರೀಕ್ಷೆ ಬರೆಯಲು ಹೋಗಿ. ನಿಮಗೆಲ್ಲಾ ನನ್ನ ಶುಭಹಾರೈಕೆಗಳು. ಎಲ್ಲ ಪರೀಕ್ಷೆಗಳನ್ನು ಮೆಟ್ಟಿ ನಿಲ್ಲಲು ಅವನ್ನು ಒಂದು ಉತ್ಸವವಾಗಿ ಪರಿವರ್ತಿಸಿಕೊಳ್ಳಿ. ಆಗ ಪರೀಕ್ಷೆಯೆನ್ನುವುದು ಪರೀಕ್ಷೆಯಾಗಿ ಉಳಿಯುವುದಿಲ್ಲ. ಈ ಮಂತ್ರವನ್ನು ಜಪಿಸುತ್ತಾ ಮುನ್ನಡೆಯಿರಿ.

ನನ್ನ ಪ್ರಿಯ ದೇಶ ಬಾಂಧವರೆ, ಫೆಬ್ರವರಿ 1 2017 ಕ್ಕೆ ಇಂಡಿಯನ್ ಕೋಸ್ಟ್ ಗಾರ್ಡ್ ಗೆ 40 ವರ್ಷಗಳು ಪೂರ್ಣಗೊಳ್ಳಲಿವೆ. ಈ ಸಂದರ್ಭದಲ್ಲಿ ನಾನು ಕೋಸ್ಟ್ ಗಾರ್ಡ್‌ನ ಎಲ್ಲ ಅಧಿಕಾರಿಗಳು ಮತ್ತು ಯೋಧರಿಗೆ ರಾಷ್ಟ್ರಕ್ಕೆ ಅವರು ಸಲ್ಲಿಸಿದ ಅವರ ಸೇವೆಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕೋಸ್ಟ್ ಗಾರ್ಡ್ ನಮ್ಮ ದೇಶದಲ್ಲಿ ನಿರ್ಮಾಣಗೊಂಡು 126 ಹಡಗುಗಳು ಮತ್ತು 62 ವಿಮಾನಗಳೊಂದಿಗೆ ವಿಶ್ವದಲ್ಲೇ ಅತಿ ದೊಡ್ಡದಾದ 4 ಕೋಸ್ಟ್ ಗಾರ್ಡ್‌ಗಳಲ್ಲಿ ತನ್ನ ಸ್ಥಾನವನ್ನು ಗಿಟ್ಟಿಸಿಕೊಂಡಿದೆ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ವಯಂ ರಕ್ಷಾಮಃ ಎಂಬುದು ಕೋಸ್ಟ್ ಗಾರ್ಡ್‌ನ ಮಂತ್ರ. ತಮ್ಮ ಈ ಆದರ್ಶ ವಾಕ್ಯವನ್ನು ಪರಿಪೂರ್ಣವಾಗಿಸುತ್ತಾ, ದೇಶದ ಸಮುದ್ರ ತೀರಗಳ ಮತ್ತು ಸಮುದ್ರ ಪರಿಸರವನ್ನು ಸುರಕ್ಷಿತವಾಗಿಡಲು ಕೋಸ್ಟ್ ಗಾರ್ಡ್ ಯೋಧರು ಪ್ರತಿಕೂಲ ಪರಿಸ್ಥಿತಿಗಳಲ್ಲೂ ಹಗಲಿರುಳು ಕಾರ್ಯನಿರತರಾಗಿರುತ್ತಾರೆ. ಕಳೆದ ವರ್ಷ ಕೋಸ್ಟ್ ಗಾರ್ಡ್ ಸಿಬ್ಬಂದಿ ತಮ್ಮ ಜವಾಬ್ದಾರಿಗಳ ಜೊತೆಗೆ ನಮ್ಮ ದೇಶದ ಸಮುದ್ರ ತೀರವನ್ನು ಸ್ವಚ್ಛವಾಗಿಡುವ ಅಭಿಯಾನವನ್ನೇ ಕೈಗೆತ್ತಿಕೊಂಡರು ಮತ್ತು ಸಾವಿರಾರು ಜನ ಇದರಲ್ಲಿ ಭಾಗವಹಿಸಿದ್ದರು. ಸಮುದ್ರ ತೀರದ ರಕ್ಷಣೆ ಜೊತೆಗೆ ಸ್ವಚ್ಛತೆ ಬಗ್ಗೆ ಕೂಡ ಇವರು ಚಿಂತನೆ ನಡೆಸಿದ್ದರು. ಇದು ನಿಜವಾಗಿಯೂ ಪ್ರಶಂಸನಾರ್ಹ ಸಂಗತಿ. ಕೋಸ್ಟ್ ಗಾರ್ಡ್‌ನಲ್ಲಿ ಪುರುಷರ ಜೊತೆಗೆ ಮಹಿಳೆಯರೂ ಸಹ ಹೆಗಲೊಡ್ಡಿ ತಮ್ಮ ಕರ್ತವ್ಯಗಳನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾರೆ ಎಂಬುದು ಬಹುಶಃ ಬಹಳ ಜನರಿಗೆ ಗೊತ್ತಿಲ್ಲ. ಕೋಸ್ಟ್ ಗಾರ್ಡ್‌ನ ನಮ್ಮ ಮಹಿಳಾ ಅಧಿಕಾರಿಗಳು



ಪೈಲಟ್ ಆಗಿ, ಆಬ್ಸರ್ವರ್ ಆಗಿ ಅಷ್ಟೇ ಅಲ್ಲ ಹೋವರ್‌ಕ್ರಾಫ್ಟ್‌ನ ಮುಂದಾಳುಗಳಾಗಿ ಕೂಡಾ ಕಾರ್ಯ ನಿರ್ವಹಿಸುತ್ತಿದ್ದಾರೆ. ಭಾರತೀಯ ಕರಾವಳಿ ಗಡಿ ಸುರಕ್ಷತೆ ಮತ್ತು ಸಮುದ್ರದ ಸುರಕ್ಷೆ ಒಂದು ಮಹತ್ವ ಪೂರ್ಣ ವಿಷಯವಾಗಿದ್ದು ವಿಶ್ವ ಸ್ತರದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಹಾಗಾಗಿ ಭಾರತೀಯ ಕೋಸ್ಟ್ ಗಾರ್ಡ್‌ನ 40 ನೇ ವರ್ಷಾಚರಣೆಗೆ ಅಭಿನಂದನೆ ಸಲ್ಲಿಸುತ್ತೇನೆ.

ಫೆಬ್ರವರಿ 1 ರಂದು ವಸಂತ ಪಂಚಮಿ ಹಬ್ಬವಿದೆ. ವಸಂತ – ಸರ್ವಶ್ರೇಷ್ಠ ಋತು ಎಂದು ಸ್ವೀಕೃತವಾಗಿದೆ. ವಸಂತ, ಋತುಗಳ ರಾಜ. ನಮ್ಮ ದೇಶದಲ್ಲಿ ವಸಂತ ಪಂಚಮಿ ಸರಸ್ವತಿ ಪೂಜೆಯ ಒಂದು ದೊಡ್ಡ ಹಬ್ಬ. ವಿದ್ಯಾ ಆರಾಧನಾ ಸಮಯ ಎಂದು ನಂಬಲಾಗಿದೆ. ಇಷ್ಟೇ ಅಲ್ಲದೆ ವೀರರಿಗೆ ಪ್ರೇರಣಾ ಸಮಯವೂ ಆಗಿದೆ. 'ಮೇರಾ ರಂಗ ದೆ ಬಸಂತಿ ಚೋಲಾ' ಇದರಿಂದಲೇ ಪ್ರೇರಿತವಾದದ್ದು. ಈ ವಸಂತ ಪಂಚಮಿಯ ಶುಭ ಸಂದರ್ಭದಂದು ನನ್ನ ದೇಶ ಬಾಂಧವರಿಗೆ ಅನಂತ ಶುಭಾಷಯಗಳು.

ನನ್ನ ಪ್ರೀತಿಯ ದೇಶ ಬಾಂಧವರೇ, ಮನದಾಳದ ಮಾತಿನೊಂದಿಗೆ ಆಕಾಶವಾಣಿಯು ತನ್ನ ತತ್ವ ಸಿದ್ಧಾಂತಗಳೊಂದಿಗೆ ಎಂದಿಗೂ ಹೊಸ ರೂಪ ತುಂಬುತ್ತಾ ಬಂದಿದೆ. ಕಳೆದ ತಿಂಗಳಿನಿಂದ ನನ್ನ ಮನದಾಳದ ಮಾತು ಮುಗಿದ ತಕ್ಷಣವೇ ಪ್ರಾದೇಶಿಕ ಭಾಷೆಗಳಲ್ಲೂ ಮನದಾಳದ ಮಾತು ಕೇಳಿಸುವ ಕೆಲಸ ಆರಂಭಿಸಿದ್ದಾರೆ. ಇದಕ್ಕೆ ವ್ಯಾಪಕವಾದ ಸ್ವೀಕೃತಿ ಲಭಿಸಿದೆ. ದೂರ ದೂರದಿಂದ ಜನರು ಪತ್ರ ಬರೆಯುತ್ತಿದ್ದಾರೆ. ನಾನು ಆಕಾಶವಾಣಿಗೆ ಅವರ ಸ್ವಯಂ ಪ್ರೇರಿತ ಈ ಕೆಲಸಕ್ಕೆ ಅನಂತ ಅನಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ದೇಶ ಬಾಂಧವರೇ ನಿಮಗೂ ಅಭಿನಂದನೆ ತಿಳಿಸುತ್ತೇನೆ. ಮನದಾಳದ ಮಾತು ನನಗೆ ನಿಮ್ಮೊಂದಿಗೆ ಬೆರೆಯಲು ಅವಕಾಶ ನೀಡುತ್ತದೆ. ಅನಂತ ಶುಭ ಹಾರೈಕೆಗಳು, ಧನ್ಯವಾದ. ❑

ನೋಟು ಚಲಾವಣೆಯ ಅಮಾನ್ಯತೆಯನ್ನು ಹಣ ವಿನಿಮಯದ ಮತ್ತು ಋಣ ಪಾವತಿಯ ಕಾನೂನು ಬದ್ಧ ಮಾಧ್ಯಮವೆಂದು ಪರಿಗಣಿಸಲಾಗಿದೆ. ಚಲಾವಣೆಯಲ್ಲಿರುವ ಎಲ್ಲ ಮುಖ ಬೆಲೆಯ ಕಾಗದ ಹಣ ಕಾನೂನು ಬದ್ಧವಾಗಿರುತ್ತವೆ. ಕಾಗದ ನೋಟು ಮತ್ತು ನಾಣ್ಯಗಳ ಮಾನ್ಯತೆ ಆಯಾ ದೇಶಗಳ ಸರ್ಕಾರಗಳ ತೀರ್ಮಾನವನ್ನು ಅವಲಂಬಿಸಿರುತ್ತದೆ.

ಹಣದಲ್ಲಿ ಎರಡು ವಿಧ. 1. ಮಿತವಾದ ಕಾನೂನು ಬದ್ಧ ಹಣ: ಈ ರೂಪದ ಹಣವನ್ನು ಒಂದು ಮಿತಿಗೊಳಪಟ್ಟು ಋಣ ತೀರಿಸಲು ಪಾವತಿ ಮಾಡಬಹುದಾಗಿದೆ. ಒಬ್ಬ ವ್ಯಕ್ತಿ / ಸಂಸ್ಥೆ ಒಂದು ಮಿತಿ ಮೇಲ್ಪಟ್ಟು ಅದನ್ನು ಸ್ವೀಕರಿಸಲು ನಿರಾಕರಿಸಬಹುದಾಗಿದೆ ಹಾಗೂ ಆ ವ್ಯಕ್ತಿ ಸಂಸ್ಥೆ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ಭಾರತದಲ್ಲಿ ನಾಣ್ಯಗಳು ಮಿತಹಣವಾಗಿವೆ. 2. ಅಮಿತವಾದ ಕಾನೂನು ಬದ್ಧ ಹಣ : ಈ ರೂಪದ ಹಣವನ್ನು ಯಾವುದೇ ಮೊತ್ತದ ಋಣ ತೀರಿಸಲು ಪಾವತಿಸಬಹುದಾಗಿದೆ.

## ನಿಮಗಿದು ತಿಳಿದಿದೆಯೇ?

ಈ ಹಣವನ್ನು ಸ್ವೀಕರಿಸಲು ನಿರಾಕರಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದಾಗಿದೆ. ಭಾರತದಲ್ಲಿ ಕಾಗದ ನೋಟು ಅಮಿತವಾದ ಹಣವಾಗಿದೆ. ಋಣ / ಹೊರೆ ತೀರಿಸಲು ಪಾವತಿಸಲಾಗುವ ಕಾನೂನು ಬದ್ಧ ಸಲ್ಲಿಕೆಯೇ ಹಣ ಎನಿಸಿದೆ. ಅದು ಆಯಾ ದೇಶದ ಕಾನೂನು ಪಾವಿತ್ರ್ಯ ಹೊಂದಿರಬೇಕು ಎನ್ನುವುದು ಗಮನಿಸಲೇ ಬೇಕಾದ ಅಂಶ.

1934ರ ಆರ್‌ಬಿಐ ಕಾಯ್ದೆ, ಬ್ಯಾಂಕ್‌ಗಳಿಗೆ ನೋಟುಗಳನ್ನು ನೀಡುವ ಅಧಿಕಾರ ಹೊಂದಿದೆ. ಕಾಯ್ದೆ ಪ್ರಕಾರ ಭಾರತ ಯಾವುದೇ ಸ್ಥಳದಲ್ಲಿ ಪ್ರತಿ ಬ್ಯಾಂಕ್ ನೋಟು, ಅದರ ಮೇಲೆ ವ್ಯಕ್ತಪಡಿಸಲಾಗಿರುವ ಮೊತ್ತಕ್ಕೆ ಕಾನೂನು ಬದ್ಧ ಸಲ್ಲಿಕೆಯಾಗಿರುತ್ತದೆ.

ಮಾನ್ಯತೆ ಇರಲಿ, ರದ್ದತಿ / ಅಮಾನ್ಯತೆ ಇರಲಿ, ಅದು ಹಣದ / ಮುಖಬೆಲೆಯ ಕಾನೂನು ಬದ್ಧ ಸ್ಥಿತಿ ತಿಳಿಸುತ್ತದೆ. ಯಾವುದೇ ನೋಟಿನ ಚಲಾವಣೆಗೆ ಸರ್ಕಾರದ ಮಾನ್ಯತೆ ಅತಿ ಮುಖ್ಯ. ಒಂದು ಕಾಗದದ ತುಂಡು ಯಾವುದೇ ಋಣ ಪಾವತಿ ಅಥವಾ ವಹಿವಾಟಿನ ವಿನಿಮಯ ಮಾಧ್ಯಮವಾಗಲು ಅದಕ್ಕೆ ಪ್ರಶ್ನಾತೀತ ಸಾರ್ವತ್ರಿಕ ಸ್ವೀಕೃತಿಯ ಅಗತ್ಯವಾಗುತ್ತದೆ. ಇದಕ್ಕೆ ಕಾನೂನು ಬದ್ಧ ಸಲ್ಲಿಕೆಯ" ರೂಪ ನೀಡಲು ಆರ್‌ಬಿಐನ / ಸರ್ಕಾರದ "ಈ ಹಣದ ಧಾರಕ ವ್ಯಕ್ತಿಗೆ, ಸಾದರಪಡಿಸುವ ಧಾರಕಕ್ಕೆ ಸಮವಾದ ಮೊತ್ತವನ್ನು ಪಾವತಿಸುವುದನ್ನು ಖಾತರಿಪಡಿಸಲಾಗಿದೆ" ಎನ್ನುವ ಭರವಸೆಯ ಹೇಳಿಕೆ ಅತ್ಯಾವಶ್ಯಕ.

ಇತರೆ ರೂಪದ ಹಣ : ಈ ಸ್ವರೂಪದ ಹಣ ಸ್ವೀಕೃತಿಯಲ್ಲಿದ್ದರೂ, ಇದನ್ನು ಸ್ವೀಕರಿಸಲೇಬೇಕೆಂಬ ಕಾನೂನಿಲ್ಲ. ಚೆಕ್, ಬ್ಯಾಂಕ್ ಡ್ರಾಫ್ಟ್, ವಿನಿಮಯ ಬಿಲ್‌ಗಳು, ಪೋಸ್ಟಲ್ ಆರ್ಡರ್ ನೇರವಾಗಿ ಹಣವಲ್ಲ. ಆದರೆ, ಸ್ವೀಕೃತಿದಾರರ ಆಯ್ಕೆಗನುಗುಣವಾಗಿ ಮಾತ್ರ ಸ್ವೀಕರಿಸಲಾಗುತ್ತದೆ. ಹೀಗಾಗಿ ಇವು ಒಂದು ರೀತಿಯ ಇಚ್ಛಾ ಆಯ್ಕೆ ಹಣ ಆಗಿವೆ. ❑

## ನಗದುರಹಿತ ವ್ಯವಹಾರಗಳ ಅನುಕೂಲಗಳು

(44ನೇ ಪುಟದಿಂದ)

ಹಾಗೂ 2019ರ ಹೊತ್ತಿಗೆ ಕರ್ನಾಟಕದ ಎಲ್ಲಾ ಗ್ರಾಮಗಳೂ ನಗದುರಹಿತವಾಗುತ್ತವೆ.

7. ಮಂಡ್ಯ ಜಿಲ್ಲೆಯ ಚಂದಗಾಲು ಹಳ್ಳಿಯು ಮಂಡ್ಯ ಜಿಲ್ಲೆಯ ಮೊದಲು ನಗದುರಹಿತ ಗ್ರಾಮ ಎಂದು ಘೋಷಿತಗೊಂಡಿರುತ್ತದೆ
8. 321 ಕುಟುಂಬಗಳು ವಾಸಿಸುತ್ತಿರುವ ಕುಂದಾಪುರ ತಾಲೂಕಿನ ಹಲ್ಲಾಡಿ ಗ್ರಾಮವನ್ನು ಉಡುಪಿಜಿಲ್ಲೆಯ ಮೊದಲ ನಗದು ರಹಿತ ಗ್ರಾಮ ಎಂದು ಶೀಘ್ರದಲ್ಲಿ ಘೋಷಿಸಲಾಗುತ್ತಿದೆ.
9. ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಶೇರವಾಡ ಗ್ರಾಮವನ್ನು ಈ ಜಿಲ್ಲೆಯ ಮೊದಲ ನಗದು ರಹಿತ ಗ್ರಾಮ ಎಂದು ಘೋಷಿಸಲಾಗಿರುತ್ತದೆ. 4415 ಜನಸಂಖ್ಯೆ ಇರುವ ಈ ಗ್ರಾಮದಲ್ಲಿ 4003 ಜನರು ಬ್ಯಾಂಕ್ ಖಾತೆಗಳನ್ನು ಹೊಂದಿದ್ದು 3916 ಖಾತೆಗಳಿಗೆ ಆಧಾರ್ ಸಂಖ್ಯೆ ಇರುತ್ತದೆ ಮತ್ತು3803 ರುಪೇ ಕಾರ್ಡ್‌ಗಳನ್ನು ವಿತರಿಸಲಾಗಿದೆ
10. ಧಾರವಾಡ ಜಿಲ್ಲೆಯ ಒಂಬತ್ತು ಗ್ರಾಮಗಳನ್ನು ಶೀಘ್ರದಲ್ಲಿ ನಗದು ರಹಿತ ಗ್ರಾಮಗಳು ಎಂದು ಘೋಷಿಸಲಾಗುತ್ತಿದೆ
11. ಏರ್ ಟೆಲ್ ಕಂಪೆನಿಗೆ ಪೇಮೆಂಟ್ ಬ್ಯಾಂಕ್ ಪರವಾನಗಿ ಇದೀಗ ದೊರೆತಿದ್ದು ಕರ್ನಾಟಕದಲ್ಲಿ ಸುಮಾರು ಹತ್ತು ಸಾವಿರ ಗ್ರಾಮೀಣ ಹಾಗೂ ಬಡಾವಣೆ ಕೇಂದ್ರಗಳಲ್ಲಿ ಬ್ಯಾಂಕಿಂಗ್ ಸೌಲಭ್ಯಗಳನ್ನು ನೀಡಲು ಯೋಜನೆಗಳನ್ನು ರೂಪಿಸಲಾಗಿರುತ್ತದೆ
12. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಇನ್ನು ಮುಂದೆ ಬೆಂಗಳೂರು ಹಾಗೂ ಮೈಸೂರು ನಡುವೆ ಓಡಾಡುವ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳನ್ನು ನಗದು ರಹಿತವಾಗಿ ಓಡಿಸಲು ವ್ಯವಸ್ಥೆ ಮಾಡುತ್ತಿದೆ. ಈ ವ್ಯವಸ್ಥೆ ಚಾಲನೆಗೆ ಬಂದ ನಂತರ ಪ್ರಯಾಣಿಕರು ಕಾರ್ಡ್‌ಗಳ ಮೂಲಕ ಟಿಕೆಟ್‌ಗಳನ್ನು ಖರೀದಿಸಬೇಕಾಗುತ್ತದೆ.

ಈಗಾಗಲೇ ನಾವು ನೋಡುತ್ತಿರುವಂತೆ, ರಸ್ತೆ ಬದಿಯ ವ್ಯಾಪಾರಿಗಳು, ಸಣ್ಣ ವರ್ತಕರು, ಡಿಜಿಟಲ್ ಮಾಧ್ಯಮದ ಮೂಲಕ ವ್ಯಾಪಾರ ವಹಿವಾಟು ನಡೆಸುತ್ತಿರುವ ಬಗ್ಗೆ ಸುದ್ದಿಗಳನ್ನು ಓದುತ್ತಿದ್ದೇವೆ. ಪ್ರತಿಯೊಬ್ಬ ದೇಶವಾಸಿಯೂ ದೇಶದ ಪ್ರಗತಿಗಾಗಿ ಶ್ರಮಿಸಬೇಕಾಗಿರುತ್ತದೆ.

ಆದ್ದರಿಂದ, ಪ್ರತಿಯೊಬ್ಬ ನಾಗರಿಕರೂ ತಮ್ಮ ತಮ್ಮ ವ್ಯವಹಾರಗಳನ್ನು ಆದಷ್ಟು ಹೆಚ್ಚು ನಗದು ರಹಿತವಾಗಿ ನಡೆಸಿದರೆ, ಒಂದು ದೊಡ್ಡ ಜವಾಬ್ದಾರಿ ನಿಭಾಯಿಸಿದಂತಾಗುತ್ತದೆ. ದೇಶದ ಪ್ರಗತಿಗಾಗಿ ಮಾಡಬೇಕಾದ ಕೆಲಸದ ಜೊತೆಜೊತೆಗೇ, ವ್ಯಕ್ತಿಗತವಾಗಿಯೂ ಬಹಳ ಸಮಯವನ್ನು ಉಳಿಸಿಕೊಂಡು ನೆಮ್ಮದಿಯನ್ನು ಪಡೆಯಬಹುದಾಗಿದೆ. ❑

# ವಾರ್ತಾ ವಿಶೇಷ

ದೇಶಾದ್ಯಂತ ಆಯೋಜಿತವಾದ 24 ಡಿಜಿ ಧನ್ ಮೇಳಗಳಲ್ಲಿ 80 ಸಾವಿರ ಗ್ರಾಹಕರು ಹಾಗೂ 21 ಸಾವಿರ ವ್ಯಾಪಾರಸ್ಥರು, ಒಟ್ಟು 61 ಕೋಟಿ ರೂಪಾಯಿ ಬಹುಮಾನ ಗೆದ್ದಿದ್ದಾರೆ ಎಂದು ಕೇಂದ್ರದ ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಶ್ರೀ ರವಿಶಂಕರ್ ಪ್ರಸಾದ್ ಹೇಳಿದ್ದಾರೆ. ಇತ್ತೀಚೆಗೆ ನವ ದಿಲ್ಲಿಯಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿ, ಒಂದು ಕೋಟಿ 94 ಲಕ್ಷ ನಾಗರಿಕರು ಹಾಗೂ 5 ಲಕ್ಷ 93 ಸಾವಿರ ವ್ಯಾಪಾರಿಗಳಿಗೆ ಡಿಜಿಟಲ್ ಪಾವತಿ ವ್ಯವಸ್ಥೆ ಬಗ್ಗೆ ಕೇಂದ್ರದ ಮಾಹಿತಿ ತಂತ್ರಜ್ಞಾನ ಮತ್ತು ಇಲೆಕ್ಟ್ರಾನಿಕ್ಸ್ ವಿಭಾಗದಿಂದ ತರಬೇತಿ ನೀಡಲಾಗಿದೆ ಎಂದರು.

ವಿವಿಧ ವಯೋಮಾನದ, ಅನೇಕ ಉದ್ಯೋಗಗಳಲ್ಲಿ ತೊಡಗಿದ ಹಾಗೂ ಹಲವಾರು ಕ್ಷೇತ್ರಗಳ ಜನತೆ 'ಲಕ್ಕಿ ಗ್ರಾಹಕ್ ಯೋಜನೆ' ಹಾಗೂ 'ಡಿಜಿ–ಧನ್ ವ್ಯಾಪಾರ ಯೋಜನೆ'ಗಳಲ್ಲಿ ನಗದು ರಹಿತ ವ್ಯವಹಾರ ಆರಂಭಿಸಿ, ಬಹುಮಾನ ಗಳಿಸಿದ್ದಾರೆ. ಏಪ್ರಿಲ್ 14ರ ವರೆಗೆ ಈ ಯೋಜನೆ ಮುಂದುವರೆಯಲಿವೆ ಎಂದು ಸಚಿವ ಶ್ರೀ ರವಿಶಂಕರ್ ಪ್ರಸಾದ್ ಮಾಹಿತಿ ನೀಡಿದರು.

* * *

2016ರಲ್ಲಿ ಜಗತ್ತು ಗರಿಷ್ಠ ತಾಪಮಾನದ ದಿನಗಳನ್ನು ಕಂಡಿದ್ದು, ಇದು 2015ರ ಅತಿ ಹೆಚ್ಚಿನ ತಾಪಮಾನ ದಾಖಲೆಯನ್ನು ಹಿಂದಿಕ್ಕಿರುವುದಾಗಿ ವರದಿಯಾಗಿದೆ. ವಿಶ್ವ ಸಂಸ್ಥೆಯ ಹವಾಮಾನ ಸರ್ವೇಕ್ಷಣಾ ವಿಭಾಗ ಈ ಮಾಹಿತಿ ಒದಗಿಸಿದೆ. 2016ರಲ್ಲಿ ಜಾಗತಿಕ ಸರಾಸರಿ ತಾಪಮಾನ ಅದರ ಹಿಂದಿನ ದಾಖಲೆಗಿಂತ ಅಂದಾಜು 1.1 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಿತ್ತು. ಜಾಗತಿಕ ಹವಾಮಾನ ಸರ್ವೇಕ್ಷಣಾ ಸಂಸ್ಥೆ ಈ ಅಧ್ಯಯನ ವರದಿಯನ್ನು ಸಿದ್ಧಪಡಿಸಿದೆ. ವಾತಾವರಣದಲ್ಲಿ ಇಂಗಾಲದ ಡೈ ಆಕ್ಸೈಡ್ ಮತ್ತು ಮಿಥೇನ್ ಪ್ರಮಾಣ ಹೆಚ್ಚಾಗುತ್ತಿರುವುದೇ ಇದಕ್ಕೆ ಕಾರಣ. ಗ್ರೀನ್‌ಲ್ಯಾಂಡ್ ಹಿಮಗಡ್ಡೆಗಳು ಅವಧಿಗೆ ಮುಂಚಿತವಾಗಿ ಮತ್ತು ವೇಗವಾಗಿ ಕರಗುತ್ತಿರುವುದರ ಪರಿಣಾಮವಾಗಿ ಜಾಗತಿಕ ಸಾಗರ ಮಟ್ಟಗಳು ಹೆಚ್ಚುತ್ತಿವೆ.

* * *

ಕರ್ನಾಟಕ ರಾಜ್ಯದ ಹಾಲು ಉತ್ಪಾದಕರಿಗೆ ಕಳೆದ ಡಿಸೆಂಬರ್‌ನಿಂದ ಜಾರಿಗೆ ಬರುವಂತೆ ಪ್ರತಿ ಲೀಟರ್ ಹಾಲಿಗೆ 4 ರೂಪಾಯಿಯಿಂದ 5 ರೂಪಾಯಿ ಪ್ರೋತ್ಸಾಹ ಧನವನ್ನು ನೀಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಪ್ರೋತ್ಸಾಹ ಧನವನ್ನು ಫಲಾನುಭವಿಗಳ ಖಾತೆಗೆ ನೇರ ಹಣ ವರ್ಗಾವಣೆ ಮುಖಾಂತರ ನೀಡಲು ಉದ್ದೇಶಿಸಿಲಾಗಿದೆ. ಹಾಲಿನ ಪ್ರೋತ್ಸಾಹ ಧನವು ಆಧಾರ್ ಸಂಖ್ಯೆ ಜೋಡಣೆ ಹೊಂದಿರುವ ಖಾತೆಗಳಿಗೆ ಮಾತ್ರ ಜಮೆಯಾಗುತ್ತದೆ ಎಂದು ಪಶು ಸಂಗೋಪನಾ ಇಲಾಖೆ ತಿಳಿಸಿದೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.230/-; 2 yrs, Rs.430/- ; 3 yrs, Rs.610/-

Bal Bharati : 1 yr. Rs.160/-; 2 yrs, Rs.300/- ; 3 yrs, Rs.420/-

**(Circle the magazine of your choice and the period of subscription)**

DD/PO/MO No.______________________________ date ____________

Name (in block letters) : ______________________________

Subscriber's profile : Student / Academician / Institution / Others

Address : ______________________________

______________________________

PIN : ____________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodhi Road, New Delhi – 110 003.

Please allow us 4 to 6 weeks for the dispatch of the first issue.
P.S. : For Renewal / change in address, please quote your subscription number

**To Subscribe Online**
*Log on to*
**http://publicationsdivision.nic.in/**,
*in collaboration with* **bharatkosh.gov.in**